# 2008 - 09 ನೇ ಸಾಲಿನಲ್ಲಿ ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಸಭೆಯ ನಡವಳಿಗಳು.



| ಕ್ರ ಸಂ. | ಸಭೆಯ ವಿವರ | ಪುಟ ಸಂಖ್ಯೆ | |
|---|---|---|---|
| | | ರಿಂದ | ವರೆಗೆ |
| 1 | ದಿನಾಂಕ: 21-06-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳು. | 2 | 10 |
| 2 | ದಿನಾಂಕ: 07-08-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳು. | 11 | 17 |
| 3 | ದಿನಾಂಕ: 27-09-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳು. | 18 | 32 |
| 4 | ದಿನಾಂಕ: 05-12-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು. | 33 | 45 |
| 5 | ದಿನಾಂಕ: 15-01-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು. | 46 | 63 |
| 6 | ದಿನಾಂಕ: 06-03-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು. | 64 | 80 |

# ದಿನಾಂಕ: 21-06-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳು.

## ಸಭೆಯಲ್ಲಿ ಹಾಜರಿದ್ದ ಸದಸ್ಯರು.

| | | |
|---|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಅಧ್ಯಕ್ಷರು |
| 2 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 3 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 4 | ಸಹಾಯಕ ನಿರ್ದೆಶಕರು,<br>ನಗರ ಯೋಜನಾ ಇಲಾಖೆ, ಚಿಕ್ಕಮಗಳೂರು. | ನಗರ ಯೋಜನಾ ಸದಸ್ಯರು |
| 5 | ಕಾರ್ಯಪಾಲಕ ಇಂಜಿನಿಯರ್,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಇಂಜಿನಿಯರ್ ಸದಸ್ಯರು |
| 6 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 7 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,<br>ಹಾಸನ (ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 8 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 9 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

## ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.

| | | |
|---|---|---|
| 1 | ಮಾನ್ಯ ಶ್ರೀ. ಡಿ. ಎಂ. ಪುಟ್ಟೇಗೌಡ,<br>ವಿಧಾನ ಪರಿಷತ್ ಸದಸ್ಯರು, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 3 | ಸೈಂಟಿಫಿಕ್ ಆಫೀಸರ್,<br>ಪ್ರಕೃತಿ ಮತ್ತು ಪರಿಸರ ಇಲಾಖೆ, ಬೆಂಗಳೂರು. | ಸದಸ್ಯರು |
| 4 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. | ಸದಸ್ಯರು |

**ವಿಷಯ ನಂ 1.**

ದಿನಾಂಕ: 25-03-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳನ್ನು ಪರಿಶೀಲಿಸಿ ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ:**

ದಿನಾಂಕ: 25-03-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದು.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಪ್ರಾಧಿಕಾರದ ಸಭೆಯು ಸಮಾವೇಶಗೊಂಡ ನಂತರ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಮಾತನಾಡುತ್ತ, ದಿನಾಂಕ: 25-03-2008 ರ ವಿಶೇಷ ಸಭೆಯ ವಿಷಯ ನಂ. 2 ರಲ್ಲಿ ಚಿಕ್ಕಮಗಳೂರು ನಗರದ ಪೋಲೀಸ್ ಅಧೀಕ್ಷಕರ ಕಛೇರಿಯ ಮುಂಭಾಗದಲ್ಲಿ ರೂ. 3.50 ಲಕ್ಷ ರೂಗಳ ವೆಚ್ಚದಲ್ಲಿ ವೃತ್ತವನ್ನು ಪ್ರಾಧಿಕಾರದ ವತಿಯಿಂದ ನಿರ್ಮಿಸುವಂತೆ ಸಭೆಯಲ್ಲಿ ಅನುಮೋದನೆ ನೀಡಲಾಗಿದ್ದು ಅದರಂತೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು ಸದರೀ ವೃತ್ತ ನಿರ್ಮಿಸುವ ಕಾಮಗಾರಿಗೆ ರೂ. 3.50 ಲಕ್ಷ ಮೊತ್ತವನ್ನು ನೀಡುವಂತೆ ಆದೇಶ ನೀಡಲಾಗಿತ್ತು, ಆದರೆ ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯಿಂದ ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ ಚಿಕ್ಕಮಗಳೂರು ರವರಿಗೆ ವೃತ್ತ ನಿರ್ಮಾಣದ ಕಾಮಗಾರಿಗೆ ಸಂಬಂಧಿಸಿದ ವಿವರವಾದ ಯೋಜನಾ ವರದಿ ಹಾಗೂ ನಕ್ಷೆಯನ್ನು ಈ ಕಛೇರಿಗೆ ಸಲ್ಲಿಸುವಂತೆಯೂ, ಸಲ್ಲಿಸಿದ ಕೂಡಲೇ ರೂ. 3.50 ಲಕ್ಷ ಹಣ ಬಿಡುಗಡೆ ಮಾಡಲಾಗುವುದೆಂದು ಈ ಕಛೇರಿ ಪತ್ರದ ಸಂಖ್ಯೆ. ನಅಪ್ರಾಚಿ : 04 : 08 - 09 : 311, ದಿನಾಂಕ: 07-06-2008 ರಲ್ಲಿ ಪತ್ರ ಬರೆಯಲಾಗಿತ್ತು, ಆದರೆ ಸದರೀ ವೃತ್ತ ನಿರ್ಮಾಣ ಕಾಮಗಾರಿಗಾಗಿ ರೂ. 3.50 ಲಕ್ಷ ಹಣವನ್ನು ಕೂಡಲೇ ನಿರ್ಮಿತಿ ಕೇಂದ್ರಕ್ಕೆ ಬಿಡುಗಡೆ ಮಾಡಬೇಕೆಂದು ನಂತರ ಯೋಜನಾ ವರದಿ ನಕ್ಷೆ ಇತ್ಯಾದಿಗಳನ್ನು ಅವರಿಂದ ಪಡೆಯುವಂತೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರು, ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ ರವರಿಗೆ ಸೂಚನೆ ನೀಡಿದರು ಮತ್ತು ಉಳಿದಂತೆ ವಿಶೇಷ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 2.**

ಸಮಾಜ ಕಲ್ಯಾಣ ಇಲಾಖೆಯ / ಹಿಂದುಳಿದ ಮತ್ತು ಅಲ್ಪಸಂಖ್ಯಾತರ ಇಲಾಖೆಯ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣಕ್ಕೆ ನಾಗರೀಕ ಸೌಲಭ್ಯದ ನಿವೇಶನವನ್ನು ಹಂಚಿಕೆ ಮಾಡುವ ಕುರಿತು.

**ಟಿಪ್ಪಣಿ:**

ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತ ಇಲಾಖೆ, ಚಿಕ್ಕಮಗಳೂರು. ಇವರ ಪತ್ರದ ನಂ. ಹಿಂವಇ: ಬಿ4: ಸಿಆರ್35: 2007-08 ದಿನಾಂಕ: 12-06-2008. ರಲ್ಲಿ ಚಿಕ್ಕಮಗಳೂರು ನಗರಕ್ಕೆ 50 ಸಂಖ್ಯೆ ಬಲದ ಅಲ್ಪಸಂಖ್ಯಾತ ಮೆಟ್ರಿಕ್ ನಂತರದ ಬಾಲಕಿಯ ವಿದ್ಯಾರ್ಥಿ ನಿಲಯ ಸರ್ಕಾರದಿಂದ ಮಂಜೂರಾಗಿದ್ದು. ಈ ವಿದ್ಯಾರ್ಥಿ ನಿಲಯಕ್ಕೆ ಸ್ವಂತ ಕಟ್ಟಡ ನಿಮಾಣ ಮಾಡಲು ರೂ. 60.00 ಲಕ್ಷಗಳನ್ನು ಸರ್ಕಾರ ಬಿಡುಗಡೆ ಮಾಡಿದೆ. ಈ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ ನಗರಾಭಿವೃದ್ಧಿ ಪ್ರಾಧಿಕಾರದ ವಶದಲ್ಲಿರುವ ಹಿರೇಮಗಳೂರು ಗ್ರಾಮದ ಸರ್ವೆ ನಂ. 530 ಹೊಸ ಸರ್ವೆ ನಂ. 1047 ಕಡೂರು ಮಂಗಳೂರು ರಸ್ತೆ, ಚಿಕ್ಕಮಗಳೂರುನಲ್ಲಿನ ನಾಗರೀಕ ಸೌಲಭ್ಯಕ್ಕೆ ಮೀಸಲಿಡುವ,

1. ಪೂರ್ವ–ಪಶ್ಚಿಮ– 68 x 73 ಅಡಿಗಳು
   ಉತ್ತರ–ದಕ್ಷಿಣ 77 x 77 ಅಡಿಗಳು
2. ಪೂರ್ವ–ಪಶ್ಚಿಮ– 78 x 85 ಅಡಿಗಳು
   ಉತ್ತರ–ದಕ್ಷಿಣ 68 x 60 ಅಡಿಗಳು

ಮೇಲಿನ ಎರಡು ನಿವೇಶನಗಳನ್ನು ಅಲ್ಪಸಂಖ್ಯಾತ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯದ ಕಟ್ಟಡ ನಿರ್ಮಾಣಕ್ಕೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರು ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಮೇಲ್ಕಂಡ ನಾಗರೀಕ ಸೌಲಭ್ಯದ ನಿವೇಶನಗಳನ್ನು ಈ ಮುಂದಿನ ಉದ್ದೇಶಕ್ಕೆ ಮೀಸಲಿಡಲಾಗಿತ್ತು. ವಿವರ ಈ ಮುಂದಿನಂತೆ ಇದೆ.

1. $\frac{21.33+23.46}{2} \times \frac{24.47+20.72}{2}$ ಒಟ್ಟು 501.86 ಚ.ಮೀ. – **ಬ್ಯಾಂಕ್ ಉದ್ದೇಶಕ್ಕೆ.**
2. $\frac{21.33+18.28}{2} \times \frac{25.90+24.07}{2}$ ಒಟ್ಟು 468.21 ಚ.ಮೀ. – **ಅಂಚೆ ಕಛೇರಿ ಉದ್ದೇಶಕ್ಕೆ.**

ಬ್ಯಾಂಕ್ ಉದ್ದೇಶಕ್ಕೆ ಮೀಸಲಿಟ್ಟಿದ್ದ ನಿವೇಶನಕ್ಕೆ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ: 06-12-2005 ರ ಗಿರಿ ವಾರ್ತಾ ಪತ್ರಿಕೆಯಲ್ಲಿ ಮತ್ತು ಮಲೆನಾಡು ಸಂಗಾತಿ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ನಿವೇಶನ ಕೋರಿ ಯಾವುದೇ ಸಂಘ ಸಂಸ್ಥೆಗಳಿಂದ ಅರ್ಜಿ ಬಂದಿರುವುದಿಲ್ಲ. ಅಂಚೆ ಕಛೇರಿ ಉಪಯೋಗಕ್ಕೆ ಮೀಸಲ್ಲಿಟ್ಟಿದ್ದ ನಿವೇಶನವನ್ನು ಪಡೆಯುವಂತೆ ಅದೀಕ್ಷಕರು ಪ್ರದಾನ ಅಂಚೆ ಕಛೆರಿ ಚಿಕ್ಕಮಗಳೂರು ಇವರಿಗೆ ದಿನಾಂಕ: 07-12-2005 ರಲ್ಲಿ ಪತ್ರ ಬರೆಯಲಾಗಿತ್ತು. ಸದರಿಯವರಿಂದಲೂ ಸಹ ಬೇಡಿಕೆ ಬಂದಿರುವುದಿಲ್ಲ. ಈ ನಿವೇಶನಗಳನ್ನು ಮರುಹಂಚಿಕೆ ಮಾಡಬೇಕಾದಲ್ಲಿ ಉದ್ದೇಶ ಬದಲಾವಣೆ ಮಾಡಿ ವಿದ್ಯಾರ್ಥಿನಿಲಯ ಉದ್ದೇಶಕ್ಕೆ ಮೀಸಲಿಡಬೇಕಾಗಿರುತ್ತದೆ ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾದಿಕಾರಗಳ (ನಾಗರೀಕ ಸೌಕರ್ಯ ನಿವೇಶ ಹಂಚಿಕೆ) ನಿಯಮಗಳು– 1991 ರ ಪ್ರಕರಣ 3 (1) ರ ಅನ್ವಯ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ನಿಗಮ ಅಥವಾ ಒಂದುನಿಕಾಯ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳಿಗೆ ಯಾವುದೇ ಪ್ರದೇಶದಲ್ಲಿ ದೊರಕುವಂತಹ ಪೌರಸೌಕರ್ಯ ನಿವೇಶನಗಳಿಂದ ನಿವೇಶನಗಳ ಅಂಥ ಸಂಖ್ಯೆಯನ್ನು ಕಾಯ್ದಿರಿಸಬಹುದಾಗಿರುತ್ತದೆ. ಮತ್ತು ಪ್ರಕರಣ 4 ರನ್ವಯ 30 ವರ್ಷಗಳ ಗುತ್ತಿಗೆ ಆದಾರದ ಮೇಲೆ ಹಂಚಿಕೆ ಮಾಡಬಹುದಾಗಿರುತ್ತದೆ. ಪ್ರಕರಣ 8 ರನ್ವಯ ನಿವೇಶನದ ಗುತ್ತಿಗೆ ಮೊಬ್ಬಲಗನ್ನು ಪ್ರಾಧಿಕಾರವು ನಿಗದಿಪಡಿಸಬೇಕಾಗಿದ್ದು. ಒಂದು ಚದರ ಮೀಟರ್ ನಿವೇಶನದ ಮೌಲ್ಯವನ್ನು ಆ ಪ್ರದೇಶದಲ್ಲಿ ಅತಿದೊಡ್ಡ ಗೃಹ ನಿವೇಶನದ ಪ್ರತಿ ಚದುರ ಮೀಟರ್ ಮೌಲ್ಯಕ್ಕೆ ಕಡಿಮೆಯಾಗದಂತೆ ನಿಗದಿ ಪಡಿಸಬೇಕಾಗಿರುತ್ತದೆ. ಉಪ ಪ್ರಕರಣ (4) (ಸಿ) ರನ್ವಯ ಗುತ್ತಿಗೆ ಮೊಬ್ಬಲಿಗಿನ ಶೇಕಡ 50 ರದರದಲ್ಲಿ ಹಂಚಿಕೆ ಮಾಡಬಹುದಾಗಿರುತ್ತದೆ.

ದಿನಾಂಕ: 28-02-2001 ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ನಂ. 8 ರಲ್ಲಿ ವಿದ್ಯಾರ್ಥಿ ನಿಲಯ ನಿರ್ಮಾಣಕ್ಕಾಗಿ ಸಮಾಜ ಕಲ್ಯಾಣ ಇಲಾಖೆಗೆ ಹಂಚಿಕೆ ಮಾಡುವ ಸಲುವಾಗಿ, ಹಿರೇಮಗಳೂರು ಗ್ರಾಮದ ಸರ್ವೆ ನಂ. 503 ಮತ್ತಿತರೆ ಸರ್ವೆನಂಬರುಗಳಲ್ಲಿನ ಚದುರ ಅಡಿ ಒಂದಕ್ಕೆ ರೂ. 120 ಬೆಲೆಯನ್ನು ನಿಗದಿಪಡಿಸಿದ್ದು, ಪ್ರಾಧಿಕಾರವು ನಿಗದಿ ಪಡಿಸಿದ್ದ ದರಕ್ಕೆ ಸರ್ಕಾರದ ಪತ್ರದ ನಂ.ನಅಇ : 501 : ಮೈಅಪ್ರಾ 2001 ದಿನಾಂಕ: 30-03-2002 ರಲ್ಲಿ ಮಂಜೂರಾತಿ ನೀಡಿರುತ್ತದೆ.

ಸಾಮಾನ್ಯವಾಗಿ ಮಾರುಕಟ್ಟೆ ದರದಂತೆ ಸದರಿ ಪ್ರದೇಶದಲ್ಲಿ ವಸತಿ ನಿವೇಶನಕ್ಕೆ ಚದುರ ಅಡಿ ಒಂದಕ್ಕೆ ರೂ. 200.00 ಗಳಿರುತ್ತೆ. ಆದರೇ ಹಿರಿಯ ಉಪನೋಂದನಾಧಿಕಾರಿಗಳ ಕಛೇರಿಯ ವ್ಯಾಪ್ತಿಗೆ ಒಳಪಡುವ ಸ್ತಿರಾಸ್ತಿಗಳ ಪರಿಷ್ಕೃತ ದರ ಪಟ್ಟಿಯಂತೆ ವಾಸೋಪಯೋಗಿ ನಿವೇಶನಕ್ಕೆ ಚದುರ ಅಡಿಗೆ ರೂ. 100.00 ಬೆಲೆ ನಿಗದಿಪಡಿಸಲಾಗಿದೆ.

ಕಡೂರು ಮಂಗಳೂರು ರಸ್ತೆಯಲ್ಲಿ ಬರುವ ಹಿರೇಮಗಳೂರು ಗ್ರಾಮದ ಸರ್ವೆ ನಂ. 530 ಹೊಸ ನಂ. 1037 ರಲ್ಲಿನ ನಾಗರೀಕ ಸೌಲಭ್ಯದ ನಿವೇಶನದ ವಿವರಗಳು ಈ ಮುಂದಿನಂತೆ ಇರುತ್ತದೆ.

| ಕ್ರ.ಸಂ. | ಪೂರ್ವದಿಂದ ಪಶ್ಚಿಮಕ್ಕೆ ಮೀಟರ್‌ಗಳಲ್ಲಿ | ಉತ್ತರದಿಂದ ದಕ್ಷಿಣಕ್ಕೆ ಮೀಟರ್‌ಗಳಲ್ಲಿ | ಒಟ್ಟು ಚದರ ಮೀಟರ್‌ಗಳಲ್ಲಿ |
|---|---|---|---|
| 1. | 21.33+23.46<br>2 2 | 24.47+20.72<br>2 2 | 501.86 |

**ಚಕ್ ಬಂದಿ**

ಪೂರ್ವಕ್ಕೆ : 9.00 ಮೀ. ರಸ್ತೆ
ಪಶ್ಚಿಮಕ್ಕೆ : ಖಾಸಗೀ ಸ್ವತ್ತು. ಸರ್ವೆ ನಂ. 783.
ಉತ್ತರಕ್ಕೆ : ಹೌಸಿಂಗ್‌ಬೋರ್ಡ್ ಮನೆಗಳು.
ದಕ್ಷಿಣಕ್ಕೆ : ಕಾಲುದಾರಿ.

| ಕ್ರ.ಸಂ. | ಪೂರ್ವದಿಂದ ಪಶ್ಚಿಮಕ್ಕೆ ಮೀಟರ್‌ಗಳಲ್ಲಿ | ಉತ್ತರದಿಂದ ದಕ್ಷಿಣಕ್ಕೆ ಮೀಟರ್‌ಗಳಲ್ಲಿ | ಒಟ್ಟು ಚದರ ಮೀಟರ್‌ಗಳಲ್ಲಿ |
|---|---|---|---|
| 1. | 21.33+18.28<br>2 2 | 25.90+24.07<br>2 2 | 468.21 |

**ಚಕ್ ಬಂದಿ**

ಪೂರ್ವಕ್ಕೆ : ಖಾಸಗೀ ಜಮೀನು ಸರ್ವೆ ನಂ. 770.
ಪಶ್ಚಿಮಕ್ಕೆ : 9.00 ಮೀ. ರಸ್ತೆ
ಉತ್ತರಕ್ಕೆ : ಹೌಸಿಂಗ್‌ಬೋರ್ಡ್ ಮನೆಗಳು.
ದಕ್ಷಿಣಕ್ಕೆ : ಕಾಲುದಾರಿ.

ಈ ಮೇಲ್ಕಂಡ ಎರಡು ನಾಗರೀಕ ಸೌಲಭ್ಯದ ನಿವೇಶನಗಳನ್ನು, ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆ, ಚಿಕ್ಕಮಗಳೂರು ಇವರಿಗೆ, ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕಿಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಾಣ ಮಾಡುವ ಸಲುವಾಗಿ ನೀಡಲು, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯದ ನಿವೇಶನಗಳ ಹಂಚಿಕೆ) ನಿಯಮಗಳು 1991 ರ ಪ್ರಕರಣ 3 ಉಪಪ್ರಕರಣ (1) ರನ್ವಯ ನಿವೇಶನವನ್ನು ಕಾಯ್ದಿರಿಸಿ, ಪ್ರಕರಣ 8 ಉಪಪ್ರಕರಣ (1) ರನ್ವಯ ಗುತ್ತಿಗೆ ಮೊಬಲಗನ್ನು ನಿಗದಿ ಪಡಿಸಿ, ಉಪ ಪ್ರಕರಣ (4) (ಸಿ) ರನ್ವಯ ಗುತ್ತಿಗೆ ಮೊಬಲಿಗಿನ ಶೇಕಡ 50 ರ ದರದಂತೆ ನಿಗದಿ ಪಡಿಸಿ, ಪ್ರಕರಣ 4 ರ ಅನ್ವಯ ಪ್ರಾಧಿಕಾರವು ಗುತ್ತಿಗೆ ಆದಾರದ ಮೇಲೆ ನಿರ್ಧಿಷ್ಟ ಪಡಿಸಬಹುದಾದಂಥ ನಿಬಂದನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ : 174 : ಬೆಮಪ್ರಾ : 2004 ದಿನಾಂಕ: 24-06-2004 ರನ್ವಯ ಪ್ರಾಧಿಕಾರವೇ ನಾಗರೀಕ ಸೌಲಭ್ಯದ ನಿವೇಶನವನ್ನು ಹಂಚಿಕೆ ಮಾಡಬಹುದಾಗಿರುತ್ತದೆ. ಪ್ರಾಧಿಕಾರದ ಅನುಮೋದನೆಗಾಗಿ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪ ಸಂಖ್ಯಾತರ ಇಲಾಖೆ ಚಿಕ್ಕಮಗಳೂರು ಇವರ ದಿನಾಂಕ: 12-06-2008 ರ ಅರ್ಜಿಯಲ್ಲಿ ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕೀಯರ ವಿದ್ಯಾರ್ಥಿ ನಿಲಯ ಕಟ್ಟಡ ನಿರ್ಮಿಸಲು ಹಿರೇಮಗಳೂರು ಗ್ರಾಮದ ಸರ್ವೆ ನಂ. 530 ಹೊಸ ನಂ. 1047 ಕೆ. ಎಂ. ರಸ್ತೆಯಲ್ಲಿರುವ 501.86 ಚದರ ಮೀಟರ್ ಮತ್ತು 468.21 ಚದರ ಮೀಟರ್ ವಿಸ್ತೀರ್ಣವಿರುವ ನಾಗರೀಕ ಸೌಕರ್ಯದ ನಿವೇಶನ ಹಂಚಿಕೆ ಮಾಡಬೇಕೆಂದು ಕೋರಿರುವ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು.

ಈ ಎರಡು ನಿವೇಶನಗಳನ್ನು ಕ್ರಮವಾಗಿ ಬ್ಯಾಂಕ್ ಉದ್ದೇಶಕ್ಕೆ ಮತ್ತು ಅಂಚೆ ಕಛೇರಿ ಉದ್ದೇಶಕ್ಕೆ ಮೀಸಲಿಟ್ಟಿದ್ದು ಈ ನಿವೇಶನಗಳನ್ನು ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಿದಾಗ್ಯೂ ನಿವೇಶನ ಕೋರಿ ಯಾವುದೇ ಅರ್ಜಿ ಬಂದಿಲ್ಲದೇ ಇರುವ ಬಗ್ಗೆ ಸಭೆಯಲ್ಲಿ ಪರಿಶೀಲಿಸಿ ಸದರೀ ನಿವೇಶನಗಳ ಉಪಯೋಗದ ಉದ್ದೇಶವನ್ನು ವಿದ್ಯಾರ್ಥಿ ನಿಲಯ ಉದ್ದೇಶಕ್ಕೆ ಬದಲಾವಣೆ ಮಾಡಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯದ ನಿವೇಶನಗಳ ಹಂಚಿಕೆ) ನಿಯಮಗಳು 1991 ರ ಪ್ರಕರಣ 3 ಉಪ ಪ್ರಕರಣ 1 ರ ಅನ್ವಯ ರಾಜ್ಯ ಸರ್ಕಾರಕ್ಕೆ ಕಾಯ್ದಿರಿಸಿ ಪ್ರಕರಣ 8 ರ ಅನ್ವಯ ಚದರ ಮೀಟರ್ ಒಂದಕ್ಕೆ ರೂ. 1292.00 ಗಳನ್ನು ನಿಗದಿಪಡಿಸಿ ಪ್ರಕರಣ 3 (ಸಿ) ರನ್ವಯ ಈ ಮೌಲ್ಯದಲ್ಲಿ ಶೇಕಡ 50 ರಷ್ಟು ನಿಗದಿಪಡಿಸಿ ಚದುರ ಮೀಟರ್ ಒಂದಕ್ಕೆ ರೂ. 646.00 (ರೂ. 626666.00) ಗಳನ್ನು ನಿಗದಿಪಡಿಸಿ ಪ್ರಕರಣ 4 ರ ಅನ್ವಯ 30 ವರ್ಷಗಳ ಗುತ್ತಿಗೆ ಆದಾರದ ಮೇಲೆ ಹಿರೇಮಗಳೂರು ಗ್ರಾಮದ ಸರ್ವೆ ನಂ. 530 ಹೊಸ ನಂ. 1047 ರಲ್ಲಿನ ಈ ಮುಂದಿನ ಚಕ್ಕುಬಂದಿಯನ್ನು ಒಳಗೊಂಡಂತೆ ಇರುವ

| ಕ್ರ.ಸಂ. | ಪೂರ್ವದಿಂದ ಪಶ್ಚಿಮಕ್ಕೆ ಮೀಟರ್‌ಗಳಲ್ಲಿ | ಉತ್ತರದಿಂದ ದಕ್ಷಿಣಕ್ಕೆ ಮೀಟರ್‌ಗಳಲ್ಲಿ | ಒಟ್ಟು ಚದರ ಮೀಟರ್‌ಗಳಲ್ಲಿ |
|---|---|---|---|
| 1. | 21.33+23.46<br>2 2 | 24.47+20.72<br>2 2 | 501.86 |

**ಚಕ್ ಬಂದಿ**

ಪೂರ್ವಕ್ಕೆ : 9.00 ಮೀ. ರಸ್ತೆ
ಪಶ್ಚಿಮಕ್ಕೆ : ಖಾಸಗೀ ಸ್ವತ್ತು. ಸರ್ವೆ ನಂ. 783.
ಉತ್ತರಕ್ಕೆ : ಹೌಸಿಂಗ್‌ಬೋರ್ಡ್ ಮನೆಗಳು.
ದಕ್ಷಿಣಕ್ಕೆ : ಕಾಲುದಾರಿ.

| ಕ್ರ.ಸಂ. | ಪೂರ್ವದಿಂದ ಪಶ್ಚಿಮಕ್ಕೆ ಮೀಟರ್‌ಗಳಲ್ಲಿ | ಉತ್ತರದಿಂದ ದಕ್ಷಿಣಕ್ಕೆ ಮೀಟರ್‌ಗಳಲ್ಲಿ | ಒಟ್ಟು ಚದರ ಮೀಟರ್‌ಗಳಲ್ಲಿ |
|---|---|---|---|
| 1. | 21.33+18.28<br>2 2 | 25.90+24.07<br>2 2 | 468.21 |

**ಚಕ್ ಬಂದಿ**

ಪೂರ್ವಕ್ಕೆ : ಖಾಸಗೀ ಜಮೀನು ಸರ್ವೆ ನಂ. 770.
ಪಶ್ಚಿಮಕ್ಕೆ : 9.00 ಮೀ. ರಸ್ತೆ
ಉತ್ತರಕ್ಕೆ : ಹೌಸಿಂಗ್‌ಬೋರ್ಡ್ ಮನೆಗಳು.
ದಕ್ಷಿಣಕ್ಕೆ : ಕಾಲುದಾರಿ.

ನಾಗರೀಕ ಸೌಲಭ್ಯದ ನಿವೇಶನವನ್ನುಳ ಸರ್ಕಾರದ ಸುತ್ತೋಲೆ ಸಂಖ್ಯೆ.ನಅಇ : 174 : ಬೆಮಪ್ರಾ : 2004, ದಿನಾಂಕ: 24-06-2004 ರನ್ವಯ " ಅಲ್ಪಸಂಖ್ಯಾತರ ಮೆಟ್ರಿಕ್ ನಂತರದ ಬಾಲಕೀಯರ ವಿದ್ಯಾರ್ಥಿ ನಿಲಯದ ಕಟ್ಟಡ ಕಟ್ಟುವ ಉದ್ದೇಶಕ್ಕಾಗಿ ಜಿಲ್ಲಾ ಅಧಿಕಾರಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಇಲಾಖೆ ಚಿಕ್ಕಮಗಳೂರು ಇವರಿಗೆ ಹಂಚಿಕೆ ಮಾಡಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ಚಿಕ್ಕಮಗಳೂರು ನಗರದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಏರ್‌ಸ್ಟ್ರೀಪ್‌ಗೆ ಪ್ರಾಧಿಕಾರದ ವತಿಯಿಂದ ವಿದ್ಯುತ್ ಸಂಪರ್ಕ ಕಲ್ಪಿಸಲು ರೂ. 1.25 ಲಕ್ಷ ಬಿಡುಗಡೆ ಮಾಡಿರುವ ಬಗ್ಗೆ ಸಭೆಯಲ್ಲಿ ಸ್ಥಿರೀಕರಿಸುವ ಕುರಿತು.

**ಟಿಪ್ಪಣಿ:**

ಚಿಕ್ಕಮಗಳೂರು ನಗರದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಏರ್‌ಸ್ಟ್ರಿಪ್‌ಗೆ ಪ್ರಾಧಿಕಾರದ ವತಿಯಿಂದ ವಿದ್ಯುತ್ ಸಂಪರ್ಕ ಕಲ್ಪಿಸಲು ರೂ. 1.25 ಲಕ್ಷ ಬಿಡುಗಡೆ ಮಾಡಿರುವ ಬಗ್ಗೆ ಸ್ಥಿರೀಕರಿಸಲು ಸಂಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಏರ್‌ಸ್ಟ್ರಿಪ್‌ಗೆ ಪ್ರಾಧಿಕಾರದ ವತಿಯಿಂದ ವಿದ್ಯುತ್ ಸಂಪರ್ಕ ಕಲ್ಪಿಸಲು ರೂ. 1.25 ಲಕ್ಷಗಳನ್ನು ನಿರ್ಮಿತಿ ಕೇಂದ್ರ ಚಿಕ್ಕಮಗಳೂರು, ಇವರಿಗೆ ನೀಡಿರುವುದನ್ನು ಸರ್ವಾನುಮತದಿಂದ ಸ್ಥಿರೀಕರಿಸಲಾಯಿತು.

## ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯಗಳು.

**ವಿಷಯ ನಂ 1.**

ಡಾ, ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ 2 ನೇ, ಮಹಡಿ ಮಲ್ಲೇಗೌಡ ಬಿಲ್ಡಿಂಗ್, ಎಂ. ಜಿ. ರಸ್ತೆ ಚಿಕ್ಕಮಗಳೂರು ರವರಿಗೆ ಕಛೇರಿ ಕಟ್ಟಡ ನಿರ್ಮಾಣ ಮಾಡಲು ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನ ದೊರಕಿಸಿ ಕೊಡುವ ಬಗ್ಗೆ.

**ಟಿಪ್ಪಣಿ:**

ಜಿಲ್ಲಾ ವ್ಯವಸ್ಥಾಪಕರು, ಡಾ,. ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ ನಿಯಮಿತ ಚಿಕ್ಕಮಗಳೂರು ಜಿಲ್ಲೆ, ಇವರ ಪತ್ರದ ಸಂಖ್ಯೆ. ಡಾ,. ಬಿ. ಆರ್. ಅಂ. ಅನಿ. ಜಿವ್ಯ. 09, 08-09 ದಿನಾಂಕ: 13-06-2008 ರಲ್ಲಿ ಚಿಕ್ಕಮಗಳೂರು ನಗರದಲ್ಲಿ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ನಿವೇಶನ ಕೋರಿ ಅರ್ಜಿ ಸಲ್ಲಿಸಿದ್ದು. ಈ ಬಗ್ಗೆ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು ರವರು ದಿನಾಂಕ: 17-06-2008 ರಂದು ಮೌಖಿಕವಾಗಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 92 / 1 ರಲ್ಲಿ ನಾಗರೀಕ ಸೌಕರ್ಯದ ನಿವೇಶನವನ್ನು ವಿದ್ಯಾರ್ಥಿ ನಿಲಯಕ್ಕೆ ಮೀಸಲಿಡಲಾಗಿತ್ತು. ಅದನ್ನು ಮಾರ್ಪಡಿಸಿ, ಸ್ವಚ್ಛ ಟ್ರಸ್ಟ್ ಚಿಕ್ಕಮಗಳೂರು ರವರಿಗೆ ಮಂಜೂರು ಮಾಡಿರುವ ನಿವೇಶನದಲ್ಲಿ ಉಳಿದ ನಾಗರೀಕ ಸೌಕರ್ಯದ ನಿವೇಶನವನ್ನು ಸದರಿ ಸಂಸ್ಥೆಗೆ ಹಂಚಿಕೆ ಮಾಡಲು ಕ್ರಮ ಜರುಗಿಸುವಂತೆ ಸೂಚಿಸಿರುತ್ತಾರೆ.

ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 92 / 1 ರಲ್ಲಿನ ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟಿರುವ ನಿವೇಶನದಲ್ಲಿ ಸ್ವಚ್ಛ ಟ್ರಸ್ಟ್ ಚಿಕ್ಕಮಗಳೂರು ರವರಿಗೆ ಹಂಚಿಕೆ ಮಾಡಿ ಉಳಿದಿರುವ ನಿವೇಶನದ ಅಳತೆ ಮುಂದಿನಂತಿದೆ.

ಪೂರ್ವ–ಪಶ್ಚಿಮಕ್ಕೆ– 55 ಅಡಿ.
ಉತ್ತರ–ದಕ್ಷಿಣಕ್ಕೆ – ಪೂರ್ವದ ಕಡೆಗೆ 70 ಅಡಿ.
ಉತ್ತರ–ದಕ್ಷಿಣಕ್ಕೆ ಪಶ್ಚಿಮದ ಕಡೆಗೆ 50 ಅಡಿ.

$55' \times \frac{70'+50'}{2} = 3300$ ಚ.ಅಡಿ.

ವಿದ್ಯಾರ್ಥಿ ನಿಲಯದ ಉದ್ದೇಶಕ್ಕೆ ಮೀಸಲಿಟ್ಟಿದ್ದ ನಿವೇಶನಕ್ಕೆ ಅರ್ಜಿಗಳನ್ನು ಅಹ್ವಾನಿಸಿ ದಿನಾಂಕ: 06-12-2005 ರ ಗಿರಿ ವಾರ್ತಾ ಪತ್ರಿಕೆಯಲ್ಲಿ ಮತ್ತು ಮಲೆನಾಡು ಸಂಗಾತಿ ದಿನ ಪತ್ರಿಕೆಗಳಲ್ಲಿ ಪ್ರಕಟಣೆ ನೀಡಲಾಗಿತ್ತು. ನಿವೇಶನ ಕೋರಿ ಯಾವುದೇ ಸಂಘ ಸಂಸ್ಥೆಗಳಿಂದ ಅರ್ಜಿ ಬಂದಿರುವುದಿಲ್ಲ. ಈ ನಿವೇಶನಗಳನ್ನು ಮರುಹಂಚಿಕೆ ಮಾಡಬೇಕಾದಲ್ಲಿ ಉದ್ದೇಶ ಬದಲಾವಣೆ ಮಾಡಿ ಕಛೇರಿ ಕಟ್ಟಡದ ಉದ್ದೇಶಕ್ಕೆ ಮೀಸಲಿಡ ಬೇಕಾಗಿರುತ್ತದೆ ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾದಿಕಾರಗಳ (ನಾಗರೀಕ ಸೌಕರ್ಯ ನಿವೇಶ ಹಂಚಿಕೆ) ನಿಯಮಗಳು– 1991 ರ ಪ್ರಕರಣ 3 (1) ರ ಅನ್ವಯ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ನಿಗಮ ಅಥವಾ ಒಂದುನಿಕಾಯ ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರಗಳಿಗೆ ಯಾವುದೇ ಪ್ರದೇಶದಲ್ಲಿ ದೊರಕುವಂತಹ ಪೌರಸೌಕರ್ಯ ನಿವೇಶನಗಳಿಂದ ನಿವೇಶನಗಳ ಅಂಥ ಸಂಖ್ಯೆಯನ್ನು ಕಾಯ್ದಿರಿಸಬಹುದಾಗಿರುತ್ತದೆ ಮತ್ತು ಪ್ರಕರಣ 4 ರನ್ವಯ 30 ವರ್ಷಗಳ ಗುತ್ತಿಗೆ ಆದಾರದ ಮೇಲೆ ಹಂಚಿಕೆ ಮಾಡಬಹುದಾಗಿರುತ್ತದೆ. ಪ್ರಕರಣ 8 ರನ್ವಯ ನಿವೇಶನದ ಗುತ್ತಿಗೆ ಮೊಬಲಗನ್ನು ಪ್ರಾಧಿಕಾರವು ನಿಗದಿಪಡಿಸಬೇಕಾಗಿದ್ದು. ಒಂದು ಚದರ ಮೀಟರ್ ನಿವೇಶನದ ಮೌಲ್ಯವನ್ನು ಆ ಪ್ರದೇಶದಲ್ಲಿ ಅತಿದೊಡ್ಡ ಗೃಹ ನಿವೇಶನದ ಪ್ರತಿ ಚದುರ ಮೀಟರ್ ಮೌಲ್ಯಕ್ಕೆ ಕಡಿಮೆಯಾಗದಂತೆ ನಿಗದಿ ಪಡಿಸಬೇಕಾಗಿರುತ್ತದೆ. ಉಪ ಪ್ರಕರಣ (4) (ಸಿ) ರನ್ವಯ ಗುತ್ತಿಗೆ ಮೊಬಲಿಗಿನ ಶೇಕಡ 50 ರದರದಲ್ಲಿ ಹಂಚಿಕೆ ಮಾಡಬಹುದಾಗಿರುತ್ತದೆ.

ಸಾಮಾನ್ಯವಾಗಿ ಮಾರುಕಟ್ಟೆ ದರದಂತೆ ಸದರಿ ಪ್ರದೇಶದಲ್ಲಿ ವಸತಿ ನಿವೇಶನಕ್ಕೆ ಚದುರ ಅಡಿ ಒಂದಕ್ಕೆ ರೂ. 200.00 ಗಳಿರುತ್ತೆ. ಆದರೆ ಹಿರಿಯ ಉಪನೋಂದನಾಧಿಕಾರಿಗಳ ಕಛೇರಿಯ ವ್ಯಾಪ್ತಿಗೆ ಒಳಪಡುವ ಸ್ತಿರಾಸ್ತಿಗಳ ಪರಿಷ್ಕೃತ ದರ ಪಟ್ಟಿಯಂತೆ ವಾಸೋಪಯೋಗಿ ನಿವೇಶನಕ್ಕೆ ಚದರ ಅಡಿಗೆ ರೂ. 120.00 ಬೆಲೆ ನಿಗದಿಪಡಿಸಲಾಗಿದೆ ಮತ್ತು ಇದೇ ನಿವೇಶನದಲ್ಲಿ ಸ್ವಚ್ಚ ಟ್ರಸ್ಟ್ ಚಿಕ್ಕಮಗಳೂರು ಇವರಿಗೆ ಚದರ ಮೀಟರ್ ಒಂದಕ್ಕೆ ರೂ. 1292.00 ರಂತೆ ಬೆಲೆ ನಿಗದಿಪಡಿಸಲಾಗಿದೆ.

ರಾಮೇಶ್ವರ ನಗರ ಬಡಾವಣೆಯ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 92 / 1 ರಲ್ಲಿನ ಸ್ವಚ್ಚ ಟ್ರಸ್ಟ್ ಚಿಕ್ಕಮಗಳೂರು, ರವರಿಗೆ ನಿವೇಶನ ಹಂಚಿಕೆಗಾಗಿ ಕಾಯ್ದಿರಿಸಿ ಉಳಿದಿರುವ ನಿವೇಶನದ ವಿವರಗಳು ಈ ಮುಂದಿನಂತೆ ಇರುತ್ತದೆ.

| ಕ್ರ.ಸಂ. | ಪೂರ್ವದಿಂದ ಪಶ್ಚಿಮಕ್ಕೆ ಮೀಟರ್‌ಗಳಲ್ಲಿ | ಉತ್ತರದಿಂದ ದಕ್ಷಿಣಕ್ಕೆ ಮೀಟರ್‌ಗಳಲ್ಲಿ | ಒಟ್ಟು ಚದರ ಮೀಟರ್‌ಗಳಲ್ಲಿ |
|---|---|---|---|
| 1. | 16.76 | $\frac{21.33+15.24}{2}$ | 306.45 |

**<u>ಚಕ್ ಬಂದಿ</u>**

ಪೂರ್ವಕ್ಕೆ : ಒಳಚಂರಂಡಿ ಕಾಲುವೆ.

ಪಶ್ಚಿಮಕ್ಕೆ : ರಸ್ತೆ.

ಉತ್ತರಕ್ಕೆ : ಉದ್ಯಾನವನ.

ದಕ್ಷಿಣಕ್ಕೆ : ಸ್ವಚ್ಚ ಟ್ರಸ್ಟ್ ರವರಿಗೆ ಕಾಯ್ದಿರಿಸಿರುವ ನಿವೇಶನ.

ಈ ಮೇಲ್ಕಂಡ ನಾಗರೀಕ ಸೌಲಭ್ಯದ ನಿವೇಶನವನ್ನು, ಜಿಲ್ಲಾ ವ್ಯವಸ್ಥಾಪಕರು ಡಾ,. ಬಿ. ಆರ್. ಅಂಬೇಡ್ಕರ ಅಭಿವೃದ್ಧಿ ನಿಯಮಿತ ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು, ಇವರಿಗೆ ಕಛೇರಿ ಕಟ್ಟಡ ನಿರ್ಮಾಣ ಮಾಡುವ ಸಲುವಾಗಿ ನೀಡಲು, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯದ ನಿವೇಶನಗಳ ಹಂಚಿಕೆ) ನಿಯಮಗಳು 1991 ರ ಪ್ರಕರಣ 3 ಉಪಪ್ರಕರಣ (1) ರನ್ವಯ ನಿವೇಶನವನ್ನು ಕಾಯ್ದಿರಿಸಿ, ಪ್ರಕರಣ 8 ಉಪಪ್ರಕರಣ (1) ರನ್ವಯ ಗುತ್ತಿಗೆ ಮೊಬಲಗನ್ನು ನಿಗದಿ ಪಡಿಸಿ, ಉಪ ಪ್ರಕರಣ (4) (ಸಿ) ರನ್ವಯ ಗುತ್ತಿಗೆ ಮೊಬಲಿಗಿನ ಶೇಕಡ 50 ರ ದರದಂತೆ ನಿಗದಿ ಪಡಿಸಿ, ಪ್ರಕರಣ 4 ರ ಅನ್ವಯ ಪ್ರಾಧಿಕಾರವು ಗುತ್ತಿಗೆ ಆದಾರದ ಮೇಲೆ ನಿರ್ಧಿಷ್ಟಪಡಿಸಬಹುದಾದಂಥ ನಿಬಂದನೆಗಳು ಮತ್ತು ಷರತ್ತುಗಳಿಗೆ ಒಳಪಟ್ಟು ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ : 174 : ಬೆಮಪ್ರಾ : 2004 ದಿನಾಂಕ: 24-06-2004 ರನ್ವಯ ಪ್ರಾಧಿಕಾರವೇ ನಾಗರೀಕ ಸೌಲಭ್ಯದ ನಿವೇಶನವನ್ನು ಹಂಚಿಕೆ ಮಾಡಬಹುದಾಗಿರುತ್ತದೆ. ವಿಷಯವನ್ನು ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಪ್ರಾಧಿಕಾರದ ಆಯುಕ್ತರು ಸದರಿ ಇಲಾಖೆಗೆ ಹಂಚಿಕೆ ಮಾಡಲು ಶಿಫಾರಸ್ಸು ಮಾಡಲಾಗಿದ್ದ ಮೇಲ್ಕಂಡ ನಿವೇಶನವನ್ನು ಹಂಚಿಕೆ ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಈಗಾಗಲೇ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಆಗಿ ಲಭ್ಯವಿರುವ ನಾಗರೀಕ ಸೇವಾ ಸೌಲಭ್ಯದ ನಿವೇಶನಗಳ ಪೈಕಿ ಒಂದು ನಿವೇಶನವನ್ನು ಮಾನ್ಯ ಜಿಲ್ಲಾಧಿಕಾರಿಗಳವರೊಂದಿಗೆ ಸ್ಥಳ ಪರಿಶೀಲನೆ ನಡೆಸಿ ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ ಕಛೇರಿ ಕಟ್ಟಡ ನಿರ್ಮಾಣ ಮಾಡಲು ನಿವೇಶನ ಹಂಚಿಕೆ ಮಾಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 2.**

ಚಿಕ್ಕಮಗಳೂರು ನಗರದ ಜೈಲ್ ರಸ್ತೆ ಅಗಲೀಕರಣ ಮಾಡಿ ಅಭಿವೃದ್ಧಿ ಪಡಿಸುವ ಬಗ್ಗೆ.

**ಟಿಪ್ಪಣಿ:**

ಚಿಕ್ಕಮಗಳೂರು ನಗರದ ಜೈಲ್ ರಸ್ತೆಯಲ್ಲಿ ಸಂಚಾರ ವ್ಯವಸ್ಥೆಯನ್ನು ಸುಗಮಗೊಳಿಸುವ ಹಾಗೂ ನಗರವನ್ನು ಸೌಂದರೀಕರಣಗೊಳಿಸುವ ದೃಷ್ಟಿಯಿಂದ ರಸ್ತೆಯನ್ನು ಅಗಲೀಕರಿಸಿದ ನಂತರ ಸದರಿ ರಸ್ತೆಯನ್ನು ಅಭಿವೃದ್ಧಿ ಪಡಿಸಲು ಪ್ರಾಧಿಕಾರದ ವತಿಯಿಂದ ರೂ. 10.0 ಲಕ್ಷಗಳನ್ನು ವಂತಿಕೆಯಾಗಿ ನೀಡಬೇಕೆಂದು ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಸೂಚಿಸಿದ ಮೇರೆಗೆ ಸದರಿ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಚಿಕ್ಕಮಗಳೂರು ನಗರದ ಜೈಲ್ ರಸ್ತೆಯನ್ನು ಸುಗಮ ಸಂಚಾರಕ್ಕಾಗಿ ಹಾಗೂ ನಗರದ ಸೌಂದರೀಕರಣ ದೃಷ್ಟಿಯಿಂದ ರಸ್ತೆ ಅಗಲೀಕರಣ ಮಾಡಿದ ನಂತರ ರಸ್ತೆ ಅಭಿವೃದ್ಧಿ ಪಡಿಸುವ ಸಲುವಾಗಿ ಸರ್ಕಾರದ ಅನುಮೋದನೆ ಪಡೆದು ಪ್ರಾಧಿಕಾರದ ವತಿಯಿಂದ ರೂ. 10.0 ಲಕ್ಷಗಳನ್ನು ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ಚಿಕ್ಕಮಗಳೂರು ನಗರದ ವ್ಯಾಪ್ತಿಯಲ್ಲಿ ಬರುವ ಮೂರು ರಿಂಗ್ ರಸ್ತೆಯನ್ನು ಅಭಿವೃದ್ದಿಪಡಿಸುವ ಕುರಿತು.

**ಟಿಪ್ಪಣಿ:**

ಚಿಕ್ಕಮಗಳೂರು ನಗರದ ವ್ಯಾಪ್ತಿಯಲ್ಲಿ ಬರುವ ಮೂರು ರಿಂಗ್ ರಸ್ತೆಯನ್ನು ಅಭಿವೃದ್ದಿಪಡಿಸುವ ಕುರಿತು. ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ಚಿಕ್ಕಮಗಳೂರು ನಗರದ ವ್ಯಾಪ್ತಿಯಲ್ಲಿ ಮಹಾಯೋಜನೆ ಪರಿಷ್ಕೃತ – I ರಲ್ಲಿ ಪ್ರಸ್ತಾಪಿಸಲಾಗಿರುವ, 1. ಕಡೂರು ಕುಂಇರುಘಗೋಡು ರಸ್ತೆಯಿಂದ ಬೇಲೂರು ರಸ್ತೆ ಸಂಪರ್ಕಿಸುವ ರಿಂಗ್ ರಸ್ತೆ, 2. ಕೆ. ಕೆ. ರಸ್ತೆಯಿಂದ ತರಿಕೆರೆ ಬಿಳಿಕೆರೆ ರಸ್ತೆಗೆ ಸಂಪರ್ಕಿಸುವ ರಿಂಗ್ ರಸ್ತೆ, 3. ಶಿರಗುಂದ ಅಂಬರ್‌ವ್ಯಾಲಿ ಶಾಲೆ ಸಮೀಪದ ಕೆ. ಕೆ. ರಸ್ತೆಯಿಂದ ಅಂಬಳೆ ಕೈಗಾರಿಕಾ ವಸಾಹತು ಮೂಲಕ ಬೇಲೂರು ರಸ್ತೆಯನ್ನು ಸಂಪರ್ಕಿಸುವ ರಿಂಗ್ ರಸ್ತೆಗಳನ್ನು ನಿಯಮಾನುಸಾರ ಅಭಿವೃದ್ಧಿ ಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 4.**

ಚಿಕ್ಕಮಗಳೂರು ನಗರದ ಕೈಗಾರಿಕಾ ಪ್ರದೇಶದ ಪಕ್ಕದಲ್ಲಿ ವಸತಿ ಬಡಾವಣೆ ಅಭಿವೃದ್ದಿಪಡಿಸುವ ಕುರಿತು.

**ಟಿಪ್ಪಣಿ:**

ಚಿಕ್ಕಮಗಳೂರು ನಗರದ ಕೈಗಾರಿಕಾ ಪ್ರದೇಶದ ಪಕ್ಕದಲ್ಲಿ ವಸತಿ ಬಡಾವಣೆ ಅಭಿವೃದ್ದಿಪಡಿಸುವ ಕುರಿತು. ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ಚಿಕ್ಕಮಗಳೂರು ನಗರದ ಅಂಬಳೆ ಕೈಗಾರಿಕಾ ಪ್ರದೇಶದ ಪಕ್ಕದಲ್ಲಿ ವಸತಿ ಬಡಾವಣೆ ಅಭಿವೃದ್ಧಿ ಪಡಿಸುವ ಬಗ್ಗೆ ಈಗಾಗಲೇ ಸರ್ವೆ ಕೆಲಸಗಳನ್ನು ಪೂರ್ಣಗೊಳಿಸಲಾಗಿದೆ. ತೇಗೂರು ಗ್ರಾಮದ ಸರ್ವೆ ನಂ. 110 ಮತ್ತಿತರೆ ಸರ್ವೆ ನಂಬರುಗಳಲ್ಲಿನ ಒಟ್ಟು 110 ಎಕರೆ 17 ಗುಂಟೆ ಜಮೀನಿನ ಪೈಕಿ 80 ಎಕರೆ ಜಾಗಕ್ಕೆ ವಸತಿ ಯೋಜನೆಯನ್ನು ರೂಪಿಸಲು ಹಾಗೂ ರಿಂಗ್ ರಸ್ತೆ ಹಾದುಹೋಗುವ ಇಕ್ಕೆಲಗಳಲ್ಲಿ ಸೂಕ್ತವಾದ ಪ್ರದೇಶಗಳಲ್ಲಿ ವಸತಿ ಯೋಜನೆಯನ್ನು ರೂಪಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ 5:**

ಚಿಕ್ಕಮಗಳೂರು ನಗರದಲ್ಲಿ ನೂತನವಾಗಿ ನಿರ್ಮಿಸುತ್ತಿರುವ ಏರ್‌ಸ್ಟ್ರಿಪ್‌ಗೆ ಸಂಬಂಧಿಸಿದಂತೆ, ಏರ್‌ಸ್ಟ್ರಿಪ್ ಕಾಯ್ದೆ 1934 ರ ನಿಯಮಗಳನ್ನು ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆ ಪರಿಷ್ಕೃತ – I ರಲ್ಲಿನ ವಲಯ ನಿಯಮಾವಳಿಗಳಲ್ಲಿ ಅಳವಡಿಸುವ ಕುರಿತು.

**ಟಿಪ್ಪಣಿ:**

ಚಿಕ್ಕಮಗಳೂರು ನಗರಕ್ಕೆ ಮಹಾಯೋಜನೆ ಪರಿಷ್ಕೃತ – I ನ್ನು ತಯಾರಿಸಲಾಗುತ್ತಿದೆ. ಪ್ರಸ್ತುತ ಚಿಕ್ಕಮಗಳೂರು ನಗರದಲ್ಲಿ ಏರ್‌ಸ್ಟ್ರಿಪ್ ನಿರ್ಮಾಣ ಮಾಡುತಿದ್ದು, ಏರ್‌ಸ್ಟ್ರಿಪ್ ಕಾಯ್ದೆ 1934 ರಲ್ಲಿನ ನಿಯಮಗಳನ್ನು ವಲಯ ನಿಯಮಾವಳಿಗಳಲ್ಲಿ ಅಳವಡಿಸುವುದು ಸೂಕ್ತವಾಗಿರುತ್ತದೆ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರದ ಸುವ್ಯವಸ್ಥಿತ ಹಾಗೂ ಸುಂದರ ಬೆಳವಣಿಗೆಯ ಹಿತದೃಷ್ಠಿಯಿಂದ ಪ್ರಸ್ತುತ, ಚಿಕ್ಕಮಗಳೂರು ನಗರದಲ್ಲಿ ನಿರ್ಮಿಸುತ್ತಿರುವ ಏರ್‌ಸ್ಟ್ರಿಪ್‌ಗೆ ಸಂಬಂದಿಸಿದಂತೆ, ಏರ್‌ಸ್ಟ್ರಿಪ್ ಕಾಯ್ದೆ 1934 ರ ನಿಯಮಗಳನ್ವಯ ಏರ್‌ಸ್ಟ್ರಿಪ್ ರನ್‌ವೇಗೆ ಫನಲ್ ಜೋನ್ $4^{o}$ ಕೋನದ ವ್ಯಾಪ್ತಿಯಲ್ಲಿ ಬರುತ್ತಿದ್ದು, ಸದರಿ $4^{o}$ ಕೋನದಲ್ಲಿ ಯಾವುದೇ ಅಭಿವೃದ್ಧಿ ಬೆಳವಣಿಗೆಗಳು ಬರದಂತೆ ಹಾಗೂ ಏರ್‌ಸ್ಟ್ರಿಪ್ ಕಾಯ್ದೆಯ ಇತರೆ ನಿಯಮಗಳನ್ನು, ಚಿಕ್ಕಮಗಳೂರು ನಗರದ ಮಹಾ ಯೋಜನೆ ಪರಿಷ್ಕೃತ – I ರಲ್ಲಿನ ವಲಯ ನಿಯಮಾವಳಿಗಳಲ್ಲಿ ಅಳವಡಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯು ಮುಕ್ತಾಯವಾಯಿತು.**

ಸಹಿ/–

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 07-08-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳು.

## ಸಭೆಯಲ್ಲಿ ಹಾಜರಿದ್ದ ಸದಸ್ಯರು.

| | | |
|---|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಅಧ್ಯಕ್ಷರು |
| 2 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. | ಸದಸ್ಯರು |
| 3 | ಸಹಾಯಕ ನಿರ್ದೇಶಕರು,<br>ನಗರ ಯೋಜನಾ ಇಲಾಖೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ನಗರ ಯೋಜನಾ ಸದಸ್ಯರು |
| 4 | ಕಾರ್ಯಪಾಲಕ ಇಂಜಿನಿಯರ್,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಇಂಜಿನಿಯರ್ ಸದಸ್ಯರು |
| 5 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 6 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,<br>ಹಾಸನ (ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 7 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 8 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 9 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಆಹ್ವಾನಿತರು |

## ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.

| | | |
|---|---|---|
| 1 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಶ್ರೀ. ಡಿ. ಎಂ. ಪುಟ್ಟೇಗೌಡ,<br>ವಿಧಾನ ಪರಿಷತ್ ಸದಸ್ಯರು, ಚಿಕ್ಕಮಗಳೂರು. | ಸದಸ್ಯರು |
| 3 | ಸೈಂಟಿಫಿಕ್ ಆಫೀಸರ್,<br>ಪ್ರಕೃತಿ ಮತ್ತು ಪರಿಸರ ಇಲಾಖೆ, ಬೆಂಗಳೂರು. | ಸದಸ್ಯರು |
| 4 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |

ಪ್ರಾಧಿಕಾರದ ಸಭೆಯು ಮದ್ಯಾಹ್ನ 3.00 ಗಂಟೆಗೆ ಸಮಾವೇಶಗೊಂಡಿತು, ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಸಭೆಯಲ್ಲಿ ಪ್ರಾಧಿಕಾರದ ಸದಸ್ಯರು ಹಾಜರಿಲ್ಲದೆ ಪ್ರತಿನಿದಿಗಳನ್ನು ಕಳುಹಿಸಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿದರು, ಹಾಗೂ ಇನ್ನು ಮುಂದೆ ಪ್ರಾಧಿಕಾರದ ಎಲ್ಲಾ ಸದಸ್ಯರು ಖುದ್ದಾಗಿ ಸಭೆಗೆ ಹಾಜರಾಗಬೇಕೆಂದು ಸಭೆಗೆ ಹಾಜರಾಗಲು ಸಾದ್ಯವಾಗದಿದ್ದ ಸಂದರ್ಭದಲ್ಲಿ ಪ್ರಾಧಿಕಾರದ ಅಧ್ಯಕ್ಷರ ಪೂರ್ವಾನುಮತಿ ಪಡೆಯಬೇಕೆಂದೂ ಈ ದಿನದ ಸಭೆಗೆ ಹಾಜರಾಗದಿರುವ ಮತ್ತು ಖುದ್ದು ಹಾಜರಿರದೆ ಪ್ರತಿನಿದಿಗಳನ್ನು ಕಳುಹಿಸಿರುವ ಸದಸ್ಯರುಗಳಿಗೆ ತಿಳುವಳಿಕೆ ಪತ್ರ ನೀಡಲು ಆಯುಕ್ತರಿಗೆ ಸೂಚಿಸಿದರು, ನಂತರ ಸಭೆಯ ಕಾರ್ಯಸೂಚಿಯಂತೆ ವಿಷಯಗಳನ್ನು ಚರ್ಚೆಗೆ ತೆಗೆದುಕೊಳ್ಳಲಾಯಿತು.

**ವಿಷಯ ನಂ 1.**

ದಿನಾಂಕ: 21-06-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳನ್ನು ಪರಿಶೀಲಿಸಿ ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ:**

ದಿನಾಂಕ: 21-06-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದು.

**ತೀರ್ಮಾನ:**

ದಿನಾಂಕ: 21-06-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳ ಬಗ್ಗೆ ವಿವರವಾಗಿ ಚರ್ಚಿಸಿ ಪರಿಶೀಲಿಸಿದ ನಂತರ ಸ್ಥಿರೀಕರಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 2.**

ನಾಗರೀಕ ಸೌಲಭ್ಯದ ನಿವೇಶಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಧಿಕಾರಗಳ (ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ) ನಿಯಮಗಳು 1991 ರ ಅನ್ವಯ ಹಂಚಿಕೆ ಮಾಡುವ ಬಗ್ಗೆ.

**ಟಿಪ್ಪಣಿ.**

ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ | ಗ್ರಾಮದ ಹೆಸರು ಮತ್ತು ಸ.ನಂ. | ವಿಸ್ತೀರ್ಣ | ಒಟ್ಟು ಚ.ಮೀ. | ಉದ್ದೇಶ |
|---|---|---|---|---|
| 1. | ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 57 / 1, 57 / 2 ರಲ್ಲಿನ | 35 x 415 | 14525.00 ಚ.ಅಡಿ. | ಪ್ರಾಥಮಿಕ ಶಾಲೆ ಉದ್ದೇಶಕ್ಕಾಗಿ |

| ಕ್ರ ಸಂ | ಗ್ರಾಮದ ಹೆಸರು ಮತ್ತು ಸ.ನಂ. | ವಿಸ್ತೀರ್ಣ | ಒಟ್ಟು ಚ.ಮೀ. | ಉದ್ದೇಶ |
|---|---|---|---|---|
| 2. | ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 44 ಮತ್ತು 50 ರಲ್ಲಿನ | $26.78 \times \frac{39.92+57.00}{2}$ | 12097.76 | ಕಾಯ್ದಿರಿಸಬೇಕಾಗಿದೆ |
| 3. | ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 101, 102, 103, 104, 105 / 1, 507, ಉಪಳ್ಳಿ 193, 194. | ಅನಿಯತ | 4269.07 | ಕನ್ನಡ ಪೂರ್ವ ಪ್ರಾರ್ಥಮಿಕ ಪಾಠ ಶಾಲೆ. |
| 4. | ಬಸವನಹಳ್ಳಿ ಗ್ರಾಮದ ಸರ್ವೆ ನಂ. 108, 109, 110, 111, 112. | $\frac{135.9+80}{2} \times \frac{70.0+136}{2}$ | 11110.61 | ಆಸ್ಪತ್ರೆ. |
| 5. | ಹಿರೇಮಗಳೂರು ಗ್ರಾಮದ ಸರ್ವೆ ನಂ. 503 ಮತ್ತಿತರೆ. | 25.91 x 42.67 | 1105.44 | ಶಿಶುಪಾಲನಾ ಕೇಂದ್ರ. |
| 6. | ಹಿರೇಮಗಳೂರು ಗ್ರಾಮದ ಸರ್ವೆ ನಂ. 503 ಮತ್ತಿತರೆ. | $\frac{79.4+77.72}{2} \times 30.48$ | 2392.07 | ಶಾಲಾ ಉಪಯೋಗಕ್ಕೆ. |
| 7. | ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6. | $\frac{42.57+41.57}{2} \times 36.00$ | 1514.52 | ಕಾಯ್ದಿರಿಸಬೇಕಾಗಿದೆ. |

ಮೇಲ್ಕಂಡ ಪಟ್ಟಿಯಲ್ಲಿ ತೋರಿಸಿರುವಂತೆ, ಕೆಲವು ನಿವೇಶನಗಳನ್ನು ಉದ್ದೇಶಕ್ಕೆ ಕಾಯ್ದಿರಿಸಲಾಗಿದೆ. ಕೆಲವು ನಿವೇಶನಗಳ ಉದ್ದೇಶಗಳನ್ನು ಕಾಯ್ದಿರಿಸಬೇಕಾಗಿರುತ್ತದೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ) ನಿಯಮಗಳು 1991 ರ ಪ್ರಕರಣ 3 ರನ್ವಯ ನಿವೇಶನಗಳನ್ನು ಕೇಂದ್ರ ಸರ್ಕಾರ ಅಥವಾ ರಾಜ್ಯ ಸರ್ಕಾರದಿಂದ ಸ್ಥಾಪಿತವಾದ ನಿಗಮ ಅಥವಾ ಒಂದು ನಿಕಾಯದಿಂದ ಪ್ರಾಧಿಕಾರವು ಕೇಂದ್ರ ಅಥವಾ ರಾಜ್ಯ ಸರ್ಕಾರಗಳಿಗೆ ನಿವೇಶನಗಳನ್ನು ಕಾಯ್ದಿರಿಸಬಹುದಾಗಿರುತ್ತದೆ. ಸಂಘ ಸಂಸ್ಥೆಗಳಿಗೆ ನಾಗರೀಕ ಸೌಲಭ್ಯದ ನಿವೇಶನಗಳ ಹಂಚಿಕೆ ಮಾಡಬೇಕಾದಲ್ಲಿ ಪ್ರಕರಣ 3 ರ ಉಪಪ್ರಕರಣ 3 ರನ್ವಯ ನಗರ ಪ್ರದೇಶದಲ್ಲಿ ವ್ಯಾಪಕ ಪ್ರಸಾರವನ್ನು ಹೊಂದಿರುವ 2 ಕ್ಕೆ ಕಡಿಮೆ ಇಲ್ಲದ ಇಂಗ್ಲೀಷ ಮತ್ತು ಕನ್ನಡ ದಿನಪ್ರತಿಗಳು ಯುಕ್ತ ಪ್ರಚಾರ ನೀಡಬೇಕಾಗಿರುತ್ತದೆ. ಪ್ರಕರಣ 8 (1) ರನ್ವಯ ಗುತ್ತಿಗೆ ಆದಾರದ ಮೇಲೆ ಹಂಚಬೇಕಾಗಿರುವ ಗುತ್ತಿಗೆ ಮೊಬಲಗನ್ನು ಪ್ರಾಧಿಕಾರವು ನಿಗದಿ ಪಡಿಸಬೇಕಾಗಿರುತ್ತದೆ. ಒಂದು ಚದರ ಮೀಟರ್ ಪ್ರದೇಶದ ಮೌಲ್ಯವನ್ನು ಆ ಪ್ರದೇಶದಲ್ಲಿ ಅತಿದೊಡ್ಡಗೃಹ ನಿವೇಶನದ ಪ್ರತಿ ಚ.ಮೀ. ಮೌಲ್ಯಕ್ಕೆ ಕಡಿಮೆಯಾಗದಂತೆ ನಿಗದಿ ಪಡಿಸತಕ್ಕದಾಗಿರುತ್ತದೆ.

ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 174 : ಬೆಮಪ್ರಾ : 2004 ದಿನಾಂಕ: 28-04-2004 ರಲ್ಲಿ ನಗರಾಭಿವೃದ್ಧಿ ಪ್ರಧಿಕಾರಗಳ (ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ) ನಿಯಮಗಳು 1991 ರಲ್ಲಿನ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿ ಪ್ರಾಧಿಕಾರದ ಹಂತದಲ್ಲಿ ನಿವೇಶನ ಹಂಚಿಕೆ ಮಾಡಬಹುದಾಗಿರುತ್ತೆ. ವಿಷಯವನ್ನು ಅನುಮೋದನೆಗಾಗಿ ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ.**

ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನಗಳ ಬಗ್ಗೆ ವಿವರವಾಗಿ ಚರ್ಚಿಸಿ, ಟಿಪ್ಪಣಿಯಲ್ಲ ಹೇಳಿರುವ ಕ್ರಮ ಸಂಖ್ಯೆ. 2 ರಲ್ಲಿನ ನಾಗರೀಕ ಸೌಲಭ್ಯದ ನಿವೇಶನವನ್ನು ಅಂಚೆ ಕಛೇರಿ / ದೂರವಾಣಿ ಇಲಾಖೆ / ಕಛೇರಿ ಕಟ್ಟಡಗಳು / ಲೈಬ್ರರಿ ಆರಕ್ಷಕ ಠಾಣೆ ಉಪಯೋಗಕ್ಕೆ ಕಾಯ್ದಿರಿಸಬೇಕೆಂದು, ಕ್ರಮ ಸಂಖ್ಯೆ. 4 ರಲ್ಲಿನ ನಾಗರೀಕ ಸೌಲಭ್ಯವನ್ನು ಆಸ್ಪತ್ರೆ ಉದ್ದೇಶಕ್ಕೆ ಕಾಯ್ದಿರಿಸುವುದನ್ನು ಮಾರ್ಪಡಿಸಿ ಕಛೇರಿ ಕಟ್ಟಡ ಉಪಯೋಗಕ್ಕೆ ಕಾಯ್ದಿರಿಸಿ ಸರ್ಕಾರಿ ಇಲಾಖೆ ಇತರೆ ಇಲಾಖೆಗಳಿಗೆ ಮೀಸಲಿಡಬೇಕೆಂದು ಕ್ರಮ ಸಂಖ್ಯೆ. 7 ರಲ್ಲಿನ ನಾಗರೀಕ ಸೌಲಭ್ಯದ ನಿವೇಶನವನ್ನು ಎರಡು ಭಾಗಗಳಾಗಿ ವಿಂಗಡಿಸಿ ಕಛೇರಿ ಕಟ್ಟಡ ಉದ್ದೇಶಕ್ಕೆ ಮೀಸಲಿಟ್ಟು ಸರ್ಕಾರ ಹಾಗೂ ಸಂಘ ಸಂಸ್ಥೆಗಳಿಗೆ ಕಾಯ್ದಿರಿಸಬಹುದೆಂದು ಹಿರಿಯ ಉಪ ನೊಂದಣಾಧಿಕಾರಿಗಳ ದರ ಪಟ್ಟಿಯಂತೆ ನಿವೇಶನಗಳ ಗುತ್ತಿಗೆ ಮೊಬಲಗನ್ನು ನಿಗದಿಪಡಿಸಿ, 30 ವರ್ಷಗಳ ಅವಧಿಗೆ ಗುತ್ತಿಗೆ ಆದಾರದ ಮೇಲೆ ನೀಡಬೇಕೆಂದು ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ನಿವೇಶನ ಹಂಚಿಕೆ ನಿಯಮಗಳು 1991 ರ ನಿಯಮಗಳನ್ನು ಚಾಚೂ ತಪ್ಪದೆ ಅನುಸರಿಸಿ ನಿವೇಶನ ಹಂಚಿಕೆ ಮಾಡಬೇಕೆಂದು ಮತ್ತು ಟಿಪ್ಪಣಿಯಲ್ಲಿ ಹೇಳಿರುವ ನಿವೇಶನಗಳನ್ನು ಸರ್ಕಾರದ ಇಲಾಖೆಗಳಾದ ಅಂಚೆ ಕಛೇರಿ ದೂರವಾಣಿ ಇಲಾಖೆ, ಗ್ರಂಥಾಲಯ ಇಲಾಖೆ ಮತ್ತು ಆರಕ್ಷಕ ಇಲಾಖೆಗಳಿಗೆ ಹಂಚಿಕೆ ಮಾಡಲು ಇಲಾಖೆಗಳಿಗೆ ಪತ್ರ ಬರೆಯಬೇಕೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ಸಹಾಯಕ ನಿಯಂತ್ರಕರು ಸ್ಥಳೀಯ ಲೆಕ್ಕಪರಿಶೋಧನಾ ವೃತ್ತ ಚಿಕ್ಕಮಗಳೂರು ರವರಿಗೆ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ನಾಗರೀಕ ಸೇವಾ ಸೌಲಭ್ಯದ ನಿವೇಶನ ಹಂಚಿಕೆ ಮಡುವ ಕುರಿತು.

**ಟಿಪ್ಪಣಿ.**

ಸಹಾಯಕ ನಿಯಂತ್ರಕರು ಸ್ಥಳೀಯ ಲೆಕ್ಕಪರಿಶೋಧನಾ ವೃತ್ತ ಚಿಕ್ಕಮಗಳೂರು ಇವರು ದಿನಾಂಕ: 19-07-2008 ರಂದು ಅರ್ಜಿ ಸಲ್ಲಿಸಿ, ಅದರಲ್ಲಿ ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿನ 139 x 118 ಅಡಿ ಅಳತೆಯ ನಿವೇಶನ ಹಂಚಿಕೆ ಮಾಡಬೇಕೆಂದು ಕೋರಿರುತ್ತಾರೆ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ) ನಿಯಮಗಳು 1991 ಪ್ರಕರಣ 3 ರ ಅನ್ವಯ ಈ ನಿವೇಶನವನ್ನು ರಾಜ್ಯ ಸರ್ಕಾರಕ್ಕೆ ಕಾಯ್ದಿರಿಸಿ ಕಛೇರಿ ಕಟ್ಟಡ ಉಪಯೋಗಕ್ಕೆ ಮೀಸಲಿಟ್ಟು ಗುತ್ತಿಗೆ ಮೊಬಲಗನ್ನು ಪ್ರಕರಣ 8 ರ ಅನ್ವಯ ಪ್ರಾಧಿಕಾರವು ನಿಗದಿಗೊಳಿಸಿ, ಪ್ರಕರಣ 8 (4) ಮತ್ತು (C) ರನ್ವಯ ಪ್ರಾದಿಕಾರವು ನಿಗದಿಪಡಿಸಲಾದ ಗುತ್ತಿಗೆ ಮೊಬಲಗಿನ ಶೇಕಡ 50 ರ ದರದಲ್ಲಿ ನಿವೇಶನ ಹಂಚಿಕೆ ಮಾಡಬಹುದಾಗಿದ್ದು, ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 174 : ಬೆಮಪ್ರಾ : 2004 ದಿನಾಂಕ: 28-04-2004 ಅನ್ವಯ ಪ್ರಧಿಕಾರವು ಹಂಚಿಕೆ ಮಾಡಬಹುದಾಗಿರುತ್ತದೆ. ವಿಷಯವನ್ನು ಪ್ರಧಿಕಾರದ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ.**

ಸಹಾಯಕ ನಿಯಂತ್ರಕರು ಸ್ಥಳೀಯ ಲೆಕ್ಕ ಪತ್ರ ಇಲಾಖೆ ವೃತ್ತ ಚಿಕ್ಕಮಗಳೂರು ಇವರಿಗೆ ಕಛೇರಿ ಕಟ್ಟಡ ಉಪಯೋಗಕ್ಕಾಗಿ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ ಮಾಡುವ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿನ ಈ ಕೆಳಕಂಡ ಅನುಸೂಚಿಯನ್ನೊಳಗೊಂಡಿರುವ ನಿವೇಶನದ ಚಕ್ಕುಬಂದಿ

ಪೂರ್ವಕ್ಕೆ : ಉದ್ಯಾನವನ.
ಪಶ್ಚಿಮಕ್ಕೆ : ನಾಗರೀಕ ಸೌಲಭ್ಯದ ನಿವೇಶದ ಉಳಿದ ಭಾಗ.
ಉತ್ತರಕ್ಕೆ : ರಸ್ತೆ.
ದಕ್ಷಿಣಕ್ಕೆ : ರಸ್ತೆ.
ಪೂರ್ವದಿಂದ ಪಶ್ಚಿಮಕ್ಕೆ : 19.00 ಮೀಟರ್.
ಉತ್ತರದಿಂದ ದಕ್ಷಿಣಕ್ಕೆ : 36.00 ಮೀಟರ್.
ಒಟ್ಟು : 684.00 ಚದರ ಮೀಟರ್.

ನಾಗರೀಕ ಸೌಲಭ್ಯದ ನಿವೇಶನವನ್ನು ಚದರ ಮೀಟರ್ ಒಂದಕ್ಕೆ ರೂ. 861.00 (ಚದ ಅಡಿ ಒಂದಕ್ಕೆ ಶೇಕಡ 50 ರಿಯಾಯಿತಿಯಲ್ಲಿ ರೂ. 80.00) ರಂತೆ ಗುತ್ತಿಗೆ ಮೊಬಲಗನ್ನು ನಿಗದಿಗೊಳಿಸಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ (ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ) ನಿಯಮಗಳು 1991 ರ ಪ್ರಕರಣ 8 (4) (ಸಿ) ರನ್ವಯ ಪ್ರಾಧಿಕಾರವು ನಿಗದಿಪಡಿಸಲಾಗಿರುವ ಗುತ್ತಿಗೆ ಮೊಬಲಗಿನ ಶೇಕಡ 50 ರ ರಿಯಾಯಿತಿ ನೀಡಿ 30 ವರ್ಷಗಳ ಗುತ್ತಿಗೆ ಆದಾರದ ಮೇಲೆ ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 174 : ಬೆಮಪ್ರಾ : 2004 ರ ಅನ್ವಯ ಹಂಚಿಕೆ ಮಾಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಅಧ್ಯಕ್ಷರು ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಚಿಕ್ಕಮಗಳೂರು ಬ್ರಾಂಚ್ ಇವರು ದಿನಾಂಕ: 14-06-2008 ರಲ್ಲಿ ಭಾರತೀಯ ವೈಧ್ಯ ಸಂಘ ಚಿಕ್ಕಮಗಳೂರು ಇವರು 100 x 100 ಅಳತೆಯ ನಿವೇಶನವನ್ನು ಕೋರಿದ್ದು ಭಾರತೀಯ ವೈಧ್ಯ ಸಂಘಕ್ಕೆ ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿನ ಈ ಕೆಳಕಂಡ ಅನುಸೂಚಿಯನ್ನೊಳಗೊಂಡಿರುವ ನಿವೇಶನದ ಚಕ್ಕುಬಂದಿ

ಪೂರ್ವಕ್ಕೆ : ನಾಗರೀಕ ಸೌಲಭ್ಯದ ನಿವೇಶದ ಉಳಿದ ಭಾಗ.
ಪಶ್ಚಿಮಕ್ಕೆ : ರಸ್ತೆ.
ಉತ್ತರಕ್ಕೆ : ರಸ್ತೆ.
ದಕ್ಷಿಣಕ್ಕೆ : ರಸ್ತೆ.
ಪೂರ್ವದಿಂದ ಪಶ್ಚಿಮಕ್ಕೆ : (23.57 + 22.57) / 2 ಮೀಟರ್.
ಉತ್ತರದಿಂದ ದಕ್ಷಿಣಕ್ಕೆ : 36.00 ಮೀಟರ್.
ಒಟ್ಟು : 830.52 ಚದರ ಮೀಟರ್.
: (8936.00 ಚದರ ಅಡಿಗಳು)

ನಾಗರೀಕ ಸೌಲಭ್ಯದ ನಿವೇಶನವನ್ನು ಚದರ ಮೀಟರ್ ಒಂದಕ್ಕೆ ರೂ. 1722.00 (ಚದ ಅಡಿ ಒಂದಕ್ಕೆ ರೂ. 160.00) ರಂತೆ ಗುತ್ತಿಗೆ ಮೊಬಲಗನ್ನು ನಿಗದಿಗೊಳಿಸಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ (ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ) ನಿಯಮಗಳು 1991 ರ ಪ್ರಕರಣ 8 (4) (ಸಿ) ರನ್ವಯ ಮತ್ತು ಇತರೆ ನಿಯಮಗಳ ಅನುಸಾರ ಹಂಚಿಕೆ ಮಾಡಲು ಸೂಕ್ತ ಪತ್ರಿಕಾ ಪ್ರಕಟಣೆಯನ್ವಯ ಅರ್ಜಿಗಳನ್ನು ಆಹ್ವಾನಿಸಿ ನಿಯಮಾನುಸಾರ ಹಂಚಲು ಕ್ರಮ ವಹಿಸುವಂತೆ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

# ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯಗಳು.

**ವಿಷಯ ನಂ 1.**

1. ಡಾ., ಎನ್. ರಘು ಇವರಿಗೆ ಸೇರಿದ
ಸ.ನಂ. 499 / 1, 00 ಎಕರೆ 34 ಗುಂಟೆ ಮತ್ತು ಸ.ನಂ. 499 / 2, 00 ಎಕರೆ 21 ಗುಂಟೆ.

2. ಡಾ., ಕೆ. ಇ. ಕುಮಾರಸ್ವಾಮಿ ಇವರಿಗೆ ಸೇರಿದ ಸ. ನಂ. 499 / 2, 00 ಎಕರೆ 21 ಗುಂಟೆ ಈ ಭೂಮಿಯು 15/03-1995 ರಂದು ಜಿಲ್ಲಾಧಿಕಾರಿಗಳವರಿಂದ ವ್ಯವಸಾಯೇತರ ವಸತಿ ನಿವೇಶನಗಳ ಉದ್ದೇಶಕ್ಕೆ ಪರಿವರ್ತಿಸಿ ಆದೇಶವಾಗಿದ್ದು ಈಗ ಲೇಔಟ್ ಅನುಮೋದನೆ ಮಾಡಿಕೊಡಲು ಕೋರಿರುತ್ತಾರೆ. ಸಂಬಂದಿಸಿದಂತೆ ನಗರಯೋಜನಾ ಇಲಾಖೆಯಿಂದ ತಾಂತ್ರಿಕ ಅಭಿಪ್ರಾಯ ಪಡೆದು ಅನುಮೋದನೆ ನೀಡಬಹುದಾಗಿದೆ.

**ಟಿಪ್ಪಣಿ.**

ಡಾ., ಎನ್. ರಘು ಇವರಿಗೆ ಸೇರಿದ ಸ.ನಂ. 499 / 1, 00 ಎಕರೆ 34 ಗುಂಟೆ ಮತ್ತು ಸ.ನಂ. 499 / 2, 00 ಎಕರೆ 21 ಗುಂಟೆ, ಡಾ., ಕೆ. ಇ. ಕುಮಾರಸ್ವಾಮಿ ಇವರಿಗೆ ಸೇರಿದ ಸ. ನಂ. 499 / 2, 00 ಎಕರೆ 21 ಗುಂಟೆ ನಕ್ಷೆ ಅನುಮೋದನೆ ಪಡೆಯಲು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ.**

ಡಾ,. ಎನ್. ರಘು ಮತ್ತು ಡಾ,. ಕೆ. ಇ. ಕುಮಾರಸ್ವಾಮಿ ಇವರಿಗೆ ಸೇರಿದ ಹಿರೇಮಗಳೂರು ಗ್ರಾಮದ ಸ.ನಂ. 499 /1 ರಲ್ಲಿ 0.34 ಗುಂಟೆ, ಸ.ನಂ. 499 / 2 ರಲ್ಲಿನ 0.21 ಗುಂಟೆ ಪ್ರದೇಶಕ್ಕೆ ವಸತಿ ರೂಪರೇಖೆಗೆ ಅನುಮೋದನೆ ನೀಡುವ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಅನ್ವಯ ವಿವರವಾದ ವರದಿ ಹಾಗೂ ನಗರ ಯೋಜನಾ ಸದ್ಯಸರ ಅಭಿಪ್ರಾಯ ಹಾಗೂ ಇತ್ತೀಚಿನ ಸರ್ಕಾರದ ಸುತ್ತೋಲೆಗಳ ಅನ್ವಯ ಹಾಗೂ ರೂಪರೇಖೆಯೊಂದಿಗೆ ಮುಂದಿನ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 2.**

ನಗರಾಭಿವೃದ್ಧಿ ಪ್ರಾಧಿಕಾರದ ಕಛೇರಿಯಲ್ಲಿ ಹಾಲಿ ದಿನಗೂಲಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶ್ರೀ ವೈ. ಬಿ. ಕುಮಾರ ಸ್ವಾಮಿ ಮತ್ತು ಶ್ರೀ ಎ. ಪ್ರಭಾಕರ್ ಇವರುಗಳಿಗೆ ಹಾಸನ ಲೋಕಪಯೋಗಿ ವೃತ್ತದ ಎಸ್.ಆರ್. ದರದಂತೆ ವೇತನ ಪಾವತಿ ನೀಡುವ ಬಗ್ಗೆ. ಸಭೆಯ ಮುಂದೆ ಮಂಡಿಸಿದೆ.

**ಟಿಪ್ಪಣಿ.**

ಗೌರವಾನ್ವಿತ ಕಾರ್ಮಿಕ ನ್ಯಾಯಾಲಯದ ಮತ್ತು ಗೌರವಾನ್ವಿತ ಉಚ್ಛ ನ್ಯಾಯಾಲಯದ ಆದೇಶದಂತೆ ಮೇರೆಗೆ ಶ್ರೀ ವೈ. ಬಿ. ಕುಮಾರಸ್ವಾಮಿ, ವರ್ಕ್ ಇನ್‌ಸ್ಪೆಕ್ಟರ್ ಇವರನ್ನು ಕೆಲಸಕ್ಕೆ ತೆಗೆದುಕೊಂಡಿರುವ ಬಗ್ಗೆ ಮತ್ತು ನಾಲ್ಕನೇ ದರ್ಜೆ ನೌಕರರಾದ ಶ್ರೀ ಎ. ಪ್ರಭಾಕರ ಇವರಿಗೆ ಲೋಕೋಪಯೋಗಿ ಇಲಾಖೆ ಹಾಸನದ ಎಸ್‌ಆರ್ ದರ ಸೂಚಿಯಂತೆ ಒಟ್ಟಾರೆ ಮಾಸಿಕ ವೇತನ ನೀಡುವ ಬಗ್ಗೆ.

**ತೀರ್ಮಾನ.**

ಗೌರವಾನ್ವಿತ ಕಾರ್ಮಿಕ ನ್ಯಾಯಾಲಯದ ಪ್ರಕರಣ ಸಂಖ್ಯೆ. ಐಡಿಆರ್ ನಂ. 28 / 2003 ದಿನಾಂಕ: 18-06-2007 ಮತ್ತು ಗೌರವಾನ್ವಿತ ಉಚ್ಛ ನ್ಯಾಯಾಲಯದ ರಿಟ್ ಪಿಟಿಷನ್ ನಂ. 111 / 2008 (L-TER) ದಿನಾಂಕ: 22-01-2008 ರ ತೀರ್ಪುಗಳ ಬಗ್ಗೆ ಮತ್ತು ಕಾರ್ಮಿಕ ನ್ಯಾಯಾಲಯದ ಅವಾರ್ಡಿನ ಮೇರೆಗೆ ಶ್ರೀ ವೈ. ಬಿ. ಕುಮಾರಸ್ವಾಮಿ ಇವರನ್ನು ವರ್ಕ್ ಇನ್‌ಸ್ಪೆಕ್ಟರ್ ಆಗಿ ಈ ಕಛೇರಿಯ ಆದೇಶ ಸಂಖ್ಯೆ. ನಅಪ್ರಾಚಿ : ಸಿಬ್ಬಂದಿ : 76 : 1991-92 : 634 ದಿನಾಂಕ: 21-07-2008 ರಿಂದ ಕೆಲಸಕ್ಕೆ ತೆಗೆದುಕೊಂಡಿರುವ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು ಮತ್ತು ನಾಲ್ಕನೇ ದರ್ಜೆ ನೌಕರರಾದ ಶ್ರೀ ಎ. ಪ್ರಭಾಕರ ಇವರಿಗೆ ಒಟ್ಟಾರೆ ಮಾಸಿಕ ವೇತನ ರೂ. 1450.00 ಗಳನ್ನು ನೀಡುತ್ತಿರುವ ಬಗ್ಗೆ ಸಹ ದೀರ್ಘವಾಗಿ ಚರ್ಚಿಸಲಾಯಿತು ಲೋಕೋಪಯೋಗಿ ಇಲಾಖೆ ಹಾಸನ ವೃತ್ತದ ನಂ. ಸುಇಂ : ಲೋಇ : ಹಾವೃ : ಸಇಂ : 11 : ದಿನಗೂಲಿದರ : 2007-08 ದಿನಾಂಕ: 03-05-2007 ರ ಎಸ್‌ಆರ್ ದರ ಸೂಚಿಯಂತೆ ಒಟ್ಟಾರೆ ಮಾಸಿಕ ವೇತನವನ್ನು ಮೇಲ್ಕಂಡ ಇಬ್ಬರು ನೌಕರರಿಗೂ ನೀಡಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ಚಿಕ್ಕಮಗಳೂರು ನಗರಕ್ಕೆ (ಸಿಡಿಪಿ) ಮಹಾಯೋಜನಾ ಪರಿಷ್ಕೃತ 1 ನ್ನು ತಯಾರಿಸುತ್ತಿರುವ ಬಗ್ಗೆ ಸಾರ್ವಜನಿಕರ ಸಲಹೆ ಸೂಚನೆಗಳನ್ನು ಪಡೆಯುವ ಕುರಿತು.

**ಟಿಪ್ಪಣಿ.**

ಚಿಕ್ಕಮಗಳೂರು ನಗರಕ್ಕೆ (ಸಿಡಿಪಿ) ಮಹಾಯೋಜನಾ ನಕ್ಷೆ ಪರಿಷ್ಕೃತ 1 ನ್ನು ತಯಾರಿಸುತ್ತಿರುವ ಬಗ್ಗೆ ನಗರದ ಸಾರ್ವಜನಿಕರಿಂದ ಸಲಹೆ ಸೂಚನೆಗಳನ್ನು ಸಂಗ್ರಹಿಸುವ ಬಗ್ಗೆ ವಿಶೇಷ ಸಭೆ ಸಮಾರಂಭ ಸೆಮಿನಾರ್‌ಗಳನ್ನು ನೆಡೆಸುವ ಬಗ್ಗೆ ಸಭೆಯ ಮುಂದೆ ವಿಷಯ ಮಂಡಿಸಲಾಯಿತು.

**ತೀರ್ಮಾನ.**

ಚಿಕ್ಕಮಗಳೂರು ನಗರಕ್ಕೆ (ಸಿಡಿಪಿ) ಮಹಾಯೋಜನಾ ಪರಿಷ್ಕೃತ 1 ನ್ನು ತಯಾರಿಸುತ್ತಿರುವ ಹಾಗೂ ಈ ಬಗ್ಗೆ ಸಾರ್ವಜನಿಕರಿಂದ ಸಲಹೆ ಸೂಚನೆಗಳನ್ನು 1961 ರ ಪ್ರಕರಣ 10 (1) ರನ್ವಯ ಸ್ಥಳೀಯ ಪತ್ರಿಕೆಗಳಲ್ಲಿ ಹಾಗೂ ರಾಜ್ಯ ಪತ್ರದಲ್ಲಿ ಪ್ರಕಟಿಸಿರುವ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು ಮಾನ್ಯ ಅಧ್ಯಕ್ಷರು ಹಾಗೂ ಜಿಲ್ಲಾಧಿಕಾರಿಗಳು ಈ ಬಗ್ಗೆ ಮಾತ್ತನಾಡುತ್ತ ಚಿಕ್ಕಮಗಳೂರು ನಗರದ ಎಲ್ಲಾ ಜನರ ಗಮನಕ್ಕೆ ಈ ವಿಷಯ ಮುಟ್ಟುವಂತೆ ಸಭೆ ಮತ್ತು ಸೆಮಿನಾರ್‌ಗಳನ್ನು ಏರ್ಪಡಿಸಿ ಎಲ್ಲಾ ಸಾರ್ವಜನಿಕರ ಸಲಹೆ ಸೂಚನೆಗಳನ್ನು ಪಡೆಯಲು ಕ್ರಮವಹಿಸುವಂತೆ ನಗರ ಯೋಜನಾ ಸದಸ್ಯರಿಗೆ ಸೂಚಿಸಲು, ಅದರಂತೆ ಕ್ರಮವಹಿಸ ಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆ ಮುಕ್ತಾಯಗೊಂಡಿತು.**

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 27-09-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು.**

| | | |
|---|---|---|
| 1 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಅಧ್ಯಕ್ಷರು |
| 2 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 3 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. | ಸದಸ್ಯರು |
| 4 | ಸಹಾಯಕ ನಿರ್ದೇಶಕರು,<br>ನಗರ ಯೋಜನಾ ಇಲಾಖೆ, ಚಿಕ್ಕಮಗಳೂರು. | ನಗರ ಯೋಜನಾ ಸದಸ್ಯರು |
| 5 | ಕಾರ್ಯಪಾಲಕ ಇಂಜಿನಿಯರ್,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. | ಇಂಜಿನಿಯರ್ ಸದಸ್ಯರು |
| 6 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 7 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,<br>ಹಾಸನ (ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 8 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 9 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |

**ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.**

| | | |
|---|---|---|
| 1 | ಮಾನ್ಯ ಶ್ರೀ. ಡಿ. ಎಂ. ಪುಟ್ಟೇಗೌಡ,<br>ವಿಧಾನ ಪರಿಷತ್ ಸದಸ್ಯರು, ಚಿಕ್ಕಮಗಳೂರು. | ಸದಸ್ಯರು |
| 2 | ಸೈಂಟಿಫಿಕ್ ಆಫೀಸರ್,<br>ಪ್ರಕೃತಿ ಮತ್ತು ಪರಿಸರ ಇಲಾಖೆ, ಬೆಂಗಳೂರು. | ಸದಸ್ಯರು |
| 3 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 4 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

**ವಿಷಯ ನಂ 1.**

ದಿನಾಂಕ: 07-08-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳನ್ನು ಪರಿಶೀಲಿಸಿ ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ:**

ದಿನಾಂಕ: 07-08-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದು.

**ತೀರ್ಮಾನ :**

ದಿನಾಂಕ: 07-08-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 2.**

2008 ನೇ ಸಾಲಿನ ಆಗಸ್ಟ್ ತಿಂಗಳ ಆದಾಯ ಮತ್ತು ಖರ್ಚು ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

**ಟಿಪ್ಪಣಿ:**

ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ (1) ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದು.

**ತೀರ್ಮಾನ :**

ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ (1) ರಲ್ಲಿ ತಯಾರಿಸಿ ಪರಿಶೀಲಿಸಲಾಯಿತು, ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ಶ್ರೀ ವೀರಭದ್ರಯ್ಯ ಬಿನ್ ವೀರಯ್ಯ ಇವರು ರಾಮನಹಳ್ಳಿ ಗ್ರಾಮದ ಸರ್ವೆ ನಂ. 81 / 3 ರಲ್ಲಿನ 00 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ :**

ಶ್ರೀ ವೀರಭದ್ರಯ್ಯ ಬಿನ್ ವೀರಯ್ಯ ಇವರು ರಾಮನಹಳ್ಳಿ ಗ್ರಾಮದ ಸರ್ವೆ ನಂ. 81 / 3 ರಲ್ಲಿನ 00 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿದ್ದು ಸದರಿ ಜಮೀನಿಗೆ 18.00 ಮೀಟರ್ ಅಗಲದ (ಪಶ್ಚಿಮ ಭಾಗದಲ್ಲಿ) ಹಾಗೂ ಪ್ರಸ್ತಾವಿತ ಜಾಗದಲ್ಲಿ 9.00 ಮೀಟರ್ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ, ಹಾಗೂ ಸದರಿ ಜಾಗವು ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಲಾಗಿದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಲು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಸದರಿ ಪ್ರದೇಶದ ಸ್ಥಳ ಪರಿಶೀಲಿಸಲಾಯಿತು, ರಾಮನಹಳ್ಳಿ ಗ್ರಾಮದ ಸರ್ವೆ ನಂ. 81 / 3 ರಲ್ಲಿನ 00 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿರುತ್ತಾರೆ ಹಾಗೂ ಸದರಿ ಜಾಗಕ್ಕೆ ಲೇಔಟ್ ಅನುಮೋದನೆ ನೀಡಲು ನಿಯಮಾನುಸಾರ ಕ್ರಮವಹಿಸಬೇಕಾಗಿರುತ್ತದೆ ಅದರಂತೆ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳಬೇಕಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀ ವೀರಭದ್ರಯ್ಯ ಬಿನ್ ವೀರಯ್ಯ ಇವರು ರಾಮನಹಳ್ಳಿ ಗ್ರಾಮದ ಸರ್ವೆ ನಂ. 81 / 3 ರಲ್ಲಿನ 00 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನಿಗೆ ರೂಪರೇಖೆ ಕೋರಿರುತ್ತಾರೆ, ಸದರಿ ಜಾಗಕ್ಕೆ ಯೋಜನಾ ಬದ್ಧವಾದ ರಸ್ತೆ ಪರಿಚಲನೆಯನ್ನು ಅಳವಡಿಸಿ ರೂಪರೇಖೆಯನ್ನು ಅನುಮೋದಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 522 : ಮೈಅಪ್ರಾ : 2005, ದಿನಾಂಕ: 10-03-2006 ರನ್ವಯ ಕ್ರಮವಹಿಸಿ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 4.**

ಶ್ರೀ ಬಾಲಕೃಷ್ಣ ಬಿನ್ ಸಿ. ಬಿ. ಅಣ್ಣಪ್ಪರಾವ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ :**

ಶ್ರೀ ಬಾಲಕೃಷ್ಣ ಬಿನ್ ಸಿ. ಬಿ. ಅಣ್ಣಪ್ಪರಾವ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿದ್ದು ಸದರಿ ಜಮೀನಿಗೆ 9.00 ಮೀಟರ್ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ, ಹಾಗೂ ಸದರಿ ಜಾಗವು ವ್ಯಾಪಕಾಭಿವೃದ್ದಿ ಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಲಾಗಿದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಲು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಸದರಿ ಪ್ರದೇಶದ ಸ್ಥಳ ಪರಿಶೀಲಿಸಲಾಯಿತು, ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿರುತ್ತಾರೆ ಹಾಗೂ ಸದರಿ ಜಾಗಕ್ಕೆ ಲೇಔಟ್ ಅನುಮೋದನೆ ನೀಡಲು ನಿಯಮಾನುಸಾರ ಕ್ರಮವಹಿಸಬೇಕಾಗಿರುತ್ತದೆ, ಅದರಂತೆ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳಬೇಕಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀ ಬಾಲಕೃಷ್ಣ ಬಿನ್ ಸಿ. ಬಿ. ಅಣ್ಣಪ್ಪರಾವ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 15 ಗುಂಟೆ ವಿಸ್ತೀರ್ಣದ ಜಮೀನಿಗೆ ರೂಪರೇಖೆ ಕೋರಿರುತ್ತಾರೆ, ಸದರಿ ಜಾಗಕ್ಕೆ ಯೋಜನಾ ಬದ್ಧವಾದ ರಸ್ತೆ ಪರಿಚಲನೆಯನ್ನು ಅಳವಡಿಸಿ ರೂಪರೇಖೆಯನ್ನು ಅನುಮೋದಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 522 : ಮೈಅಪ್ರಾ : 2005, ದಿನಾಂಕ: 10-03-2006 ರನ್ವಯ ಕ್ರಮವಹಿಸಿ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 5.**

ಶ್ರೀಮತಿ ಕೃಷ್ಣಮ್ಮ ಕೊಂ ಕೇಶವ ನಾಯ್ಡು ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 13 ಗುಂಟೆ ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ :**

ಶ್ರೀಮತಿ ಕೃಷ್ಣಮ್ಮ ಕೊಂ ಕೇಶವ ನಾಯ್ಡು ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 13 ಗುಂಟೆ ವಿಸ್ತೀರ್ಣದ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿದ್ದು ಸದರಿ ಜಮೀನಿಗೆ 9.00 ಮೀಟರ್ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ, ಹಾಗೂ ಸದರಿ ಜಾಗವು ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಲಾಗಿದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಲು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಸದರಿ ಪ್ರದೇಶದ ಸ್ಥಳ ಪರಿಶೀಲಿಸಲಾಯಿತು, ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 13 ಗುಂಟೆ ವಿಸ್ತೀರ್ಣದ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿರುತ್ತಾರೆ ಹಾಗೂ ಸದರಿ ಜಾಗಕ್ಕೆ ಲೇಔಟ್ ಅನುಮೋದನೆ ನೀಡಲು ನಿಯಮಾನುಸಾರ ಕ್ರಮವಹಿಸಬೇಕಾಗಿರುತ್ತದೆ, ಅದರಂತೆ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳಬೇಕಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀಮತಿ ಕೃಷ್ಣಮ್ಮ ಕೊಂ ಕೇಶವ ನಾಯ್ಡು ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 13 ಗುಂಟೆ ವಿಸ್ತೀರ್ಣದ ಜಮೀನಿಗೆ ರೂಪರೇಖೆ ಕೋರಿರುತ್ತಾರೆ, ಸದರಿ ಜಾಗಕ್ಕೆ ಯೋಜನಾ ಬದ್ದವಾದ ರಸ್ತೆ ಪರಿಚಲನೆಯನ್ನು ಅಳವಡಿಸಿ ರೂಪರೇಖೆಯನ್ನು ಅನುಮೋದಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 522 : ಮೈಅಪ್ರಾ : 2005, ದಿನಾಂಕ: 10-03-2006 ರನ್ವಯ ಕ್ರಮವಹಿಸಿ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 6.**

ಶ್ರೀ ಬಾಲಕೃಷ್ಣ ಬಿನ್ ಸಿ. ಬಿ. ಅಣ್ಣಪ್ಪರಾವ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 35 ಗುಂಟೆ ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ :**

ಶ್ರೀ ಬಾಲಕೃಷ್ಣ ಬಿನ್ ಸಿ. ಬಿ. ಅಣ್ಣಪ್ಪರಾವ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 35 ಗುಂಟೆ ವಿಸ್ತೀರ್ಣದ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿದ್ದು ಸದರಿ ಜಮೀನಿಗೆ 9.00 ಮೀಟರ್ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ, ಹಾಗೂ ಸದರಿ ಜಾಗವು ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಲಾಗಿದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಲು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಸದರಿ ಪ್ರದೇಶದ ಸ್ಥಳ ಪರಿಶೀಲಿಸಲಾಯಿತು, ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 35 ಗುಂಟೆ ವಿಸ್ತೀರ್ಣದ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿರುತ್ತಾರೆ ಹಾಗೂ ಸದರಿ ಜಾಗಕ್ಕೆ ಲೇಔಟ್ ಅನುಮೋದನೆ ನೀಡಲು ನಿಯಮಾನುಸಾರ ಕ್ರಮವಹಿಸಬೇಕಾಗಿರುತ್ತದೆ, ಅದರಂತೆ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳಬೇಕಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀ ಬಾಲಕೃಷ್ಣ ಬಿನ್ ಸಿ. ಬಿ. ಅಣ್ಣಪ್ಪರಾವ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 35 ಗುಂಟೆ ವಿಸ್ತೀರ್ಣದ ಜಮೀನಿಗೆ ರೂಪರೇಖೆ ಕೋರಿರುತ್ತಾರೆ, ಸದರಿ ಜಾಗಕ್ಕೆ ಯೋಜನಾ ಬದ್ಧವಾದ ರಸ್ತೆ ಪರಿಚಲನೆಯನ್ನು ಅಳವಡಿಸಿ ರೂಪರೇಖೆಯನ್ನು ಅನುಮೋದಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 522 : ಮೈಅಪ್ರಾ : 2005, ದಿನಾಂಕ: 10-03-2006 ರನ್ವಯ ಕ್ರಮವಹಿಸಿ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 7.**

ಶ್ರೀಮತಿ ಎಂ. ಎಸ್. ಲತಾ ಕೊಂ ಬಿ. ಎ. ಬಾಲಕೃಷ್ಣ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 23 ಗುಂಟೆ ವಿಸ್ತೀರ್ಣದ ಜಮೀನಿಗೆ ವಸತಿ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ :**

ಶ್ರೀಮತಿ ಎಂ. ಎಸ್. ಲತಾ ಕೊಂ ಬಿ. ಎ. ಬಾಲಕೃಷ್ಣ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 23 ಗುಂಟೆ ವಿಸ್ತೀರ್ಣದ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿದ್ದು ಸದರಿ ಜಮೀನಿಗೆ 9.00 ಮೀಟರ್ ಅಗಲದ ರಸ್ತೆಯಿಂದ ಸಂಪರ್ಕವಿರುತ್ತದೆ, ಹಾಗೂ ಸದರಿ ಜಾಗವು ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಲಾಗಿದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಲು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಸದರಿ ಪ್ರದೇಶದ ಸ್ಥಳ ಪರಿಶೀಲಿಸಲಾಯಿತು, ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 23 ಗುಂಟೆ ವಿಸ್ತೀರ್ಣದ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿರುತ್ತಾರೆ ಹಾಗೂ ಸದರಿ ಜಾಗಕ್ಕೆ ಲೇಔಟ್ ಅನುಮೋದನೆ ನೀಡಲು ನಿಯಮಾನುಸಾರ ಕ್ರಮವಹಿಸಬೇಕಾಗಿರುತ್ತದೆ, ಅದರಂತೆ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳಬೇಕಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀಮತಿ ಎಂ. ಎಸ್. ಲತಾ ಕೊಂ ಬಿ. ಎ. ಬಾಲಕೃಷ್ಣ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 77 / P2 ರಲ್ಲಿನ 00 ಎಕರೆ 23 ಗುಂಟೆ ವಿಸ್ತೀರ್ಣದ ಜಮೀನಿಗೆ ರೂಪರೇಖೆ ಕೋರಿರುತ್ತಾರೆ, ಸದರಿ ಜಾಗಕ್ಕೆ ಯೋಜನಾ ಬದ್ಧವಾದ ರಸ್ತೆ ಪರಿಚಲನೆಯನ್ನು ಅಳವಡಿಸಿ ರೂಪರೇಖೆಯನ್ನು ಅನುಮೋದಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 522 : ಮೈಅಪ್ರಾ : 2005, ದಿನಾಂಕ: 10-03-2006 ರನ್ವಯ ಕ್ರಮವಹಿಸಿ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 8.**

ಚಿಕ್ಕಮಗಳೂರು ನಗರದ ಮಹಾಯೋಜನೆ ಪರಿಷ್ಕೃತ – 1 ರ ಬಗ್ಗೆ ದಿನಾಂಕ: 19-09-2008 ರಂದು ಸಾರ್ವಜನಿಕರಿಂದ ಸಲಹೆ ಸೂಚನೆ ಸ್ವೀಕರಿಸಲಾಗಿದ್ದು ಮಹಾಯೋಜನೆ ಪರಿಷ್ಕೃತ – 1 ರ ತಾತ್ಕಾಲಿಕ (Provisional) ಪ್ರತಿಯನ್ನು ಸರ್ಕಾರದ ಅನುಮೋದನೆಗಾಗಿ ಸಲ್ಲಿಸುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರದ ಮಹಾಯೋಜನೆ ಪರಿಷ್ಕೃತ – 1 ರ ಬಗ್ಗೆ ದಿನಾಂಕ: 19-09-2008 ರಂದು ಸಾರ್ವಜನಿಕರಿಂದ ಸಲಹೆ ಸೂಚನೆಗಳನ್ನು ಸ್ವೀಕರಿಸಲಾಗಿದೆ, ಹಾಗೂ ಈ ಹಿಂದೆ ನಗರ ಯೋಜನಾ ಪ್ರಾಧಿಕಾರವು ಅನುಮೋದಿಸಿರುವ ಸುಮಾರು 62 ವಿನ್ಯಾಸಗಳು ಅನುಮೋದನೆಯಾಗಿದ್ದು ಅವುಗಳು ಸರ್ಕಾರದ ಮಟ್ಟದಲ್ಲಿ ಪರಿಶೀಲನೆಯಲ್ಲಿರುತ್ತದೆ, ಈಗ ಭೂಮಿಯ ಮೇಲೆ ಲಭ್ಯವಿರುವಂತೆ ಅವುಗಳನ್ನು ಮಹಾ ಯೋಜನೆಯಲ್ಲಿ ಅಳವಡಿಸಿಕೊಂಡು ಮಹಾಯೋಜನೆ ಪರಿಷ್ಕೃತ – 1 ರ ತಾತ್ಕಾಲಿಕ (Provisional) ಯೋಜನಾ ಬದ್ದವಾಗಿ ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ. 13 (ಡಿ) ರನ್ವಯ ತಯಾರಿಸಲಾಗಿದೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 10 ರನ್ವಯ ಸಾರ್ವಜನಿಕರ ಸಲಹೆ ಸೂಚನೆಗಳನ್ನು ಪಡೆದು ತಯಾರಿಸಲಾಗಿರುವ ಮಹಾ ಯೋಜನೆಯ ತಾತ್ಕಾಲಿಕ (Provisional) ನಕ್ಷೆಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲು ವಿಷಯವನ್ನು ಸಭೆಯ ಮುಂದೆ ಮಂಡಿಸಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ನಗರದ ಮಹಾಯೋಜನೆ ಪರಿಷ್ಕೃತ – 1 ರ ಬಗ್ಗೆ ದಿನಾಂಕ: 19-09-2008 ರಂದು ನಡೆದ ಸಭೆಯಲ್ಲಿ ಸಾರ್ವಜನಿಕರಿಂದ ಸಲಹೆ ಸೂಚನೆಗಳನ್ನು ಸ್ವೀಕರಿಸಲಾಗಿದೆ ಈ ಸಂಬಂದ ಮಹಾಯೋಜನೆ ಪರಿಷ್ಕೃತ – 1 ರ ತಾತ್ಕಾಲಿಕ (Provisional) ನ್ನು ಯೋಜನಾ ಬದ್ದವಾಗಿ ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ. 13 (ಡಿ) ಮತ್ತು ಕಲಂ. 10 ರನ್ವಯ ತಯಾರಿಸಲಾಗಿದೆ, ಸದರಿ ವಿಷಯದ ಬಗ್ಗೆ ಸಾರ್ವಜನಿಕರ ಸಲಹೆ ಸೂಚನೆಗಳನ್ನು ಪರಿಶೀಲಿಸಿ ತಯಾರಿಸಲಾಗಿರುವ ಮಹಾ ಯೋಜನೆಯ ತಾತ್ಕಾಲಿಕ (Provisional) ನಕ್ಷೆಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಲು ವಿಷಯವನ್ನು ಸಭೆಯ ಮುಂದೆ ಮಂಡಿಸಲಾಗಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರದ ಮಹಾಯೋಜನೆ ಪರಿಷ್ಕೃತ – 1 ರ ಬಗ್ಗೆ ದಿನಾಂಕ: 19-09-2008 ರಂದು ಸಾರ್ವಜನಿಕರಿಂದ ಸಲಹೆ ಸೂಚನೆಗಳನ್ನು ಸ್ವೀಕರಿಸಲಾಗಿದೆ, ಹಾಗೂ ಈ ಹಿಂದೆ ನಗರ ಯೋಜನಾ ಪ್ರಾಧಿಕಾರವು ಅನುಮೋದಿಸಿರುವ ಸುಮಾರು 62 ವಿನ್ಯಾಸಗಳು ಅನುಮೋದನೆಯಾಗಿದ್ದು ಅವುಗಳು ಸರ್ಕಾರಕ್ಕೆ ಪರಿಶೀಲನೆಗಾಗಿ ಸಲ್ಲಿಸಲಾಗಿದೆ. ಈಗ ಭೂಮಿಯ ಮೇಲೆ ಲಭ್ಯವಿರುವಂತೆ ಹಾಲಿ ಬೆಳವಣಿಗೆಗಳನ್ನು ಮಹಾ ಯೋಜನೆಯಲ್ಲಿ ಅಳವಡಿಸಿಕೊಂಡು ಮಹಾಯೋಜನೆ ಪರಿಷ್ಕೃತ – 1 ರ ತಾತ್ಕಾಲಿಕ (Provisional) ಯೋಜನಾ ಬದ್ದವಾಗಿ ಹಾಗೂ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ. 13 (ಡಿ) ರನ್ವಯ ತಯಾರಿಸಲಾಗಿದೆ, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 10 ರನ್ವಯ ಸಾರ್ವಜನಿಕರ ಸಲಹೆ ಸೂಚನೆಗಳನ್ನು ಪಡೆದು ತಯಾರಿಸಲಾಗಿರುವ ಮಹಾ ಯೋಜನೆಯ ತಾತ್ಕಾಲಿಕ (Provisional) ನಕ್ಷೆಯನ್ನು ಸರ್ಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಿ ಸರ್ಕಾರದ ಅನುಮೋದನೆ ಪಡೆಯಬೇಕೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 9.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯ 1, 2, 3 ಮತ್ತು 4 ನೇ ಹಂತದಲ್ಲಿನ ವಿವಿದ ಕಾಮಗಾರಿಗಳನ್ನು ಅಭಿವೃದ್ದಿಪಡಿಸುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯ 1, 2, 3 ಮತ್ತು 4 ನೇ ಹಂತದಲ್ಲಿ ವಿವಿದ ಕಾಮಗಾರಿಗಳನ್ನು ನಿರ್ವಹಿಸಿದ್ದು ಇನ್ನು ಕೆಲವು ಭಾಗಗಳಲ್ಲಿ ಕಾಮಗಾರಿಗಳು ಉಳಿದಿದ್ದು ಅವುಗಳನ್ನು ಅಭಿವೃದ್ಧಿಪಡಿಸಬೇಕಾಗಿರುತ್ತದೆ, ಹಾಗೂ ಪ್ರಾಧಿಕಾರದ ವಸತಿ ಬಡಾವಣೆಯ 3 ನೇ ಹಂತದಲ್ಲಿನ ಉದ್ಯಾನವನವನ್ನು ಅಭಿವೃದ್ಧಿ ಪಡಿಸಬೇಕಾಗಿರುತ್ತದೆ, ಅದರಂತೆ ಸದರಿ ಕಾಮಗಾರಿಯ ಅಂದಾಜು ಪಟ್ಟಿಗಳನ್ನು ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆಯಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ನಿರ್ವಹಿಸಬಹುದಾಗಿರುತ್ತದೆ. ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯ 1, 2, 3 ಮತ್ತು 4 ನೇ ಹಂತದಲ್ಲಿ ವಿವಿದ ಕಾಮಗಾರಿಗಳನ್ನು ನಿರ್ವಹಿಸಿದ್ದು ಇನ್ನು ಕೆಲವು ಭಾಗಗಳಲ್ಲಿ ಕಾಮಗಾರಿಗಳು ಉಳಿದಿದ್ದು ಅವುಗಳನ್ನು ಅಭಿವೃದ್ಧಿಪಡಿಸಬಹುದೆಂದು ಹಾಗೂ ಪ್ರಾಧಿಕಾರದ ವಸತಿ ಬಡಾವಣೆಯ 3 ನೇ ಹಂತದಲ್ಲಿನ ಉದ್ಯಾನವನವನ್ನು ವಸತಿ ಬಡಾವಣೆಯಲ್ಲಿ ಹೆಚ್ಚು ಮನೆಗಳು ಬಂದ ನಂತರ ಅಭಿವೃದ್ಧಿ ಪಡಿಸಲು ಸೂಚಿಸಲಾಯಿತು, ಇನ್ನುಳಿದ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಅಭಿವೃದ್ಧಿ ಪಡಿಸಲು ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ಚಿಕ್ಕಮಗಳೂರು ಇವರಿಂದ ತಾಂತ್ರಿಕ ಅನುಮೋದನೆ ಪಡೆದು, ನಿಯಮಾನುಸಾರ ಕಾಮಗಾರಿಗಳನ್ನು ನಿರ್ವಹಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 10.**

ಡಾ., ಎನ್. ರಘು ಇವರಿಗೆ ಸೇರಿದ ಸ.ನಂ. 499 / 1, ರಲ್ಲಿನ 00 ಎಕರೆ 34 ಗುಂಟೆ ಮತ್ತು ಸ.ನಂ. 499 / 2, ರಲ್ಲಿನ 00 ಎಕರೆ 21 ಗುಂಟೆ ಜಮೀನಿಗೆ ವಸತಿ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ :**

ಸದರಿ ವಿಷಯವನ್ನು ದಿನಾಂಕ: 07-08-2008 ರ ಸಭೆಯ ತೀರ್ಮಾನದಂತೆ ಈ ಸಭೆಗೆ ಮಂಡಿಸಿದೆ, ಡಾ., ಎನ್. ರಘು ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 499 / 1 ರಲ್ಲಿನ 00 ಎಕರೆ 34 ಗುಂಟೆ ವಿಸ್ತೀರ್ಣದ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿದ್ದು ಸದರಿ ಜಮೀನಿಗೆ ಬೈ–ಪಾಸ್ ರಸ್ತೆಯಿಂದ ಸಂಪರ್ಕವಿರುತ್ತದೆ, ಹಾಗೂ ಸದರಿ ಜಾಗವು ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಲಾಗಿದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಲು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಸದರಿ ಪ್ರದೇಶದ ಸ್ಥಳ ಪರಿಶೀಲಿಸಲಾಯಿತು, ಹಿರೇಮಗಳೂರು ಗ್ರಾಮದ ಸರ್ವೆ ನಂ. 499 / 1 ರಲ್ಲಿನ 00 ಎಕರೆ 34 ಗುಂಟೆ ವಿಸ್ತೀರ್ಣದ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿರುತ್ತಾರೆ ಹಾಗೂ ಸದರಿ ಜಾಗಕ್ಕೆ ಲೇಔಟ್ ಅನುಮೋದನೆ ನೀಡಲು ನಿಯಮಾನುಸಾರ ಕ್ರಮವಹಿಸಬೇಕಾಗಿರುತ್ತದೆ, ಅದರಂತೆ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳಬೇಕಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಡಾ., ಎನ್. ರಘು ಇವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 499 / 1 ರಲ್ಲಿನ 00 ಎಕರೆ 34 ಗುಂಟೆ ವಿಸ್ತೀರ್ಣದ ಜಮೀನಿಗೆ ರೂಪರೇಖೆ ಕೋರಿರುತ್ತಾರೆ, ಸದರಿ ಜಾಗಕ್ಕೆ ಯೋಜನಾ ಬದ್ದವಾದ ರಸ್ತೆ ಪರಿಚಲನೆಯನ್ನು ಅಳವಡಿಸಿ ರೂಪರೇಖೆಯನ್ನು ಅನುಮೋದಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 522 : ಮೈಅಪ್ರಾ : 2005, ದಿನಾಂಕ: 10-03-2006 ರನ್ವಯ ಕ್ರಮವಹಿಸಿ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 11.**

ಡಾ., ಎನ್. ರಘು ಇವರಿಗೆ ಸೇರಿದ ಸ. ನಂ. 499 / 2, 00 ಎಕರೆ 21 ಗುಂಟೆ ಜಮೀನಿಗೆ ವಸತಿ ವಿನ್ಯಾಸ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ :**

ಸದರಿ ವಿಷಯವನ್ನು ದಿನಾಂಕ: 07-08-2008 ರ ಸಭೆಯ ತೀರ್ಮಾನದಂತೆ ಈ ಸಭೆಗೆ ಮಂಡಿಸಿದೆ, ಡಾ., ಎನ್. ರಘು ಇವರಿಗೆ ಸೇರಿದ ಸರ್ವೆ ನಂ. 499 / 1, 00 ಎಕರೆ 34 ಗುಂಟೆ ಮತ್ತು ಸ.ನಂ. 499 / 2, 00 ಎಕರೆ 21 ಗುಂಟೆ, ಡಾ., ಕೆ. ಇ. ಕುಮಾರಸ್ವಾಮಿ ಇವರಿಗೆ ಸೇರಿದ ಸ. ನಂ. 499 / 2, 00 ಎಕರೆ 21 ಗುಂಟೆ ಭೂಮಿಯು 15-03-1995 ರಂದು ಜಿಲ್ಲಾಧಿಕಾರಿಗಳವರಿಂದ ವ್ಯವಸಾಯೇತರ ವಸತಿ ನಿವೇಶನಗಳ ಉದ್ದೇಶಕ್ಕೆ ಪರಿವರ್ತಿಸಿ ಆದೇಶವಾಗಿದ್ದು ಈಗ ಲೇಔಟ್ ಅನುಮೋದನೆ ಮಾಡಿಕೊಡಲು ಕೋರಿರುತ್ತಾರೆ. ಸಂಬಂದಿಸಿದಂತೆ ನಗರಯೋಜನಾ ಇಲಾಖೆಯಿಂದ ತಾಂತ್ರಿಕ ಅಭಿಪ್ರಾಯ ಪಡೆದು ಅನುಮೋದನೆ ನೀಡಬಹುದಾಗಿದೆ. ನಕ್ಷೆ ಅನುಮೋದನೆ ಪಡೆಯಲು ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಸದರಿ ಪ್ರದೇಶದ ಸ್ಥಳ ಪರಿಶೀಲಿಸಲಾಯಿತು, ಹಿರೇಮಗಳೂರು ಗ್ರಾಮದ ಸರ್ವೆ ನಂ. 499 / 1, 00 ಎಕರೆ 34 ಗುಂಟೆ ಮತ್ತು ಸ.ನಂ. 499 / 2, 00 ಎಕರೆ 21 ಗುಂಟೆ, ಡಾ., ಕೆ. ಇ. ಕುಮಾರಸ್ವಾಮಿ ಇವರಿಗೆ ಸೇರಿದ ಸ. ನಂ. 499 / 2, 00 ಎಕರೆ 21 ಗುಂಟೆ ಭೂಮಿಯು 15-03-1995 ರಂದು ಜಿಲ್ಲಾಧಿಕಾರಿಗಳವರಿಂದ ವ್ಯವಸಾಯೇತರ ವಸತಿ ನಿವೇಶನಗಳ ಉದ್ದೇಶಕ್ಕೆ ಪರಿವರ್ತಿಸಿ ಆದೇಶವಾಗಿದ್ದು ಈಗ ಲೇಔಟ್ ಅನುಮೋದನೆ ನೀಡಲು ನಿಯಮಾನುಸಾರ ಕ್ರಮವಹಿಸಬೇಕಾಗಿರುತ್ತದೆ, ಅದರಂತೆ ಅದರಂತೆ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ನಿರ್ಣಯ ಕೈಗೊಳ್ಳಬೇಕಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಡಾ., ಎನ್. ರಘು ಇವರಿಗೆ ಸೇರಿದ ಸರ್ವೆ ನಂ. 499 / 1, 00 ಎಕರೆ 34 ಗುಂಟೆ ಮತ್ತು ಸ.ನಂ. 499 / 2, 00 ಎಕರೆ 21 ಗುಂಟೆ, ಡಾ., ಕೆ. ಇ. ಕುಮಾರಸ್ವಾಮಿ ಇವರಿಗೆ ಸೇರಿದ ಸ. ನಂ. 499 / 2, 00 ಎಕರೆ 21 ಗುಂಟೆ ವಿಸ್ತೀರ್ಣದ ಜಮೀನಿಗೆ ರೂಪರೇಖೆ ಕೋರಿರುತ್ತಾರೆ, ಸದರಿ ಜಾಗಕ್ಕೆ ಯೋಜನಾ ಬದ್ದವಾದ ರಸ್ತೆ ಪರಿಚಲನೆಯನ್ನು ಅಳವಡಿಸಿ ರೂಪರೇಖೆಯನ್ನು ಅನುಮೋದಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 522 : ಮೈಅಪ್ರಾ : 2005, ದಿನಾಂಕ: 10-03-2006 ರನ್ವಯ ಕ್ರಮವಹಿಸಿ ವಿನ್ಯಾಸ ಅನುಮೋದನೆ ನೀಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

## ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯಗಳು :

**ವಿಷಯ ನಂ 1.**

ಪ್ರಾಧಿಕಾರದ ಕಛೇರಿಯಲ್ಲಿ, ವೆಬ್‌ಸೈಟ್ ಅಭಿವೃದ್ಧಿ ಪಡಿಸುವ ಕುರಿತು ಬರಬಹುದಾದ ವೆಚ್ಛಕ್ಕೆ ಸಭೆಯ ಅನುಮೋದನೆ ಕುರಿತು.

**ಟಿಪ್ಪಣಿ :**

ಪ್ರಾಧಿಕಾರದ ಕಛೇರಿಯಲ್ಲಿ ವೆಬ್‌ಸೈಟ್ ಅಭಿವೃದ್ಧಿ ಪಡಿಸಬೇಕಾದ ಬಗ್ಗೆ, ಬರಬಹುದಾದ ವೆಚ್ಛಕ್ಕೆ ಅನುಮೋದನೆ ನೀಡುವ ಬಗ್ಗೆ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಪ್ರಾಧಿಕಾರದ ಕಛೇರಿಯಲ್ಲಿ ವೆಬ್‌ಸೈಟ್ ಸೌಲಭ್ಯವು ಇರುವುದಿಲ್ಲವಾದ್ದರಿಂದ ಪ್ರಾಧಿಕಾರದ ಕಛೇರಿಗೆ ವೆಬ್ ಸೈಟ್ ಅಳವಡಿಸುವುದರಿಂದ ಚಿಕ್ಕಮಗಳೂರು ಪಟ್ಟಣದ ವ್ಯಾಪ್ತಿಗೊಳಪಟ್ಟಂತೆ ಸವಿವರವಾದ ಮಾಹಿತಿಯನ್ನೊಳಗೊಂಡ ಹಾಗೂ ಪ್ರಾಧಿಕಾರದ ಕಛೇರಿಯ ಮಾಹಿತಿಗಳನ್ನು ತಯಾರಿಸಿಕೊಂಡು ಅಭಿವೃದ್ಧಿ ಪಡಿಸಲು ಆಗುವ ವೆಚ್ಚವನ್ನು ನಿಯಮಾನುಸಾರ ಪ್ರಾಧಿಕಾರದಿಂದ ಪಾವತಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಗಿದೆ.

**ವಿಷಯ ನಂ 2.**

ಹಿರೇಮಗಳೂರು ಗ್ರಾಮದ ಸರ್ವೆ ನಂ. 376 ರಿಂದ 355 ಮತ್ತಿತರೇ ಜಮೀನುಗಳನ್ನು ಭೂ ಸ್ವಾಧೀನ ಪಡಿಸಿಕೊಂಡು ಪ್ರಾಧಿಕಾರದಿಂದ ವಸತಿ ಯೋಜನೆಯನ್ನು ರೂಪಿಸುವ ಸಂಬಂಧ.

**ಟಿಪ್ಪಣಿ :**

ಹಿರೇಮಗಳೂರು ಬೈಪಾಸ್ ರಸ್ತೆಯಿಂದ ಪೂರ್ವ ಭಾಗದಲ್ಲಿನ ಜಮೀನುಗಳನ್ನು ಭೂ ಸ್ವಾಧೀನ ಪಡಿಸಿಕೊಂಡು ಪ್ರಾಧಿಕಾರದಿಂದ ವಸತಿ ಯೋಜನೆಯನ್ನು ರೂಪಿಸುವ ಸಂಬಂಧ ಈ ಜಮೀನುಗಳನ್ನು ಆಯುಕ್ತರವರೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಸದರಿ ಜಮೀನುಗಳು ಹಿರೇಮಗಳೂರು ಗ್ರಾಮದ ಸರ್ವೆ ನಂ. 376 ರಿಂದ 355 ರವರೆಗಿನ ಹಾಗೂ ಮತ್ತಿತರೇ ಸರ್ವೆ ನಂಬರುಗಳ ಜಮೀನುಗಳಲ್ಲಿ ಅಂದಾಜು 40 ಎಕರೆ ಜಮೀನುಗಳನ್ನು ಭೂ ಸ್ವಾಧೀನ ಪಡಿಸಿಕೊಂಡು ವಸತಿ ಯೋಜನೆಯನ್ನು ರೂಪಿಸಲು ಕ್ರಮ ವಹಿಸಬಹುದಾಗಿರುತ್ತದೆ. ಸದರಿ ಜಮೀನುಗಳು ಪಟ್ಟಣದ ಮಧ್ಯಭಾಗದಿಂದ 3.00 ಕಿ.ಮೀ. ದೂರದಲ್ಲಿರುತ್ತದೆ. ಅದರಂತೆ ಸದರಿ ವಿಷಯವನ್ನು ಪ್ರಾಧಿಕಾರ ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಪ್ರಸ್ತಾವಿತ ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಈಗಾಗಲೇ ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ 60 ಎಕರೆ ಜಮೀನಿಗೆ ರೂಪರೇಖೆ ನಕ್ಷೆಯನ್ನು ತಯಾರಿಸಿದ್ದು, ಈಗ 40 ಎಕರೆ ಭೂಮಿಯನ್ನು ರೂಪ ರೇಖೆ ನಕ್ಷೆಯನ್ನು ತಯಾರಿಸಲು ನಿರ್ದೇಶಿಸಿರುತ್ತಾರೆ. ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು ಹಿಂದೆ 60 ಎಕರೆ ಹಾಗೂ ಪಕ್ಕದಲ್ಲಿರುವ ಈಗ ಸಲ್ಲಿಸಿರುವ 40 ಎಕರೆ ಒಟ್ಟಿಗೆ ಮಾಡಿದರೆ ಅಭಿವೃದ್ಧಿ ಮಾಡಲು ಅನುಕೂಲವಾಗಿರುತ್ತದೆ. ಹಾಗೂ ಒಂದು Comprehensive Development ಮಾಡುವುದು ಸೂಕ್ತ ಎಂದು ಅಭಿಪ್ರಾಯ ನೀಡಲಾಗಿದೆ. ಹಾಗೂ ಈ ಹಿಂದೆ ಸಲ್ಲಿಸಿರುವ 60 ಎಕರೆ ಜಮೀನು ಇನ್ನು ರೂಪರೇಖೆ ನಕ್ಷೆ ತಯಾರಿಸುವ ಹಂತದಲ್ಲಿದ್ದು, ಈಗ ಸಲ್ಲಿಸಿರುವ 40 ಎಕರೆ ಜಮೀನಿನನ್ನು ಸಹ Demond Survey Conduct ಮಾಡಿ, ಹಾಗೂ ಸರ್ವೆ ಮಾಡಿಸಿ, ಒಟ್ಟಿಗೆ ಒಂದು Comprehensive Development ಗೆ ಸಲ್ಲಿಸಲು ಸೂಕ್ತ ಎಂದು ಅಭಿಪ್ರಾಯ ನೀಡಲಾಗಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಸದರಿ ಜಮೀನುಗಳು ಪಟ್ಟಣದ ಮಧ್ಯಭಾಗದಿಂದ 3.00 ಕಿ.ಮೀ. ದೂರದಲ್ಲಿರುತ್ತದೆ. ಹಿರೇಮಗಳೂರು ಗ್ರಾಮದ ಸರ್ವೆ ನಂ. 350, 351, 352, 353, 354, 355, 356, 357, 358, 359, 360, 361, 362, 363, 364, 365, 366, 367, 368, 369, 370, 371 ಮತ್ತು 372 ರವರೆಗಿನ ಹಾಗೂ ಮತ್ತಿತರೇ ಸರ್ವೆ ನಂಬರುಗಳ ಜಮೀನುಗಳು ಹಿರೇಮಗಳೂರು ಬೈಪಾಸ್ ರಸ್ತೆಯಿಂದ ಪೂರ್ವ ಭಾಗದಲ್ಲಿದ್ದು ಸದರಿ ಜಮೀನುಗಳನ್ನು ಭೂ ಸ್ವಾಧೀನ ಪಡಿಸಿಕೊಂಡು ಪ್ರಾಧಿಕಾರದಿಂದ ವಸತಿ ಯೋಜನೆಯನ್ನು ರೂಪಿಸುವ ಸಂಬಂಧ ಈ ಜಮೀನುಗಳನ್ನು ಆಯುಕ್ತರವರೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಸದರಿ ಜಮೀನುಗಳು ಹಿರೇಮಗಳೂರು ಗ್ರಾಮದ ಸರ್ವೆ ನಂ. 350 ರಿಂದ 372 ರವರೆಗಿನ ಹಾಗೂ ಮತ್ತಿತರೇ ಸರ್ವೆ ನಂಬರುಗಳ ಜಮೀನುಗಳಲ್ಲಿ ಈ ಹಿಂದೆ ಸುಮಾರು 60 ಎಕರೆ ಪ್ರದೇಶದಲ್ಲಿ ರೂಪ ರೇಖಾ ನಕ್ಷೆಯನ್ನು ತಯಾರಿಸಲಾಗಿದೆ, ಈಗ ಪ್ರಸ್ತಾಪಿಸಿರುವ ಸುಮಾರು 40 ಎಕರೆ ಪ್ರದೇಶವು ಈಗ ಪ್ರಸ್ತಾಪಿಸಿರುವ 60 ಎಕರೆ ಜಾಗದ ಪಕ್ಕದಲ್ಲಿರುವುದರಿಂದ ಎರಡೂ ಪ್ರದೇಶವನ್ನು ಸೇರಿಸಿ ಒಟ್ಟಿಗೆ ಮಾಡಿದರೆ ಅಭಿವೃದ್ಧಿ ಮಾಡಲು ಅನುಕೂಲವಾಗಿರುತ್ತದೆ. ಹಾಗೂ ಒಂದು Comprehensive Development ಮಾಡುವುದು ಸೂಕ್ತವೆಂದು ನಗರ ಯೋಜನಾ ಸದಸ್ಯರು ಅಭಿಪ್ರಾಯ ನೀಡಿರುತ್ತಾರೆ, ಹಾಗೂ ಈ ಹಿಂದೆ ಸಲ್ಲಿಸಿರುವ 60 ಎಕರೆ ಜಮೀನು ಇನ್ನು ರೂಪರೇಖೆ ನಕ್ಷೆ ತಯಾರಿಸುವ ಹಂತದಲ್ಲಿದ್ದು, ಈಗ ಸಲ್ಲಿಸಿರುವ 40 ಎಕರೆ ಜಮೀನಿನನ್ನು ಸಹ Demond Survey ಮಾಡಿ, ಹಾಗೂ ಸರ್ವೆ ಮಾಡಿಸಿ, ಒಟ್ಟಿಗೆ ಒಂದು Comprehensive Development ಗೆ ಸಲ್ಲಿಸಲು ಸೂಕ್ತ ಎಂದು ಅಭಿಪ್ರಾಯಿಸಿರುವಂತೆ ಸುಮಾರು 100 ಎಕರೆ ಜಮೀನುಗಳನ್ನು ಭೂ ಸ್ವಾಧೀನ ಪಡಿಸಿಕೊಂಡು ಯೋಜನ ಬದ್ದವಾದ ವಸತಿ ಯೋಜನೆಯನ್ನು ತಯಾರಿಸಿ ಸರ್ಕಾರದ ಅನುಮೋದನೆ ಪಡೆದು ರೂಪರೇಖೆಯನ್ನು ಅಭಿವೃದ್ದಿ ಪಡಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ಪ್ರಾಧಿಕಾರದ ಕಛೇರಿಯ ಆಯುಕ್ತರ ಛೇಂಬರ್‌ಗೆ, ಒಂದು ಕಂಪ್ಯೂಟರ್ / ಲ್ಯಾಪ್‌ಟಾಪ್ ಅಳವಡಿಸಲು, ಒಂದು ಕಂಪ್ಯೂಟರ್‌ರನ್ನು ಖರೀದಿ ಮಾಡಿಕೊಳ್ಳುವ ಕುರಿತು.

**ಟಿಪ್ಪಣಿ :**

ಪ್ರಾಧಿಕಾರದ ಕಛೇರಿಯ ಆಯುಕ್ತರ ಛೇಂಬರ್‌ಗೆ, ಒಂದು ಕಂಪ್ಯೂಟರ್ ಅಳವಡಿಸಲು, ಒಂದು ಕಂಪ್ಯೂಟರ್‌ರನ್ನು ಖರೀದಿ ಮಾಡಿಕೊಳ್ಳುವ ಬಗ್ಗೆ, ಅನುಮೋದನೆಗಾಗಿ ಸಭೆ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಪ್ರಾಧಿಕಾರದ ಕಛೇರಿಯಲ್ಲಿ ಎರಡು ಕಂಪ್ಯೂಟರ್‌ಗಳಿದ್ದು ಅವುಗಳಲ್ಲಿ ಆಡಳಿತ ಶಾಖೆ ಮತ್ತು ತಾಂತ್ರಿಕ ಶಾಖೆಯ ಎಲ್ಲಾ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ, ಆದುದರಿಂದ ಆಯುಕ್ತರ ಕೊಠಡಿಗೆ ಒಂದು ಕಂಪ್ಯೂಟರ್ / ಲ್ಯಾಪ್ ಟಾಪ್ ಖರೀದಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 4.**

ಹೌಸಿಂಗ್ ಬೋರ್ಡ್ ಬಡಾವಣೆಯಲ್ಲಿರುವ ಆಯುಕ್ತರ ವಸತಿ ಗೃಹವನ್ನು ದುರಸ್ಥಿಗೊಳಿಸುವ ಬಗ್ಗೆ. ಸಭೆಯ ಅನುಮೋದನೆ ಕುರಿತು.

**ಟಿಪ್ಪಣಿ :**

ಹೌಸಿಂಗ್ ಬೋರ್ಡ್ ಬಡಾವಣೆಯಲ್ಲಿರುವ ಆಯುಕ್ತರ ವಸತಿ ಗೃಹವನ್ನು ದುರಸ್ಥಿಗೊಳಿಸುವ ಬಗ್ಗೆ ವೆಚ್ಚ ಭರಿಸಲು ಅನುಮೋದನೆಗಾಗಿ ಸಭೆ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರದ ಹೌಸಿಂಗ್ ಬೋರ್ಡ್ ಬಡಾವಣೆಯ 3 ನೇ ಹಂತದಲ್ಲಿರುವ ಎಂಐಜಿ– 2, ಮನೆ ನಂ. 187 ರ ಆಯುಕ್ತರ ವಸತಿ ಗೃಹವು ಬಹಳ ದಿನಗಳಿಂದ ಉಪಯೋಗಿಸದೆ ಇರುವುದರಿಂದ ವಸತಿ ಗೃಹ ಮತ್ತು ಕಾಂಪೌಂಡ್ ಗೋಡೆ ಶಿಥಿಲಗೊಂಡಿದ್ದು, ಅವುಗಳನ್ನು ಅಭಿವೃದ್ಧಿ ಪಡಿಸಲು ರೂ. 85000.00 (ಎಂಬತ್ತೈದು ಸಾವಿರ ರುಪಾಯಿ) ಗಳ ವೆಚ್ಚವಾಗುತ್ತದೆ, ಅದರಂತೆ ಸದರಿ ಅಂದಾಜು ಪಟ್ಟಿಯನ್ನು ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರಿಂದ ತಾಂತ್ರಿಕ ಅನುಮೋದನೆ ಪಡೆದು ನಿಯಮಾನುಸಾರ ಕ್ರಮವಹಿಸಬಹುದಾಗಿರುತ್ತದೆ, ಮತ್ತು ಪ್ರಾಧಿಕಾರದ ಕಛೇರಿಯ ಆಯುಕ್ತರ ಕೊಠಡಿಯ ಒಳಭಾಗದಲ್ಲಿ ಪಾರ್ಟಿಷನ್ ಗೋಡೆ ಹಾಕಿ ಶೌಚಾಲಯ ನಿರ್ಮಿಸಬೇಕಾಗಿರುತ್ತದೆ, ಅದಕ್ಕೆ ತಗಲುವ ವೆಚ್ಚವನ್ನು ನಿಯಮಾನುಸಾರ ಪ್ರಾಧಿಕಾರದಿಂದಲೇ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 5.**

ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ನಾಗರೀಕ ಸೌಲಭ್ಯದ ನಿವೇಶನ ಮಂಜೂರು ಮಾಡುವ ಬಗ್ಗೆ ವಿವಿಧ ಸಂಸ್ಥೆಗಳಿಂದ ಅರ್ಜಿ ಬಂದಿರುವ ಕುರಿತು.

**ಟಿಪ್ಪಣಿ :**

ಪ್ರಾಧಿಕಾರದ ವ್ಯಾಪ್ತಿಯಲ್ಲಿನ, ನಾಗರೀಕ ಸೌಲಭ್ಯ ನಿವೇಶನ ಮಂಜೂರಾತಿ ಕೋರಿ. 1) ಮೇ॥ ಪತಂಜಲಿ ಯೋಗ ಶಿಕ್ಷಣ ಸಮಿತಿ (ರಿ) ಕರ್ನಾಟಕ ಚಿಕ್ಕಮಗಳೂರು ಶಾಖೆ ಹಾಗೂ 2) ಮೇ॥ ಲೊಕಶಿಕ್ಷಣ ಟ್ರಸ್ಟ್ ಹುಬ್ಬಳ್ಳಿ ಬೆಂಗಳೂರು ಇವರುಗಳು ಕ್ರಮವಾಗಿ ಯೋಗಶಿಕ್ಷಣ ಸಮಿತಿ (ರಿ) ಕರ್ನಾಟಕ ಚಿಕ್ಕಮಗಳೂರು ಶಾಖೆ ರವರು ಯೋಗಶಿಕ್ಷಣ ಶಾಲೆ ಕಟ್ಟಡ ನಿರ್ಮಾಣ ಹಾಗೂ ಮೇ॥ ಲೋಕಶಿಕ್ಷಣ ಸಮಿತಿ ರವರು, ಸಂಯುಕ್ತ ಕರ್ನಾಟಕ ಪತ್ರಿಕೆ ಕಾರ್ಯಾಲಯ ಕಟ್ಟಡ ನಿರ್ಮಿಸಲು ಈ ಕಛೇರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಪ್ರಾಧಿಕಾರದ ವ್ಯಪ್ತಿಯಲ್ಲಿ ನಾಗರೀಕ ಸೌಲಭ್ಯದ ನಿವೇಶನ ಕೋರಿ ಲಭ್ಯವಿರುವ ನಾಗರೀಕ ಸೌಲಭ್ಯ ನಿವೇಶನಗಳಲ್ಲಿ 3 ನಿವೇಶನಗಳಿಗೆ ಅರ್ಜಿ ಸಲ್ಲಿಸಲು ದಿನಾಂಕ: 24-09-2008 ರಲ್ಲಿ ಪತ್ರಿಕೆಗಳಿಗೆ ಪ್ರಕಟಣೆ ನೀಡಲು ಪತ್ರ ಬರೆದಿದೆ. ಹಾಗೆಯೇ ಸರ್ಕಾರಿ ಕಛೇರಿಗಳಿಗೆ ಮೀಸಲ್ಲಿಟ್ಟಿರುವ ನಿವೇಶನಗಳ ಹಂಚಿಕೆಗಾಗಿ ಸಂಬಂಧಿಸಿದ ಸರ್ಕಾರಿ ಇಲಾಖೆಗಳಿಗೆ ಈಗಾಗಲೇ ಪತ್ರ ಬರೆಯಲಾಗಿದೆ. ಮೀಸಲಿಟ್ಟ ಒಟ್ಟು 7 ನಿವೇಶನಗಳ ಹಂಚಿಕೆಗಾಗಿ ಯಾವುದೇ ಮನವಿ ಪತ್ರಗಳು ಬಾರದಿದ್ದಲ್ಲಿ ಮೀಸಲಿಟ್ಟಿರುವ ಉದ್ದೇಶಗಳನ್ನು ಬದಲಿಸುವ ಬಗ್ಗೆ ಸಭೆಯ ಅನುಮೋದನೆ ಪಡೆದು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ) ನಿಯಮಗಳು 1991 ರ ಅನ್ವಯ ಹಂಚಿಕೆ ಮಾಡಲು ಮುಂದಿನ ಕ್ರಮವಹಿಸಬಹುದಾಗಿರುತ್ತೆ. ಈ ಬಗ್ಗೆ ಸಭೆಯ ಮುಂದೆ ವಿಷಯವನ್ನು ಮಂಡಿಸಿದೆ.

**ಲಭ್ಯವಿರುವ ನಿವೇಶನಗಳ ವಿವರ ಈ ಕೆಳಕಂಡಂತಿದೆ.**

| ಕ್ರ ಸಂ | ಗ್ರಾಮದ ಹೆಸರು ಮತ್ತು ಸ.ನಂ. | ವಿಸ್ತೀರ್ಣ | ಒಟ್ಟು ಚ.ಮೀ. | ಉದ್ದೇಶ |
|---|---|---|---|---|
| 1. | ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 57 / 1, 57 / 2 ರಲ್ಲಿನ | 35 x 415 | 14525.00 ಚ.ಅಡಿ. | ಪ್ರಾಥಮಿಕ ಶಾಲೆ ಉದ್ದೇಶಕ್ಕಾಗಿ |
| 2. | ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 44 ಮತ್ತು 50 ರಲ್ಲಿನ | $26.78 \times \frac{39.92+57.00}{2}$ | 12097.76 | ಅಂಚೆ ಕಛೇರಿ / ದೂರವಾಣಿ ಕೇಂದ್ರ ಇತರೆ ಸರ್ಕಾರಿ ಕಛೇರಿಗಳಿಗಾಗಿ. |

| ಕ್ರ ಸಂ | ಗ್ರಾಮದ ಹೆಸರು ಮತ್ತು ಸ.ನಂ. | ವಿಸ್ತೀರ್ಣ | ಒಟ್ಟು ಚ.ಮೀ. | ಉದ್ದೇಶ |
|---|---|---|---|---|
| 3. | ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 101, 102, 103, 104, 105 / 1, 507, ಉಪ್ಪಳ್ಳಿ 193, 194. | ಅನಿಯತ | 4269.07 | ಕನ್ನಡ ಪೂರ್ವ ಪ್ರಾಥಮಿಕ ಪಾತ ಶಾಲೆ. |
| 4. | ಬಸವನಹಳ್ಳಿ ಗ್ರಾಮದ ಸರ್ವೆ ನಂ. 108, 109, 110, 111, 112. | $\frac{135.9+80}{2} \times \frac{70.0+136}{2}$ | 11110.61 | ಆಸ್ಪತ್ರೆ. |
| 5. | ಹಿರೇಮಗಳೂರು ಗ್ರಾಮದ ಸರ್ವೆ ನಂ. 503 ಮತ್ತಿತರೆ. | 25.91 x 42.67 | 1105.44 | ಶಿಶುಪಾಲನಾ ಕೇಂದ್ರ. |
| 6. | ಹಿರೇಮಗಳೂರು ಗ್ರಾಮದ ಸರ್ವೆ ನಂ. 503 ಮತ್ತಿತರೆ. | $\frac{79.4+77.72}{2} \times 30.48$ | 2392.07 | ಶಾಲಾ ಉಪಯೋಗಕ್ಕೆ. |
| 7. | ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6. | $\frac{42.57+41.57}{2} \times 36.00$ | 1514.52 | ಸರ್ಕಾರಿ ಸಂಘ ಸಂಸ್ಥೆಗಳಿಗಾಗಿ. |

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿನ, ನಾಗರೀಕ ಸೌಲಭ್ಯ ನಿವೇಶನವನ್ನು ಕೋರಿ ಅರ್ಜಿ ಸಲ್ಲಿಸಿರುತ್ತಾರೆ, 1) ಮೇ|| ಪತಂಜಲಿ ಯೋಗ ಶಿಕ್ಷಣ ಸಮಿತಿ (ರಿ) ಕರ್ನಾಟಕ ಚಿಕ್ಕಮಗಳೂರು ಶಾಖೆ ಹಾಗೂ 2) ಮೇ|| ಲೊಕಶಿಕ್ಷಣ ಟ್ರಸ್ಟ್ ಹುಬ್ಬಳ್ಳಿ ಬೆಂಗಳೂರು ಇವರುಗಳು ಕ್ರಮವಾಗಿ ಯೋಗಶಿಕ್ಷಣ ಸಮಿತಿ (ರಿ) ಕರ್ನಾಟಕ ಚಿಕ್ಕಮಗಳೂರು ಶಾಖೆ ರವರು ಯೋಗಶಿಕ್ಷಣ ಶಾಲೆ ಕಟ್ಟಡ ನಿರ್ಮಾಣ ಹಾಗೂ ಮೇ|| ಲೋಕಶಿಕ್ಷಣ ಸಮಿತಿ ರವರು, ಸಂಯುಕ್ತ ಕರ್ನಾಟಕ ಪತ್ರಿಕೆ ಕಾರ್ಯಾಲಯ ಕಟ್ಟಡ ನಿರ್ಮಿಸಲು ಈ ಕಛೇರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಾಗರೀಕ ಸೌಲಭ್ಯದ ನಿವೇಶನ ಕೋರಿ ಲಭ್ಯವಿರುವ ನಾಗರೀಕ ಸೌಲಭ್ಯ ನಿವೇಶನಗಳಲ್ಲಿ 3 ನಿವೇಶನಗಳಿಗೆ ಅರ್ಜಿ ಸಲ್ಲಿಸಲು ದಿನಾಂಕ: 24-09-2008 ರಲ್ಲಿ ಪತ್ರಿಕೆಗಳಿಗೆ ಪ್ರಕಟಣೆ ನೀಡಲು ಪತ್ರ ಬರೆದಿದೆ. ಹಾಗೆಯೇ ಸರ್ಕಾರಿ ಕಛೇರಿಗಳಿಗೆ ಮೀಸಲ್ಲಿಟ್ಟಿರುವ ನಿವೇಶನಗಳ ಹಂಚಿಕೆಗಾಗಿ ಸಂಬಂಧಿಸಿದ ಸರ್ಕಾರಿ ಇಲಾಖೆಗಳಿಗೆ ಈಗಾಗಲೇ ಪತ್ರ ಬರೆಯಲಾಗಿದೆ. ಮೀಸಲಿಟ್ಟ ಒಟ್ಟು 7 ನಿವೇಶನಗಳ ಹಂಚಿಕೆಗಾಗಿ ಯಾವುದೇ ಮನವಿ ಪತ್ರಗಳು ಬಾರದಿದ್ದಲ್ಲಿ ಮೀಸಲಿಟ್ಟಿರುವ ಉದ್ದೇಶಗಳನ್ನು ಬದಲಿಸುವ ಬಗ್ಗೆ ಸಭೆಯ ಅನುಮೋದನೆ ಪಡೆದು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯ ನಿವೇಶನ ಹಂಚಿಕೆ) ನಿಯಮಗಳು 1991 ರ ಅನ್ವಯ ಹಂಚಿಕೆ ಮಾಡಲು ಮುಂದಿನ ಕ್ರಮವಹಿಸಬಹುದಾಗಿರುತ್ತೆ.

**ಲಭ್ಯವಿರುವ ನಿವೇಶನಗಳ ವಿವರ ಈ ಕೆಳಕಂಡಂತಿದೆ.**

| **ಕ್ರ ಸಂ** | **ಗ್ರಾಮದ ಹೆಸರು ಮತ್ತು ಸ.ನಂ.** | **ವಿಸ್ತೀರ್ಣ** | **ಒಟ್ಟು ಚ.ಮೀ.** | **ಉದ್ದೇಶ** |
|---|---|---|---|---|
| 1. | ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 57 / 1, 57 / 2 ರಲ್ಲಿನ | 35 x 415 | 14525.00 ಚ.ಅಡಿ. | ಪ್ರಾಥಮಿಕ ಶಾಲೆ ಉದ್ದೇಶಕ್ಕಾಗಿ |

| ಕ್ರ ಸಂ | ಗ್ರಾಮದ ಹೆಸರು ಮತ್ತು ಸ.ನಂ. | ವಿಸ್ತೀರ್ಣ | ಒಟ್ಟು ಚ.ಮೀ. | ಉದ್ದೇಶ |
|---|---|---|---|---|
| 2. | ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 44 ಮತ್ತು 50 ರಲ್ಲಿನ | 26.78 x 39.92+57.00 / 2 | 12097.76 | ಅಂಚೆ ಕಛೇರಿ / ದೂರವಾಣಿ ಕೇಂದ್ರ ಇತರೆ ಸರ್ಕಾರಿ ಕಛೇರಿಗಳಿಗಾಗಿ. |
| 3. | ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 101, 102, 103, 104, 105 / 1, 507, ಉಪಪ್ಳಿ 193, 194. | ಅನಿಯತ | 4269.07 | ಕನ್ನಡ ಪೂರ್ವ ಪ್ರಾರ್ಥಮಿಕ ಪಾಠ ಶಾಲೆ. |
| 4. | ಬಸವನಹಳ್ಳಿ ಗ್ರಾಮದ ಸರ್ವೆ ನಂ. 108, 109, 110, 111, 112. | 135.9+80 / 2 x 70.0+136 / 2 | 11110.61 | ಆಸ್ಪತ್ರೆ. |
| 5. | ಹಿರೇಮಗಳೂರು ಗ್ರಾಮದ ಸರ್ವೆ ನಂ. 503 ಮತ್ತಿತರೆ. | 25.91 x 42.67 | 1105.44 | ಶಿಶುಪಾಲನಾ ಕೇಂದ್ರ. |
| 6. | ಹಿರೇಮಗಳೂರು ಗ್ರಾಮದ ಸರ್ವೆ ನಂ. 503 ಮತ್ತಿತರೆ. | 79.4+77.72 / 2 x 30.48 | 2392.07 | ಶಾಲಾ ಉಪಯೋಗಕ್ಕೆ. |
| 7. | ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6. | 42.57+41.57 / 2 x 36.00 | 1514.52 | ಸರ್ಕಾರಿ ಸಂಘ ಸಂಸ್ಥೆಗಳಿಗಾಗಿ. |

ಮೇಲ್ಕಂಡಂತೆ ನಾಗರೀಕ ಸೌಲಭ್ಯದ ನಿವೇಶನಗಳನ್ನು ದಿನಾಂಕ: 07-08-2008 ರ ಸಭೆಯ ವಿಷಯ ಸಂಖ್ಯೆ. 02 ರಲ್ಲಿ ತೀರ್ಮಾನಿಸಿರುವಂತೆ ಸಂಬಂದಪಟ್ಟ ಸರ್ಕಾರಿ ಕಛೇರಿಗಳಿಗೆ ಮೀಸಲಿಟ್ಟ ನಿವೇಶನಗಳಿಗೆ ಸಂಬಂಧಪಟ್ಟ ಇಲಾಖೆಗೆ ನಿವೇಶನದ ಬಗ್ಗೆ ಮಾಹಿತಿ ನೀಡಿ ಕೋರಿಕೆ ಪತ್ರ ಸಲ್ಲಿಸಲು ಪತ್ರ ಬರೆಯಲಾಗಿದೆ ಹಾಗೂ ದೂರವಾಣಿ ಮುಖಾಂತರವು ಸಹ ತಿಳಿಸಲಾಗಿದೆ, ಆದರೆ ಈವರೆವಿಗೂ ಯಾವುದೇ ಮಾಹಿತಿ ಪತ್ರ ಬಂದಿರುವುದಿಲ್ಲ. ದಿನಾಂಕ: 18-09-2008 ರಂದು ನಾಗರೀಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆ ಮಾಡುವ ಬಗ್ಗೆ ಮೀಸಲಿಟ್ಟಿರುವ ಉದ್ದೇಶಗಳಿಗೆ ಸಂಬಂಧಪಟ್ಟ ಸಂಘ ಸಂಸ್ಥೆಗಳಿಗೆ ದಿನಾಂಕ: 13-10-2008 ರ ಅವದಿಯವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ, ಸದರಿ ದಿನಾಂಕದವರೆಗೆ ಅರ್ಜಿಗಳು ಬಾರದಿದ್ದಲ್ಲಿ ಸದರಿ ಉಪಯೋಗದ ಉದ್ದೇಶವನ್ನು ಬದಲಾಯಿಸಿ ಟಿಪ್ಪಣಿಯಲ್ಲಿ ಕೋರಿರುವ ಸಂಘ ಸಂಸ್ಥೆಗಳಿಗೆ ನಿವೇಶನಗಳ ಹಂಚಿಕೆಯ ಬಗ್ಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ) ನಿಯಮಗಳು 1991 ರ ಪ್ರಕರಣ 3 ಮತ್ತು ಪ್ರಕರಣ 8 (1) ರನ್ವಯ ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 174 : ಬೆಮಪ್ರಾ : 2004, ದಿನಾಂಕ: 28-04-2004 ರಲ್ಲಿ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ) ನಿಯಮಗಳು 1991 ರಲ್ಲಿನ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿ ಪ್ರಾಧಿಕಾರದ ಹಂತದಲ್ಲಿ ನಿವೇಶನಗಳ ಹಂಚಿಕೆ ಮಾಡಬಹುದಾಗಿರುತ್ತದೆ.

ಟಿಪ್ಪಣಿಯಲ್ಲಿ ಹೇಳಿರುವಂತೆ ಕ್ರಮ ಸಂಖ್ಯೆ. 7 ರಲ್ಲಿನ ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6. ರಲ್ಲಿನ ಒಟ್ಟು 1514.52 ಚದರ ಮೀಟರ್ ಇದ್ದು ಅದರಲ್ಲಿ 684.00 ಚದರ ಮೀಟರ್ ಅಳತೆಯ ನಿವೇಶನವನ್ನು ದಿನಾಂಕ: 07-08-2008 ರ ಸಭೆಯ ವಿಷಯ ಸಂಖ್ಯೆ. 3 ರ ತೀರ್ಮಾನದಂತೆ ಸಹಾಯಕ ನಿಯಂತ್ರಕರು ಸ್ಥಳೀಯ ಲೆಕ್ಕ ಪರಿಶೋಧನ ವೃತ್ತ ಚಿಕ್ಕಮಗಳೂರು ಇವರಿಗೆ ಹಂಚಿಕೆ ಮಾಡುವ ಬಗ್ಗೆ ತೀರ್ಮಾನಿಸಲಾಗಿದೆ, ಉಳಿದ 830.52 ಚದರ ಮೀಟರ್ ಅಳತೆಯ ನಿವೇಶನವನ್ನು ಭಾರತೀಯ ವೈದ್ಯ ಸಂಘ ಚಿಕ್ಕಮಗಳೂರು ಇವರಿಗೆ ಹಂಚಿಕೆ ಮಾಡುವ ಬಗ್ಗೆ ಸಭೆಯಲ್ಲಿ ತೀರ್ಮಾನಿಸಲಾಯಿತು.

ಟಿಪ್ಪಣಿಯಲ್ಲಿ ಹೇಳಿರುವಂತೆ ಕ್ರಮ ಸಂಖ್ಯೆ. 5 ರಲ್ಲಿನ ಹಿರೇಮಗಳೂರು ಗ್ರಾಮದ ಸರ್ವೆ ನಂ. 503 ಮತ್ತಿತರೆ ಸರ್ವೆ ನಂಬರುಗಳಲ್ಲಿನ 1105.44 ಚದರ ಮೀಟರ್ ಅಳತೆಯ ನಿವೇಶನವು ಶಿಶುಪಾಲನಾ ಕೇಂದ್ರಕ್ಕೆ ಮೀಸಲಿಟ್ಟಿದ್ದು ಸದರಿ ನಿವೇಶನಕ್ಕೆ ಸಂಬಂಧಪಟ್ಟ ಇಲಾಖೆಯವರು ಅರ್ಜಿ ಸಲ್ಲಿಸದಿದ್ದಲ್ಲಿ ಸದರಿ ನಿವೇಶನವನ್ನು ಎರಡು ಭಾಗಗಳಾಗಿ ವಿಂಗಡಿಸಿ 1) ಮೆ॥ ಪತಂಜಲಿ ಯೋಗ ಶಿಕ್ಷಣ ಸಮಿತಿ (ರಿ) ಕರ್ನಾಟಕ ಚಿಕ್ಕಮಗಳೂರು ಶಾಖೆ ಹಾಗೂ 2) ಮೆ॥ ಲೋಕಶಿಕ್ಷಣ ಟ್ರಸ್ಟ್ ಹುಬ್ಬಳ್ಳಿ ಬೆಂಗಳೂರು ಇವರುಗಳು ಕ್ರಮವಾಗಿ ಯೋಗ ಶಿಕ್ಷಣ ಸಮಿತಿ (ರಿ) ಕರ್ನಾಟಕ ಚಿಕ್ಕಮಗಳೂರು ಶಾಖೆ ರವರು ಯೋಗಶಿಕ್ಷಣ ಶಾಲೆ ಕಟ್ಟಡ ನಿರ್ಮಾಣ ಮಾಡಲು 25.91 x 24.69 = 639.72 ಚ.ಮೀ. ಹಾಗೂ ಮೆ॥ ಲೋಕಶಿಕ್ಷಣ ಸಮಿತಿ ರವರು, ಸಂಯುಕ್ತ ಕರ್ನಾಟಕ ಪತ್ರಿಕೆ ಕಾರ್ಯಾಲಯ ಕಟ್ಟಡ ನಿರ್ಮಿಸಲು 25.91 x 17.98 = 465.86 ಚ. ಮೀ. ಅಳತೆಯ ನಾಗರೀಕ ಸೌಲಭ್ಯದ ನಿವೇಶನಕ್ಕೆ, ಈ ಕಛೇರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಸಂಸ್ಥೆಗಳಿಗೆ ಅವರ ಅವಶ್ಯಕತೆಗನುಗುಣವಾಗಿ ಲಭ್ಯವಿರುವ ನಿವೇಶನದಲ್ಲಿ ಹಂಚಿಕೆ ಮಾಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 6.**

ಪ್ರಾಧಿಕಾರದ ವ್ಯಾಪ್ತಿಯಲ್ಲಿನ ಮೂಲೆ ನಿವೇಶನಗಳ ಹರಾಜು ಮಾಡುವ ಸಂದರ್ಭದಲ್ಲಿ ನಿವೇಶನ ಮೌಲ್ಯದ ಶೇಕಡ 25 ರಷ್ಟು ಮೊತ್ತವನ್ನು ಠೇವಣಿಯಾಗಿ ಪಡೆಯುವಂತೆ ಹಾಗೂ ಹೆಚ್ಚಿನ ಬಿಡ್ ಕೂಗಿದವರಿಂದ ಸ್ಥಳದಲ್ಲೇ ಶೇಕಡ 25 ರಷ್ಟು ಹೆಚ್ಚುವರಿ ಮೊತ್ತವನ್ನು ಪಾವತಿಸಿಕೊಳ್ಳುವ ಬಗ್ಗೆ. ಕುರಿತು.

**ಟಿಪ್ಪಣಿ :**

ಪ್ರಾಧಿಕಾದ ವ್ಯಾಪ್ತಿಯಲ್ಲಿನ ಮೂಲೆ ನಿವೇಶನಗಳು ಹರಾಜು ಮಾಡುವ ಸಂದರ್ಭದಲ್ಲಿ ನಿವೇಶನ ಮೌಲ್ಯದ ಶೇಕಡ 25 ರಷ್ಟು ಮೊತ್ತವನ್ನು ಠೇವಣಿಯಾಗಿ ಪಡೆಯುವಂತೆ ಹಾಗೂ ಹೆಚ್ಚಿನ ಬಿಡ್ ಕೂಗಿದವರಿಂದ ಬಿಡ್ ಮಾಡಿದ ಸ್ಥಳದಲ್ಲಿಯೇ ಶೇಕಡ 25 ರಷ್ಟು ಮೊತ್ತವನ್ನು ಪಾವತಿಸಿಕೊಳ್ಳುವಂತೆ ಹಾಗೇಯೆ ಶೇಕಡ 25 ರಷ್ಟು ಬಿಡ್ ಮೊತ್ತ ಪಾವತಿಸದಿದ್ದಲ್ಲಿ ಠೇವಣಿಯಾಗಿ ಪಡೆಯಲಾಗಿದ್ದ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ. ಈ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯುದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಪ್ರಾಧಿಕಾದ ವ್ಯಾಪ್ತಿಯಲ್ಲಿನ ಮೂಲೆ ನಿವೇಶನಗಳು ಹರಾಜು ಮಾಡುವ ಸಂದರ್ಭದಲ್ಲಿ ಪ್ರಾಧಿಕಾರವು ನಿಗದಿಪಡಿಸಿರುವ ಮೂಲೆ ನಿವೇಶನದ ಮೌಲ್ಯದ ಶೇಕಡ 25 ರಷ್ಟು ಮೊತ್ತವನ್ನು ಬಿಡ್‌ದಾರರಿಂದ ಪ್ರಾರಂಭಿಕ ಠೇವಣಿಯಾಗಿ ಪಡೆಯುವಂತೆ ಹಾಗೂ ಸದರಿ ನಿವೇಶನದ ಅತಿ ಹೆಚ್ಚಿನ ಬಿಡ್ ಕೂಗಿದ ಬಿಡ್ ಮೊತ್ತದ ಶೇಕಡ 25 ರಷ್ಟು ಮೊತ್ತವನ್ನು ಬಿಡ್ ಕೂಗಿದ ಕೂಡಲೆ ಸ್ಥಳದಲ್ಲಿಯೆ ಪಾವತಿಸಿಕೊಳ್ಳಲು ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು ರವರು ಸಭೆಯಲ್ಲಿ ಸೂಚಿಸಿರುತ್ತಾರೆ, ತಪ್ಪಿದಲ್ಲಿ ಠೇವಣಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಸಭೆಯಲ್ಲಿ ಸೂಚಿಸಿದರು.

ಶ್ರೀ ಸಿ. ಟಿ. ರವಿ ಶಾಸಕರು ಇವರು ಈ ಹಿಂದಿನ ಮೂಲೆ ನಿವೇಶನಗಳ ಹರಾಜು ಪ್ರಕ್ರಿಯೆಗಳಲ್ಲಿ ಅಕ್ರಮಗಳು ನೆಡೆದಿರುವ ಬಗ್ಗೆ ದೂರು ಕೇಳಿ ಬಂದಿದ್ದು ವಿವರಣೆಯನ್ನು ಕೇಳಿರುತ್ತಾರೆ ಈ ಬಗ್ಗೆ ಪ್ರಾಧಿಕಾರದ ಆಯುಕ್ತರು ಈ ರೀತಿ ನಡೆದಿರುವುದು ನನ್ನ ಗಮನಕ್ಕೆ ಬಂದಿರುವುದಿಲ್ಲವೆಂದು ತಿಳಿಸಿದರು. ಈ ಬಗ್ಗೆ ಪರಿಶೀಲನೆ ಮಾಡಿ ಮುಂದಿನ ಸಭೆಗೆ ವರದಿ ಮಾಡಲು ತೀರ್ಮಾನಿಸಲಾಯಿತು.

**ವಿಷಯ ನಂ 7.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹೊಸ ಕಾರನ್ನು ಖರೀದಿಸುವ ಬಗ್ಗೆ ಹೆಚ್ಚುವರಿಯಾಗಿ ವೆಚ್ಚವಾಗಲಿರುವ 2.40 ಲಕ್ಷ ರೂಪಾಯಿಗಳನ್ನು ಅನುಮೋದಿಸುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಅಧ್ಯಕ್ಷಕರು ಬಳಸಲು ಹೊಸ ಟವೇರ ಕಾರ್ ಒಂದನ್ನು ಖರೀದಿಸಲಾಗುತ್ತಿದ್ದು ಈ ಬಗ್ಗೆ ದಿನಾಂಕ: 17-10-2007 ರಂದು ಸರ್ಕಾರದಿಂದ 6.5 ಲಕ್ಷ ರೂಪಾಯಿಗಳನ್ನು ಮೀರದಂತೆ ಕಾರು ಖರೀದಿಸಲು ಅನುಮತಿ ದೊರೆಕಿರುತ್ತದೆ. ಆದರೆ, ಮೆ,. ಫ್ರೋರ್ಟ್‌ಲೈನ್, ಆಟೋಮೊಬೈಲ್ಸ್, ಮಂಗಳೂರು. ರವರು ನೀಡಿರುವ ಪ್ರಫಾರ್ಮ ಇನ್‌ವಾಯ್ಸ್‌ನಲ್ಲಿ ಸದರಿ ಕಾರಿಗೆ ರೂ. 8.90 ಲಕ್ಷಗಳಾಗಿರುತ್ತದೆಂದು, ದರ ಸೂಚಿಸಿರುತ್ತಾರೆ. ಈ ಹೆಚ್ಚುವರಿ ಆಗಲಿರುವ 2.40 ಲಕ್ಷ ರೂಪಾಯಿಗಳ ವೆಚ್ಚಕ್ಕೇ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ದಿನಾಂಕ: 06-07-2007 ರ ಪ್ರಾಧಿಕಾರದ ಸಭೆಯ ತೀರ್ಮಾನದಂತೆ ಪ್ರಾಧಿಕಾರಕ್ಕೆ ರೂ. 695445.00 ಮೌಲ್ಯದ ಇಂಡಿಗೊ ಎಲ್‌ಎಕ್ಸ್ ಕಾರನ್ನು ಖರೀದಿಸಲು ಸರ್ಕಾರದ ಪತ್ರದ ನಂ. ನಅಇ : 242 : ಮೈಅಪ್ರಾ : 2007, ದಿನಾಂಕ: 15-10-2007 ರಲ್ಲಿ ರೂ. 6.50 ಲಕ್ಷಕ್ಕೆ ಮೀರದಂತೆ ಹೊಸ ಕಾರನ್ನು ಖರೀದಿಸಲು ಅನುಮತಿ ನೀಡಿರುತ್ತದೆ, ಅದರಂತೆ 2007-08 ಮತ್ತು 2008-09 ನೇ ಸಾಲಿನ ಆಯವ್ಯಯಗಳಲ್ಲಿ ಹೊಸ ಕಾರು ಖರೀದಿಸಲು ರೂ. 7.0 ಲಕ್ಷಗಳ ವೆಚ್ಚದಲ್ಲಿ ಖರೀದಿಸಲು ಅವಕಾಶ ಕಲ್ಪಿಸಿಕೊಳ್ಳಲಾಗಿದೆ, ಅದರಂತೆ ದಿನಾಂಕ: 27-09-2008 ರಂದು ಪ್ರಾಧಿಕಾರದ ಸಭೆಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಮಾತನಾಡುತ್ತ ಪ್ರಾಧಿಕಾರಕ್ಕೆ ಟವೇರ ಕಾರನ್ನು ಖರೀದಿಸಲು ಒಪ್ಪಿಗೆ ನೀಡಲಾಗಿದ್ದು ಸದರಿ ಕಾರಿಗೆ ರೂ. 8,89,937.00 ಗಳಿಗೆ M/s Frontline Automobiles, Mangalore ರವರು ಇನ್‌ವೈಸ್ ನೀಡಿದ್ದು ಅದರಂತೆ ಹೆಚ್ಚುವರಿ ವೆಚ್ಚ ರೂ. 2.40 ಲಕ್ಷಗಳ ವೆಚ್ಚಕ್ಕೆ ಹೊಸ ಕಾರು ಖರೀದಿಸಲು, ಹಾಗೂ ಪ್ರಾಧಿಕಾರದ ಘಟನೋತ್ತರ ಮಂಜೂರಾತಿ ಪಡೆಯಲು ಮಾನ್ಯ ಅಧ್ಯಕ್ಷರು ತಿಳಿಸಿದರು. ಅದರಂತೆ ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

ಸಹಿ/-

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಜಿಲ್ಲಾಧಿಕಾರಿಗಳು ಮತ್ತು ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 05-12-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು.**

| | | |
|---|---|---|
| 1 | ಶ್ರೀ ಸಿ. ಎಸ್. ರಂಗನಾಥ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಶ್ರೀ ಜಿ. ಲೋಕೇಶ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 3 | ಶ್ರೀ ಮದು ಕುಮಾರ್‌ರಾಜ್ ಅರಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 4 | ಶ್ರೀಮತಿ ವೀಣಾ ಶೆಟ್ಟಿ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಶ್ರೀ ರಾಜು<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಶ್ರೀ ಶ್ರೀನಿವಾಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 7 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 8 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. | ಸದಸ್ಯರು |
| 9 | ಸಹಾಯಕ ನಿರ್ದೇಶಕರು,<br>ನಗರ ಯೋಜನಾ ಇಲಾಖೆ, ಚಿಕ್ಕಮಗಳೂರು. (ಪ್ರತಿನಿಧಿ ಹಾಜರಿದ್ದರು) | ನಗರ ಯೋಜನಾ ಸದಸ್ಯರು |
| 10 | ಕಾರ್ಯಪಾಲಕ ಇಂಜಿನಿಯರ್,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. (ಪ್ರತಿನಿಧಿ ಹಾಜರಿದ್ದರು) | ಇಂಜಿನಿಯರ್ ಸದಸ್ಯರು |
| 11 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,<br>ಹಾಸನ (ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 12 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |

**ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.**

| | | |
|---|---|---|
| 1 | ಮಾನ್ಯ ಶ್ರೀ. ಡಿ. ಎಂ. ಪುಟ್ಟೇಗೌಡ,<br>ವಿಧಾನ ಪರಿಷತ್ ಸದಸ್ಯರು, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 3 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 4 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 5 | ಸೈಂಟಿಫಿಕ್ ಆಫೀಸರ್,<br>ಪ್ರಕೃತಿ ಮತ್ತು ಪರಿಸರ ಇಲಾಖೆ, ಬೆಂಗಳೂರು. | ಸದಸ್ಯರು |
| 6 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 7 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

ದಿನಾಂಕ: 05-12-2008 ರಂದು ಪ್ರಾಧಿಕಾರದ ಸಭೆಯು ಬೆಳಿಗ್ಗೆ 11.00 ಗಂಟೆಗೆ ಸಮಾವೇಶಗೊಂಡಿತು. ಸರ್ಕಾರವು ಅಧಿಸೂಚನೆ ಸಂಖ್ಯೆ. ನಅಇ : 610 : ಅಪ್ರಾ : 2008 ದಿನಾಂಕ: 12-11-2008 ರನ್ವಯ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ನೂತನವಾಗಿ ಸರ್ಕಾರದಿಂದ ನೇಮಕವಾಗಿರುವ ಮಾನ್ಯ ಅಧ್ಯಕ್ಷರು ಹಾಗೂ ಸದಸ್ಯರುಗಳನ್ನು ಪ್ರಾಧಿಕಾರದ ಆಯುಕ್ತರು ಸ್ವಾಗತಿಸಿದರು. ನಂತರ ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡು ಸಭೆಯನ್ನು ನಡೆಸುವಂತೆ ಮಾನ್ಯ ಶ್ರೀ ಸಿ. ಎಸ್. ರಂಗನಾಥ್ ಅಧ್ಯಕ್ಷರು ಇವರನ್ನು ಕೋರಲಾಯಿತು.

ನಂತರ ಮಾತನಾಡುತ್ತ ಮುಂಬೈ ಘಟನೆಯಲ್ಲಿ ಉಗ್ರವಾದಿಗಳಿಂದ ವೀರಮರಣ ಹೊಂದಿದ ಪೋಲೀಸ್ ಅಧಿಕಾರಿಗಳು, ಕುಟುಂಬದವರಿಗೆ ಹಾಗೂ ಸಾಮಾನ್ಯ ಜನರಿಗೆ ಮತ್ತು ಇತ್ತೀಚೆಗೆ ಮೃತಪಟ್ಟ ಮಾಜಿ ಪ್ರಧಾನಿ ಶ್ರೀ ವಿ. ಪಿ. ಸಿಂಗ್‌ರವರಿಗೆ, ಶ್ರದ್ದಾಂಜಲಿ ತಿಳಿಸುವ ಸಲುವಾಗಿ ಸಭೆಯಲ್ಲಿ 2 ನಿಮಿಷ ಮೌನ ಆಚರಿಸಿ ಭಗವಂತನು ಅವರ ಕುಟುಂಬಗಳಿಗೆ ಅವರ ಅಗಲುವಿಕೆಯನ್ನು ತಡೆದುಕೊಳ್ಳುವ ಶಕ್ತಿಯನ್ನು ನೀಡಬೇಕೆಂದು ಭಗವಂತನನ್ನು ಪ್ರಾರ್ಥಿಸಲಾಯಿತು. ನಂತರ ಮಾನ್ಯ ಅಧ್ಯಕ್ಷರು ಸಭೆಯ ಕಾರ್ಯಸೂಚಿಯಂತೆ ಚರ್ಚೆ ಕೈಗೆತ್ತಿಕೊಂಡರು.

**ವಿಷಯ ನಂ 1.**

ದಿನಾಂಕ: 27-09-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ:**

ದಿನಾಂಕ: 27-09-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದು.

**ತೀರ್ಮಾನ:**

ದಿನಾಂಕ: 27-09-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಿಶೇಷ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 2.**

2008 ನೇ ಸಾಲಿನ ಅಕ್ಟೋಬರ್ ತಿಂಗಳ ಆದಾಯ ಮತ್ತು ವೆಚ್ಚದ ವಿವರಗಳನ್ನು ಪರಿಶೀಲಿಸಿ, ಅನುಮೋದಿಸುವ ಬಗ್ಗೆ.

**ಟಿಪ್ಪಣಿ:**

ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ (1) ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದು.

**ತೀರ್ಮಾನ:**

ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ (1) ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

2008 ನೇ ನವೆಂಬರ್ 21 ರಂದು ಶಿವಮೊಗ್ಗ ಪಟ್ಟಣದಲ್ಲಿ ನಡೆಯುತ್ತಿರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ಬಿಡುಗಡೆ ಮಾಡುವ ಸ್ಮರಣ ಸಂಚಿಕೆಗೆ ಪ್ರಾಧಿಕಾರದಿಂದ ಜಾಹಿರಾತು ನೀಡುವುದಕ್ಕಾಗಿ ರೂ.10,000=00 ಗಳನ್ನು ನೀಡುವ ಬಗ್ಗೆ ಸಭೆಯ ಅನುಮೋದನೆ ಕೋರುವ ಬಗ್ಗೆ.

**ಟಿಪ್ಪಣಿ :**

2008 ನೇ ನವೆಂಬರ್ 21 ರಂದು ಶಿವಮೊಗ್ಗದಲ್ಲಿ ನಡೆಯಲಿರುವ ರಾಜ್ಯ ಸರ್ಕಾರಿ ನೌಕರರ ರಾಜ್ಯಮಟ್ಟದ ಸಮ್ಮೇಳನದಲ್ಲಿ ಬಿಡುಗಡೆ ಮಾಡಲಿರುವ ಸ್ಮರಣ ಸಂಚಿಕೆಗೆ ಜಾಹಿರಾತು ನೀಡುವಂತೆ ಜಿಲ್ಲಾ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಕೋರಿದ್ದರ ಮೇರೆಗೆ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಜಿಲ್ಲಾ ಅಧಿಕಾರಿಗಳವರ ಅನುಮತಿ ಪಡೆದು ರಾಜ್ಯ ನೌಕರರ ಸಂಘದ ಅಧ್ಯಕ್ಷರು ಬೆಂಗಳೂರು ರವರಿಗೆ 10,000=00 ಗಳನ್ನು ನೀಡಲಾಗಿದೆ. ರೂ.10,000=00 ನೀಡಿದ್ದರ ಬಗ್ಗೆ ಪ್ರಾಧಿಕಾರ ಸಭೆಯಲ್ಲಿ ಅನುಮೋದನೆ ಪಡೆಯುವ ಬಗ್ಗೆ ಮಂಡಿಸಲಾಗಿದೆ.

**ತೀರ್ಮಾನ:**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. 2008 ನೇ ನವೆಂಬರ್ 21 ರಂದು ಶಿವಮೊಗ್ಗದಲ್ಲಿ ನಡೆಯಲಿರುವ ರಾಜ್ಯ ಸರ್ಕಾರಿ ನೌಕರರ ರಾಜ್ಯಮಟ್ಟದ ಸಮ್ಮೇಳನದಲ್ಲಿ ಬಿಡುಗಡೆ ಮಾಡಲಿರುವ ಸ್ಮರಣ ಸಂಚಿಕೆಗೆ ಜಾಹಿರಾತಿಗಾಗಿ ರೂ.10,000=00 ನೀಡಿರುವುದನ್ನು ಸ್ಥಿರೀಕರಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 4.**

ಪ್ರಾಧಿಕಾರದಿಂದ ಕಡೂರು ರಸ್ತೆಯಿಂದ ಹಿರೇಮಗಳೂರು ಬೈಪಾಸ್ ರಸ್ತೆ ವ್ಯಾಪ್ತಿಯಲ್ಲಿ ಹಾಗೂ ಬಿಳಿಕೆರೆ–ತರೀಕೆರೆ ರಸ್ತೆಯಿಂದ ಮಹಾತ್ಮಗಾಂಧಿ ಉದ್ಯಾನವನಕ್ಕೆ ತಿರುಗುವ ಸ್ಥಳದಲ್ಲಿ ಒಂದೊಂದು ಬಸ್ ಶೆಲ್ಟರ್ ನಿರ್ಮಾಣ ಮಾಡುವ ಕಾಮಗಾರಿ ಕೈಗೊಳ್ಳಲು ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ :**

ಪ್ರಾಧಿಕಾರದ ವತಿಯಿಂದ ಕಡೂರು ರಸ್ತೆಯಿಂದ ಹಿರೇಮಗಳೂರು ಬೈಪಾಸ್ ರಸ್ತೆ ವ್ಯಾಪ್ತಿಯಲ್ಲಿರುವ ಬರುವ ಎ.ಐ.ಟಿ ಹಾಸ್ಟಲ್ ಹತ್ತಿರ ಹಾಗೂ ಬಿಳಿಕೆರೆ ತರೀಕೆರೆ ರಸ್ತೆಯಿಂದ ಮಹಾತ್ಮಗಾಂಧಿ ಉದ್ಯಾನವನಕ್ಕೆ ತಿರುಗುವ ಸ್ಥಳದಲ್ಲಿ ತಲಾ ಒಂದೊಂದು ಅಂದರೆ ಎರಡು ಬಸ್ ಶೆಲ್ಟರ್‌ಗಳನ್ನು ನಿರ್ಮಿಸುವ ಬಗ್ಗೆ ಅನುಮೋದನೆ ಕೋರಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ನಗರದ ಹಿರೇಮಗಳೂರು ಬೈಪಾಸ್ ರಸ್ತೆಯಲ್ಲಿ ಹಾಗೂ ಬಿಳಿಕೆರೆ ತರೀಕೆರೆ ರಸ್ತೆಯಿಂದ ಮಹಾತ್ಮಗಾಂಧಿ ಉದ್ಯಾನವನಕ್ಕೆ ತಿರುಗುವ ಸ್ಥಳದಲ್ಲಿ ಮತ್ತು ಮಾನ್ಯ ಅಧ್ಯಕ್ಷರ ಸೂಚನೆಯಂತೆ, ಹಿರೇಮಗಳೂರು ಅಂಬೇಡ್ಕರ್ ವೃತ್ತದ ಸಮೀಪ ತಲಾ ಒಂದೊಂದು ಬಸ್ ಶೆಲ್ಟರ್‌ಗಳನ್ನು ನಿರ್ಮಿಸುವ ಸ್ಥಳದ ಬಗ್ಗೆ ಪರಿಶೀಲಿಸಿ ಸಾರ್ವಜನಿಕರಿಗೆ ಅನುಕೂಲವಾಗುವ ಸ್ಥಳ ನಿಗದಿ ಮಾಡಲು ತೀರ್ಮಾನಿಸಲಾಯಿತು. ಈ ಕಾಮಗಾರಿಗಳಿಗೆ ಶಾಸಕರ ನಿಧಿಯಿಂದ ಸಹಾಯ ದೊರಕುವುದೆಂದು ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಸೂಚಿಸಿದರು. ಇದಕ್ಕೆ ಸಂಬಂದ ಪಟ್ಟ ಸಂಸ್ಥೆಗಳಿಂದ ಕೊಟೇಷನ್ ಕರೆದು ಕಾರ್ಯಾದೇಶ ನೀಡಲು ಒಪ್ಪಿಗೆ ಸೂಚಿಸಲಾಯಿತು.

**ವಿಷಯ ನಂ 5.**

ಚಿಕ್ಕಮಗಳೂರು ಬಸವನಹಳ್ಳಿ ಅಥವಾ ಹಿರೇಮಗಳೂರು ಕೆರೆಯ ಪ್ರದೇಶದಲ್ಲಿ ವಾಟರ್ ಪಾರ್ಕ್ ಹಾಗೂ ಬೋಟಿಂಗ್ ವಿಹಾರ ನಿರ್ಮಾಣ ಮಾಡುವ ಬಗ್ಗೆ ಅನುಮೋದನೆ ಕುರಿತು.

**ಟಿಪ್ಪಣಿ :**

ಚಿಕ್ಕಮಗಳೂರು ನಗರದ ದಂಟರಮಕ್ಕಿ ಪಕ್ಕದ ಬಸವನಹಳ್ಳಿ ಅಥವಾ ಹಿರೇಮಗಳೂರು ಕೆರೆಯ ಪ್ರದೇಶದಲ್ಲಿ ವಾಟರ್ ಪಾರ್ಕ್ ಹಾಗೂ ಬೋಟಿಂಗ್ ವಿಹಾರದ ವ್ಯವಸ್ಥೆ ನಿರ್ಮಾಣ ಮಾಡುವ ಬಗ್ಗೆ ಪರಿಣಿತಿ ಹೊಂದಿದ ಸಂಸ್ಥೆಯಿಂದ ಯೋಜನಾ ವರದಿ ಮತ್ತು ದರಪಟ್ಟಿ ತಯಾರಿಸಿಕೊಂಡು ಅಧ್ಯಯನ ನಡೆಸಿದ ನಂತರ ಅನುಷ್ಠಾನಕ್ಕೆ ತರಲು ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ನಗರದ ಹಿರೇಮಗಳೂರು ಕೆರೆ ಪ್ರದೇಶದಲ್ಲಿ ವಾಟರ್ ಪಾರ್ಕ್ ಮತ್ತು ಬೋಟಿಂಗ್ ವಿಹಾರದ ನಿರ್ಮಾಣ ಮಾಡುವ ಬಗ್ಗೆ ಒಪ್ಪಿ ಈ ಬಗ್ಗೆ ಸೂಕ್ತ ನುರಿತ ಸಂಸ್ಥೆಗಳಿಗೆ ವಹಿಸಿ, ವಿವರವಾದ ಯೋಜನಾ ವರದಿಯನ್ನು ತಯಾರಿಸಬೇಕೆಂದು ಹಾಗೂ ಸಣ್ಣ ನೀರಾವರಿ ಇಲಾಖೆಯ ಅನುಮತಿ ಸಹಕಾರ ಪಡೆದು ಅನುಷ್ಠಾನಗೊಳಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಬಸವನಹಳ್ಳಿ ಕೆರೆಯ ಮದ್ಯ ಭಾಗದ ಭೂಮಿಯ ಅಭಿವೃದ್ಧಿ ಕಾಮಗಾರಿಯನ್ನೂ ಸಹ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ನಂ 6.**

ಶ್ರೀ ಯು. ಟಿ. ಗಣೇಶ ಬಿನ್ ಯು. ಟಿ. ತಮ್ಮೇಗೌಡ ರವರು ನಲ್ಲೂರು ಗ್ರಾಮದ ಸ. ನಂ.122 / 7 ರಲ್ಲಿನ 00 ಎಕರೆ 10 ಗುಂಟೆ ವಿಸ್ತೀರ್ಣದ ಜಮೀನನ್ನು ಕೈಗಾರಿಕಾ (ಸಾವಯುವ ಗೊಬ್ಬರ ಶೇಖರಣಾ) ಉದ್ದೇಶಕ್ಕಾಗಿ ಭೂ ಪರಿವರ್ತಿಸಲು ಈ ಕಛೇರಿಯ ಅಭಿಪ್ರಾಯ ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀ ಯು. ಟಿ. ಗಣೇಶ ಬಿನ್ ಯು. ಟಿ. ತಮ್ಮೇಗೌಡ ರವರು ನಲ್ಲೂರು ಗ್ರಾಮದ ಸ. ನಂ. 122 / 7 ರಲ್ಲಿನ 00 ಎಕರೆ 10 ಗುಂಟೆ ವಿಸ್ತೀರ್ಣದ ಜಮೀನನ್ನು ಕೈಗಾರಿಕಾ (ಸಾವಯುವ ಗೊಬ್ಬರ ಶೇಖರಣಾ) ಉದ್ದೇಶಕ್ಕಾಗಿ ಭೂ ಪರಿವರ್ತಿಸಲು ಕೋರಿದ್ದು ಸದರೀ ಜಾಗಕ್ಕೆ ಹಾಲಿ 12.00 ಮೀಟರ್ ಅಗಲದ ರಸ್ತೆಯಿಂದ (ಗ್ರಾಮ ರಸ್ತೆ) ರಸ್ತೆ ಸಂಪರ್ಕ ಹೊಂದಿದ್ದು, ಕೃಷಿ ವಲಯದಲ್ಲಿರುತ್ತದೆ. ಈ ಸಂಬಂಧ ಅರ್ಜಿದಾರರು ಕೃಷಿವಲಯದಲ್ಲಿ ಕೈಗಾರಿಕಾ (ಸಾವಯುವ ಗೊಬ್ಬರ ಶೇಖರಣಾ) ಉದ್ದೇಶಕಾಗಿ ಭೂ ಪರಿವರ್ತಿಸಲು ಕೋರಿರುತ್ತಾರೆ. ಈ ಸಂಬಂಧ ಅರ್ಜಿದಾರರು ಕೋರಿರುವಂತೆ, ಕೃಷಿವಲಯದಲ್ಲಿ ಕೈಗಾರಿಕಾ ಕೃಷಿ ಉದ್ದೇಶದ ಸಾವಯುವ ಗೊಬ್ಬರ ಶೇಖರಣ ಘಟಕವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಭೂ ಪರಿವರ್ತಿಸಲು ವಲಯ ನಿಯಮಾವಳಿಗಳ ಪುಟ ಸಂಖ್ಯೆ. 65 (ಬಿ) ರನ್ವಯ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:**

ಕಂಡಿಕೆ ಒಂದರಲ್ಲಿ ತಿಳಿಸಿರುವಂತೆ ಅರ್ಜಿದಾರರು ಸಾವಯುವ ಗೊಬ್ಬರದ ಶೇಖರಣೆ ಮತ್ತು ಮಾರಾಟ ಮಾಡಲು ಸದರಿ 10 ಗುಂಟೆ ಜಮೀನನ್ನು ಭೂ ಪರಿವರ್ತನೆಗೆ ಕೋರಿದ್ದು, ಸದರಿ ಜಮೀನಿಗೆ ಅಭಿಪ್ರಾಯ ನೀಡುವಂತೆ ಮಾನ್ಯ ಜಿಲ್ಲಾಧಿಕಾರಿಗಳವರ ಕಛೇರಿಯಿಂದ ಪ್ರಸ್ತಾವನೆ ಬಂದಿರುತ್ತದೆ. ಸದರಿ ಜಮೀನಿನ ಸ್ಥಳ ಪರಿಶೀಲಿಸಲಾಗಿದ್ದು, ಕಂಡಿಕೆ (1) ರಲ್ಲಿ ತಿಳಿಸಿರುವಂತೆ 12.00 ಮೀಟರ್ ಅಗಲದ ಗ್ರಾಮ ರಸ್ತೆ ಇದ್ದು, ಇದರಿಂದ ಸದರಿ ಜಮೀನಿಗೆ ಸಂಪರ್ಕ ಇರುತ್ತದೆ. ಈ ಜಮೀನು ಕೃಷಿ ವಲಯದಲ್ಲಿ ಬರುತ್ತಿದೆ. ಕೃಷಿ ವಲಯದಲ್ಲಿ ಕೃಷಿಗೆ ಸಂಬಂಧಿಸಿದ ಅರ್ಜಿದಾರರು ಕೋರಿರುವ ಸಾವಯುವ ಗೊಬ್ಬರ ಶೇಖರಣೆ ಮಾಡಲು ಮತ್ತು ಮಾರಾಟ ಮಾಡುವ ಕುರಿತು ಭೂ ಪರಿವರ್ತನೆಗೆ ಅಭಿಪ್ರಾಯ ನೀಡುವ ಮುನ್ನ ವಲಯ ನಿಯಮಾವಳಿಗಳ ಪ್ರಕಾರ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸಭೆಯ ತೀರ್ಮಾನದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಶ್ರೀ ಯು. ಟಿ. ಗಣೇಶ ಬಿನ್ ಯು. ಟಿ. ತಮ್ಮೇಗೌಡ ರವರು ನಲ್ಲೂರು ಗ್ರಾಮದ ಸ. ನಂ.122 / 7 ರಲ್ಲಿನ 00 ಎಕರೆ 10 ಗುಂಟೆ ಕೃಷಿ ಜಮೀನಿನಲ್ಲಿ ಕೃಷಿಗೆ ಸಂಬಂದಿಸಿದ ಕೈಗಾರಿಕಾ (ಸಾವಯುವ ಗೊಬ್ಬರ ಶೇಖರಣಾ) ಘಟಕವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಭೂ ಪರಿವರ್ತಿಸಲು ವಲಯ ನಿಯಮಾವಳಿಗಳ ಪುಟ ಸಂಖ್ಯೆ. 65 (ಬಿ) ರನ್ವಯ ಅನುಮೋದನೆ ನೀಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 7.**

ಪ್ರಾಧಿಕಾರದ ಆಯುಕ್ತರ ಜೀಪಿಗೆ ಒಬ್ಬ ಚಾಲಕರನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಸಭೆಯ ಅನುಮೋದನೆ ಕೋರುವ ಬಗ್ಗೆ.

**ಟಿಪ್ಪಣಿ :**

ಪ್ರಾಧಿಕಾರದಲ್ಲಿ ಈಗಾಗಲೇ 2 ವಾಹನಗಳಿದ್ದು ಖಾಯಂ ಆಗಿ ಅಧ್ಯಕ್ಷರ ವಾಹನಕ್ಕೆ ಒಬ್ಬರು ಮತ್ತು ಆಯುಕ್ತರ ವಾಹನಕ್ಕೆ ಒಬ್ಬರು ಚಾಲಕರು ಬೇಕಾಗಿರುವುದರಿಂದ ಖಾಲಿ ಇರುವ ಒಬ್ಬ ಚಾಲಕರ ಹುದ್ದೆಯನ್ನು ಖಾಯಂ ಆಗಿ ನಿಯಮಾನುಸಾರ ನೇಮಕ ಮಾಡಿಕೊಳ್ಳಬಹುದಾಗಿದ್ದು, ಇವರ ಸಂಬಳ ಭತ್ಯೆ ಭರಿಸುವಷ್ಟು ಪ್ರಾಧಿಕಾರವು ಆರ್ಥಿಕವಾಗಿ ಸದೃಡವಾಗಿರುತ್ತದೆ. ನೇಮಕಾತಿಗೆ ಸಂಬಂಧಪಟ್ಟಂತೆ ನಿಯಮಾನುಸಾರ ಸರ್ಕಾರದ ಅನುಮತಿ ಪಡೆಯಲು ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಪ್ರಾಧಿಕಾರದಲ್ಲಿ ಒಂದು ತವೇರ ಕಾರು ಮತ್ತು ಒಂದು ಜೀಪು ಇದ್ದು ಒಬ್ಬರು ಖಾಯಂ ಚಾಲಕರು ಕಾರ್ಯ ನಿರ್ವಹಿಸುತ್ತಿದ್ದು, ಮತ್ತೊಬ್ಬ ಚಾಲಕರನ್ನು ಖಾಯಂ ಆಗಿ ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ಅನುಮತಿ ಪಡೆದುಕೊಂಡು ಕ್ರಮವಹಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 8.**

ನಾಗರೀಕ ಸೌಲಭ್ಯದ ನಿವೇಶಗಳನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ) ನಿಯಮಗಳು 1991 ರ ಅನ್ವಯ ಹಂಚಿಕೆ ಮಾಡುವ ಬಗ್ಗೆ.

**ಟಿಪ್ಪಣಿ.**

ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನದ ವಿವರ ಈ ಕೆಳಕಂಡಂತೆ ಇರುತ್ತದೆ.

| ಕ್ರ ಸಂ | ಹೆಸರು | ವಿಸ್ತೀರ್ಣ | ಒಟ್ಟು ಚ.ಮೀ. | ಉದ್ದೇಶ |
|---|---|---|---|---|
| 1. | ಹಿರೇಮಗಳೂರು ವಸತಿ ಬಡಾವಣೆಯ 4 ನೇ ಹಂತದಲ್ಲಿ | 36.58 x $\frac{24.39+0.00}{2}$ | 446.00 | ಶಾಲಾ ಉಪಯೋಗಕ್ಕೆ. |

ಮೇಲೆ ಪಟ್ಟಿಯಲ್ಲಿ ತೋರಿಸಿರುವಂತೆ, ನಿವೇಶನಕ್ಕೆ ದಿನಾಂಕ: 23–09-2008 ರ ಜಿಲ್ಲಾ ಸುದ್ದಿ ಮಾದ್ಯಮ ಕನ್ನಡ ದಿನ ಪತ್ರಿಕೆಯಲ್ಲಿ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆಗಾಗಿ ಅಧಿಸೂಚನೆ ನೀಡಲಾಗಿತ್ತು. ಅದರಂತೆ ಸದರಿ ಸಂಸ್ಥೆಯವರು ಪ್ರಾರಂಭಿಕ ಠೇವಣಿ ಹಣದ ಶೇಕಡ 10 ರಷ್ಟು ರೂ. 57,623=00 ಗಳನ್ನು ಪಾವತಿಸಿ ಅರ್ಜಿ ಸಲ್ಲಿಸಿರುತ್ತಾರೆ. ಅದರಂತೆ ನಾಗರೀಕ ಸೌಲಭ್ಯದ ನಿವೇಶನವನ್ನು ಹಂಚಿಕೆ ಮಾಡುವ ಬಗ್ಗೆ ಪ್ರಾಧಿಕಾರದ ಸಭೆಗೆ ಮಂಡಿಸಲಾಗಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಹಿರೇಮಗಳೂರು ವಸತಿ ಬಡಾವಣೆಯ 4 ನೇ ಹಂತದಲ್ಲಿನ ಒಟ್ಟು 446 ಚದುರ ಮೀಟರ್ ವಿಸ್ತೀರ್ಣದ ನಿವೇಶನವು ಶಾಲಾ ಉಪಯೋಗಕ್ಕಾಗಿ ಹಾಗೂ ಪರಿಶಿಷ್ಟ ಜಾತಿ, ಮತ್ತು ಪರಿಶಿಷ್ಟ ವರ್ಗದವರಿಗಾಗಿ ಮೀಸಲಿಟ್ಟಿದ್ದು, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ನಾಗರೀಕ ಸೌಲಭ್ಯದ ನಿವೇಶನ ಹಂಚಿಕೆ ನಿಯಮಗಳು 1961 ರ ಅನ್ವಯ ನಿವೇಶನ ಹಂಚಿಕೆಗಾಗಿ ಅರ್ಜಿ ಅಹ್ವಾನಿಸಿದ್ದು, ಅದರಂತೆ ಅಧ್ಯಕ್ಷರು / ಕಾರ್ಯದರ್ಶಿಗಳು ರಂಗರಾಂ ವಿದ್ಯಾಸಂಸ್ಥೆ (ರಿ) ರವರು ಅರ್ಜಿ ಸಂಖ್ಯೆ. 9 ದಿನಾಂಕ: 10-10-2008 ರ ಮೂಲಕ ರೂ. 50 ಗಳನ್ನು ಹಾಗೂ ರಶೀದಿ ಸಂಖ್ಯೆ. 82 ದಿನಾಂಕ: 10-10-2008 ನಿವೇಶನದ ಶೇಕಡ 10 ರ ಮೊತ್ತ ರೂ. 57623=00 ನ್ನು ಪ್ರಾಧಿಕಾರಕ್ಕೆ ಪಾವತಿಸಿರುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಆದರೇ ಸದರಿ ಸಂಸ್ಥೆಗೆ ನಿವೇಶನ ನೀಡುವುದು ಸೂಕ್ತವಲ್ಲವೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 9.**

ಪ್ರಾಧಿಕಾರದಲ್ಲಿ ಮಂಜೂರಾಗಿರುವ ಎಲ್ಲಾ ಹುದ್ದೆಗಳು ಪೂರ್ಣ ರೀತಿಯಲ್ಲಿ ಭರ್ತಿಯಾಗದ ಕಾರಣದಿಂದ ದಿನಾಂಕ: 15-05-2007 ರಿಂದ ಕಮಾಂಡರ್ ಸೆಕ್ಯುರಿಟಿ ಸರ್ವೀಸ್ ಚಿಕ್ಕಮಗಳೂರು ರವರಿಂದ ಕೆಲವು ಹುದ್ದೆಗಳನ್ನು ಕೊಟೇಶನ್ ಮೇರೆಗೆ ಒಟ್ಟು 6 ಹುದ್ದೆಗಳನ್ನು ಭರ್ತಿ ಮಾಡಿಕೊಂಡು ಕೆಲಸ ನಿರ್ವಹಿಸುತ್ತಿರುವ ನೌಕರರ ವೇತನ ಹೆಚ್ಚಿಸುವ ಬಗ್ಗೆ.

**ಟಿಪ್ಪಣಿ :**

ಪ್ರಾಧಿಕಾರದಲ್ಲಿ ದಿನಾಂಕ: 15-05-2007 ರಿಂದ ಕೊಟೇಶನ್ ಪ್ರಕಟಣೆಯ ಅನುಸಾರ ಕಂಪ್ಯೂಟರ್ ಆಪರೇಟರ್, ತಾಂತ್ರಿಕ (ಟೆಕ್ನಿಕಲ್ ಕೋರ್ಸ್) ವರ್ಗ ಮತ್ತು ಕಂಪ್ಯೂಟರ್, ಕಛೇರಿ ಸಹಾಯಕರು, ಗಾರ್ಡ್‌ನರ್, ಚಾಲಕರು ಮತ್ತು ಕಛೇರಿ ಸ್ವಚ್ಛಗೊಳಿಸುವವರು ಹೀಗೆ ಒಟ್ಟು 6 ಜನ ಸಿಬ್ಬಂಧಿಗಳನ್ನು ಕಮಾಂಡರ್ ಸೆಕ್ಯೂರಿಟಿ ಸರ್ವೀಸ್ ಚಿಕ್ಕಮಗಳೂರು ರವರ ಮೂಲಕ ಸಿಬ್ಬಂದಿ ಪಡೆದು ಕೆಲಸ ಪಡೆಯಲಾಗುತ್ತಿದೆ. ಹಾಗೆಯೇ ಸದರೀ ಕಮ್ಯಾಂಡರ್ ಸೆಕ್ಯೂರಿಟಿ ಸಂಸ್ಥೆಯಿಂದ ಅವರುಗಳ ವೇತನ ಈ ಕಳಗಿನಂತೆ ಹೆಚ್ಚಿಸುವಂತೆ ಮನವಿ ನೀಡಿರುತ್ತಾರೆ.

| ಕ್ರ.ಸಂ. | ನಿರ್ವಹಿಸುವ ಹುದ್ದೆ | ಈಗಿನ ವೇತನ | ಪರಿಷ್ಕರಿಸಲು ಕೇಳಿರುವ ವೇತನ |
|---|---|---|---|
| 1. | ಟೆಕ್ನಿಕಲ್ ಸಹಾಯಕ | 5350.00 | 7500.00 |
| 2. | ಆಫೀಸ್ ಅಸಿಸ್ಟೆಂಟ್ | 3350.00 | 5500.00 |
| 3. | ಆಫಿಸ್ ಅಸಿಸ್ಟೆಂಟ್ | 3350.00 | 5500.00 |
| 4. | ಡ್ರೈವರ್ | 3850.00 | 5500.00 |
| 5. | ಗಾರ್ಡನರ್ | 2350.00 | 3500.00 |
| 6. | ಕಛೇರಿ ಸ್ವಚ್ಛತೆಗಾಗಿ | 1850.00 | 3000.00 |
| 7. | ಸೆಕ್ಯುರಿಟಿ ಗಾರ್ಡ್ | 2200.00 | 3500.00 |

ಆದ್ದರಿಂದ ಅವರುಗಳ ವೇತನ ಹೆಚ್ಚಿಸುವ ಕುರಿತು ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಹೊರ ಗುತ್ತಿಗೆ ಆದಾರದ ಮೇಲೆ ಪ್ರಾಧಿಕಾರದಲ್ಲಿ ಸೇವೆ ಪಡೆಯುತ್ತಿರುವುದರ ಬಗ್ಗೆ ದೀರ್ಘವಾಗಿ ಚರ್ಚಿಸಿ ನಗರಸಭೆಯಲ್ಲಿ ಮತ್ತು ಇತರೆ ಸರ್ಕಾರಿ ಕಛೇರಿಗಳಲ್ಲಿ ಹೊರ ಗುತ್ತಿಗೆಯವರಿಗೆ ನೀಡುತ್ತಿರುವ ವೇತನವನ್ನು ಪರಿಗಣಿಸಿ ಪ್ರಾಧಿಕಾರವು ನೀಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 10.**

ಹೊಸ ಲೇಔಟ್ ನಿರ್ಮಾಣಕ್ಕಾಗಿ ಹಿಂದಿನ ಸಭೆಯಲ್ಲಿ ಭೂಸ್ವಾಧೀನ ಪಡಿಸಿಕೊಳ್ಳಲು ನಿರ್ಣಯ ಆಗಿರುವ ಜಮೀನುಗಳನ್ನು ಭೂ ಮಾಲೀಕರು ರೈತರ ಜೊತೆ ಮಾತುಕತೆ ನಡೆಸಿ ಭೂ ಖರೀದಿ ಮಾಡುವ ಬಗ್ಗೆ.

**ಟಿಪ್ಪಣಿ :**

ಪ್ರಾಧಿಕಾರವು ಹೊಸದಾಗಿ ಲೇಔಟ್‌ಗಳ ನಿರ್ಮಾಣಕ್ಕಾಗಿ ಹಿಂದಿನ ಸಭೆಗಳಲ್ಲಿ ಭೂ ಸ್ವಾದೀನ ಪಡಿಸಿಕೊಳ್ಳಲು ನಿರ್ಣಯ ಆಗಿರುವ ಜಮೀನುಗಳನ್ನು ಮಾಲೀಕರುಗಳು ಹಾಗೂ ರೈತರ ಜೊತೆ ಮಾತುಕತೆ ನಡೆಸಿ ಭೂ ಖರೀದಿ ಮಾಡುವ ಬಗ್ಗೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದ್ದು ಈ ಬಗ್ಗೆ ಸರ್ಕಾರದ ನಿಯಮಗಳಂತೆ ನಿರ್ಣಯ ಕೈಗೊಳ್ಳಬೇಕಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಿ ಹಿರೆಮಗಳೂರು ಗ್ರಾಮದ ಸರ್ವೆ ನಂ. 321 ಮತ್ತಿತರೆ ಸರ್ವೆ ನಂಬರುಗಳ 17 ಎಕರೆ 37½ ಗುಂಟೆ ಜಮೀನಿಗೆ ಲೇಔಟ್ ನಿರ್ಮಾಣ ಮಾಡಲು ಈಗ ವೆಚ್ಚವು ಶೇಕಡ 5 ಕ್ಕಿಂತ ಅದಿಕವಾಗಿರುವುದರಿಂದ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 19 (5) ರ ಅನ್ವಯ ಶೀಘ್ರವಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಸರ್ಕಾರದ ಅನುಮೋದನೆ ಪಡೆದು ಕಾಮಗಾರಿ ನಿರ್ವಹಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಲಾಯಿತು.

ಅದರಂತೆ, ನೂತನವಾಗಿ ಲೇಔಟ್ ನಿರ್ಮಾಣ ಮಾಡಲು ಉದ್ದೇಶಿಸಿರುವ ಹಿರೇಮಗಳೂರು ತೇಗೂರು ಮತ್ತು ರಾಮನಹಳ್ಳಿ ಗ್ರಾಮಗಳ ರೈತರ / ಮಾಲೀಕರ ಸಭೆ ಕರೆದು. ಸರ್ಕಾರದ ನಿಯಮಾವಳಿಗಳಂತೆ ಭೂಮಿಯನ್ನು ಖರೀದಿಸಲು ಅಥವಾ ಪ್ರಾಧಿಕಾರ ಮತ್ತು ಮಾಲೀಕರ ಸಹಭಾಗಿತ್ವದ ಯೋಜನೆ ಅಡಿ ಲೇಔಟ್ ನಿರ್ಮಾಣ ಮಾಡಲು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ಈ ಎರಡೂ ಯೋಜನೆಗೆ ಒಪ್ಪದಿದ್ದಲ್ಲಿ ಭೂಮಿಯನ್ನು ಈ ಹಿಂದೆ ನಿರ್ಣಯ ಮಾಡಿದಂತೆ ಭೂ ಸ್ವಾದೀನ ಮಾಡಿಕೊಳ್ಳಲೂ ಸಹ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 11.**

ಶ್ರೀ ಕೆ. ಆರ್. ಕಾರ್ತಿಕ್ ಬಿನ್ ಶ್ರೀ ಕೆ. ಎಸ್. ರಮೇಶ್ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸ.ನಂ. 545 / 6 ರ್ರಲ್ಲಿನ 11 ಎಕರೆ 02 ಗುಂಟೆ ಮತ್ತು 545 / 1 ರಲ್ಲಿನ 02 ಎಕರೆ 32 ಗುಂಟೆ ಒಟ್ಟು 13 ಎಕರೆ 34 ಗುಂಟೆ, ಜಮೀನನ್ನು ಶಾಲೆ (ಸಾರ್ವಜನಿಕ / ಅರೆಸಾರ್ವಜನಿಕ) ಉಪಯೋಗಕ್ಕಾಗಿ ಭೂ ಪರಿವರ್ತಿಸಲು ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀ ಕೆ. ಆರ್. ಕಾರ್ತಿಕ್ ಬಿನ್ ಶ್ರೀ ಕೆ. ಎಸ್. ರಮೇಶ್ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸ. ನಂ. 545 / 6 ರಲ್ಲಿನ 11 ಎಕರೆ 02 ಗುಂಟೆ ಮತ್ತು 545 / 1 ರಲ್ಲಿನ 02 ಎಕರೆ 32 ಗುಂಟೆ ಒಟ್ಟು 13 ಎಕರೆ 34 ಗುಂಟೆ, ಜಮೀನನ್ನು ಶಾಲೆ (ಸಾರ್ವಜನಿಕ / ಅರೆಸಾರ್ವಜನಿಕ) ಉಪಯೋಗಕ್ಕಾಗಿ ಭೂ ಪರಿವರ್ತಿಸಲು ಕೋರಿದ್ದು, ಸದರಿ ಜಾಗವು ಹಾಲಿ 12 ಮೀ ಅಗಲದ ಗ್ರಾಮ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿದೆ. ಸದರಿ ಜಾಗಕ್ಕೆ ಹೊಂದಿಕೊಂಡಂತಿರುವ ಇದೇ ಸರ್ವೆ ನಂ. ರಲ್ಲಿನ ಇದೇ ಅರ್ಜಿದಾರರ ಜಮೀನಿಗೆ ಶಾಲಾ ಉದ್ದೇಶಕ್ಕಾಗಿ ಭೂ ಪರಿವರ್ತಿಸಲು ದಿನಾಂಕ: 27-09-2008 ರಂದು ನಡೆದ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ ಶಾಲೆಗಾಗಿ ಭೂ ಪರಿವರ್ತಿಸಲು ಈ ಕಛೇರಿಯಿಂದ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರಿಗೆ ವರದಿಯನ್ನು ನೀಡಲಾಗಿತ್ತು. ಸದರಿ ಜಮೀನು ಸಹ ಈಗಾಗಲೇ ಭೂ ಅನ್ಯಕ್ರಾಂತವಾಗಿ ವಿನ್ಯಾಸ ಅನುಮೋದನೆಯಾಗಿರುವ ಜಮೀನಾಗಿದ್ದು, ಈ ಜಮೀನು ಸಹ ಇದಕ್ಕೆ ಲಗತ್ತಾಗಿರುವ ಜಮೀನಾಗಿದ್ದು, ಶಾಲಾ ಉದ್ದೇಶಕ್ಕಾಗಿ ಭೂ ಪರಿವರ್ತಿಸಲು ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ:**

ಪ್ರಸ್ತಾವಿತ ಜಮೀನಿನ ಸ್ಥಳ ಪರಿಶೀಲಿಸಲಾಯಿತು. ಕಂಡಿಕೆ (1) ರಲ್ಲಿ ತಿಳಿಸಿರುವಂತೆ 12.00 ಮೀಟರ್ ಅಗಲದ ಕುರುವಂಗಿ ಕಡೆಗೆ ಹೋಗುವ ಗ್ರಾಮ ರಸ್ತೆಯಿಂದ ಈ ಜಮೀನಿಗೆ ಸಂಪರ್ಕ ಇರುತ್ತದೆ. ಸದರಿ ಜಮೀನು ವ್ಯವಸಾಯ ವಲಯದಲ್ಲಿ ಬರುತ್ತಿದೆ. ವ್ಯವಸಾಯ ವಲಯದಲ್ಲಿ ಶಾಲಾ ಉದ್ದೇಶಕ್ಕೆ ಅಭಿಪ್ರಾಯ ನೀಡಲು, ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸಭೆಯ ತೀರ್ಮಾನವನ್ನು ಕೈಗೊಂಡು ಭೂ ಪರಿವರ್ತನೆಗೆ ಅಭಿಪ್ರಾಯ ನೀಡಬಹುದಾಗಿದೆ. ಇದೇ ಸ. ನಂ. ನಲ್ಲಿ ಇದೇ ಅರ್ಜಿದಾರರಿಗೆ ಸಂಬಂಧಿಸಿದ 7.0 ಎಕರೆ ಜಮೀನು ಶಾಲಾ ಉದ್ದೇಶಕ್ಕೆ ಭೂ ಅನ್ಯಕ್ರಾಂತ ಆಗಿರುತ್ತದೆ. ಸದರಿ ಜಾಗದ ಜೊತೆಗೆ ಹೆಚ್ಚುವರಿ ಅಂದರೆ 13 ಎಕರೆ 34 ಗುಂಟೆ ಜಮೀನಿಗೆ ಪುನಃ ಶಾಲಾ ಉದ್ದೇಶಕ್ಕೆ ಪ್ರಸ್ತಾವನೆ ಇರುತ್ತದೆ. ಈ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸಭೆಯ ತೀರ್ಮಾನದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಶ್ರೀ ಕೆ. ಆರ್. ಕಾರ್ತಿಕ್ ಬಿನ್ ಶ್ರೀ ಕೆ.ಎಸ್. ರಮೇಶ್ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಹಿರೇಮಗಳೂರು ಗ್ರಾಮದ ಸ. ನಂ. 545 / 6 ರಲ್ಲಿನ 11 ಎಕರೆ 02 ಗುಂಟೆ ಮತ್ತು 545 / 1 ರಲ್ಲಿನ 02 ಎಕರೆ 32 ಗುಂಟೆ ಒಟ್ಟು 13 ಎಕರೆ 34 ಗುಂಟೆ, ಕೃಷಿ ಜಮೀನನ್ನು ಶಾಲಾ ಉಪಯೋಗಕ್ಕಾಗಿ ಭೂ ಪರಿವರ್ತಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 12.**

ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನಗಳನ್ನು ವಿವಿಧ ಸಂಸ್ಥೆಗಳಿಗೆ ನೀಡಲು ಮನವಿ ಮಾಡಿದ್ದು, ಸಂಬಂಧಿಸಿದಂತೆ ಲಭ್ಯವಿರುವ ನಿವೇಶನಗಳ ಉದ್ದೇಶ ಬದಲಾಯಿಸಿ ಹಂಚಿಕೆ ಮಾಡುವ ಬಗ್ಗೆ.

**ಟಿಪ್ಪಣಿ :**

ಈ ಕೆಳಕಂಡ ಸಂಘ ಸಂಸ್ಥೆಗಳು ನಿವೇಶನಕ್ಕಾಗಿ ಮನವಿ ಸಲ್ಲಿಸಿದೆ.

1. ಸಮಾಜ ಕಲ್ಯಾಣ ಇಲಾಖೆ, ಹಾಸ್ಟಲ್ ನಿರ್ಮಾಣಕ್ಕೆ- 90000.00 ಚ.ಅಡಿ.
2. ಹಿಂದುಳಿದ ವರ್ಗ ಅಭಿವೃದ್ಧಿ ನಿಗಮ ಕಛೇರಿ ಕಟ್ಟಡಕ್ಕೆ- 9600.00 ಚ.ಅಡಿ.
3. ಸಾಯಿ ಏಂಜಲ್ಸ್ ಪ್ರಿಯೂನಿವರ್ಸಿಟಿ ಕಾಲೇಜಿಗೆ- 20000.00 ಚ.ಅಡಿ.

ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯ ನಿವೇಶನಗಳ ಪಟ್ಟಿಯನ್ನು ಸಭೆಗೆ ಮಂಡಿಸಲಾಗಿದ್ದು, ಈಗಾಗಲೇ ವಿವಿದ ಉದ್ದೇಶಗಳಿಗೆ ಮಂಜೂರು ಮಾಡಿರುವ ವಿವರಗಳನ್ನು ಮಂಡಿಸಿದ್ದು, ಉಳಿದಿರುವ ನಿವೇಶನಗಳನ್ನು ಯಾವ ಉದ್ದೇಶಗಳಿಗೆ ಮೀಸಲಿಡಬೇಕೆಂಬ ಬಗ್ಗೆ ವಿಷಯವನ್ನು ಸಭೆಗೆ ಮಂಡಿಸಿದೆ (ಲಭ್ಯವಿರುವ ಮತ್ತು ಮೀಸಲಿಟ್ಟಿರುವ ನಿವೇಶನಗಳ ವಿವರ ಪ್ರತ್ಯೆಕ ಪುಟದಲ್ಲಿ ಸಭೆಗೆ ಮಂಡಿಸಿದೆ).

ಈ ಕಛೇರಿ ಪತ್ರ ಸಂಖ್ಯೆ. ನಅಪ್ರಾ:ಚಿ : ನಾಸೌನಿಹ : 747 : 2008-09 ದಿನಾಂಕ: 14-08-2008 ಮತ್ತು ನಅಪ್ರಾ:ಚಿ : ನಾಸೌನಿಹ : 923 : 18-09-2008 ಗಳಲ್ಲಿ ಪತ್ರಿಕಾ ಪ್ರಚಾರ ನೀಡಿದ್ದು, ಮತ್ತು ವೈಯಕ್ತಿಕವಾಗಿ ಶಿಕ್ಷಣ ಇಲಾಖೆ ಮುಖ್ಯಸ್ಥರಿಗೆ ಪತ್ರ ಬರೆದು ದೂರವಾಣಿ ಮೂಲಕ ಮಾತನಾಡಿ ಶಾಲಾ ಉದ್ದೇಶಕ್ಕೆ ಮೀಸಲಿಟ್ಟಿರುವ ನಿವೇಶನ ಪಡೆದುಕೊಳ್ಳಲು ಕೋರಿದರೂ ಆಸಕ್ತಿ ತೋರಿಸಿರುವುದಿಲ್ಲ. ಆದ್ದರಿಂದ ನಿಯಮಗಳಡಿ ಉದ್ದೇಶ ಬದಲಿಸಬೇಕಾಗಿರುತ್ತದೆ. ಪ್ರಾದಿಕಾರದಲ್ಲಿ ಲಭ್ಯವಿರುವ ನಿವೇಶನಗಳ ವಿವರಗಳನ್ನು ಪ್ರತ್ಯೇಕ ಪುಟದಲ್ಲಿ ಲಗತ್ತಿಸಿದೆ.

**ತೀರ್ಮಾನ :**

ಸಮಾಜ ಕಲ್ಯಾಣ ಇಲಾಖೆ ಹಾಗೂ ಹಿಂದುಳಿದ ವರ್ಗಗಳ ಇಲಾಖೆಗಳ ಹಾಸ್ಟಲ್‌ಗಳಿಗೆ ಸಂಬದಿಸಿದಂತೆ ಹೆಚ್ಚು ಭೂಮಿಯ ಅವಶ್ಯಕತೆ ಇರುವುದರಿಂದ ಅವರು ನೇರವಾಗಿ ಜಿಲ್ಲಾಧಿಕಾರಿಗಳ ಮೂಲಕ ಭೂಮಿಯನ್ನು ಪಡೆದುಕೊಳ್ಳುವಂತೆ ಸೂಚಿಸಲು ತೀರ್ಮಾನಿಸಲಾಯಿತು. ಹಿಂದುಳಿದ ವರ್ಗಗಳ ನಿಗಮದ ಕಛೇರಿಗೆ ಸ್ಥಳ ತೋರಿಸಿ ಒಪ್ಪಿದ ನಂತರ ಮುಂದಿನ ಸಭೆಗೆ ಮಂಡಿಸಲು ತೀರ್ಮಾನಿಸಲಾಯಿತು.

ಸಾಯಿ ಏಂಜಲ್ಸ್ ಕಾಲೇಜು ನಿರ್ಮಾಣಕ್ಕೆ 20000 ಚದುರ ಅಡಿ ನಿವೇಶನಕ್ಕೆ ಮನವಿ ಮಾಡಿದ್ದು ಇವರಿಗೆ ಜಯನಗರದ ಚಂದ್ರಶೇಖರ್ ಲೇಔಟ್‌ನಿಂದ ಒಟ್ಟು 14525 ಚದರ ಅಡಿ ಸ್ಥಳ ನೀಡಬಹುದೆಂದು ಹಾಗೂ ನಿಯಮಾನುಸಾರ ಕ್ರಮ ಕೈಗೊಂಡು ನಂತರ ಹಂಚಿಕೆ ಮಾಡಲು ಸರ್ವಾನುಮತದಿಂದ ಸಭೆ ತೀರ್ಮಾನಿಸಲಾಯಿತು.

ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನಗಳ ಬಗ್ಗೆ ವಿವರವಾಗಿ ಚರ್ಚಿಸಿ ಈ ಕೆಳಕಂಡಂತೆ ಉಪಯೋಗದ ಉದ್ದೇಶ ಹಾಗೂ ಕಾಯ್ದಿರಿಸುವಿಕೆಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ನಾಗರೀಕ ಸೌಲಭ್ಯದ ನಿವೇಶನಗಳ ಹಂಚಿಕೆ ನಿಯಮಗಳು 1991 ರಂತೆ ಮೀಸಲು ಬದಲಾಯಿಸಿ ಹಂಚಿಕೆ ಮಾಡಲು ಕ್ರಮ ಜರುಗಿಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. (ವಿವರಗಳ ಪಟ್ಟಿ ಪ್ರತ್ಯೇಕವಾಗಿ ಲಗತ್ತಿಸಿದೆ.)

## ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯಗಳು.

**ವಿಷಯ ನಂ 1.**

ದಿವಂಗತ ಹೆಚ್. ಕೆ. ಲವಕುಮಾರ ರಾಜ ಅರಸ್ ಸ.ಇ. ಇವರು ಪ್ರಾಧಿಕಾರದ ಅಳತೆ ಪುಸ್ತಕ ಸಂಖ್ಯೆ. 11 ಮತ್ತು 14 ಹಾಗೂ ಇತರೆ ಕೆಲವು ಕಡತಗಳನ್ನು ಕಛೇರಿಗೆ ಹಿಂದಿರುಗಿಸದಿರುವ ಕಾರಣ ಅವರಿಗೆ ನೀಡಬೇಕಾದ ಡಿ.ಸಿ.ಆರ್.ಜಿ. ಮೊತ್ತ ತಡೆಹಿಡಿದಿರುವ ಬಗ್ಗೆ.

**ಟಿಪ್ಪಣಿ :**

ದಿವಂಗತ ಹೆಚ್. ಕೆ. ಲವಕುಮಾರ ರಾಜ ಅರಸ್ ಸಹಾಯಕ ಇಂಜಿನಿಯರ್ ಇವರು ಇದೇ ಪ್ರಾಧಿಕಾರದಲ್ಲಿ ಸಹಾಯಕ ಇಂಜಿನಿಯರ್ ಆಗಿ ಕೆಲಸ ನಿರ್ವಹಿಸುತ್ತಿದ್ದರು ಇವರು ತಮ್ಮ ಸೇವಾ ಅವದಿಯಲ್ಲಿ ಮರಣ ಹೊದಿದ್ದು ಅವರು ಕೆಲಸ ನಿರ್ವಹಿಸುತ್ತಿದ್ದ ಸಮಯದಲ್ಲಿ ಕೆಲವು ಕಡತಗಳು ಹಾಗೂ ಅಳತೆ ಪುಸ್ತಕ ಸಂಖ್ಯೆ. 11 ಮತ್ತು 14 ನ್ನು ಈ ಕಛೇರಿಗೆ ಸಲ್ಲಿಸಿರುವುದಿಲ್ಲ ಹಾಗಾಗಿ ಈ ಕಛೇರಿಯ ಪತ್ರ ಸಂಖ್ಯೆ. ನಅಪ್ರಾಚಿ : ಆಡಳಿತ : 2007 - 08,

ದಿನಾಂಕ: 27-02-2008 ರಲ್ಲಿ ಸದರಿ ಕಡತಗಳನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿತ್ತು, ಆದರೆ ಸದರಿ ಕಡತಗಳನ್ನು ಹಿಂತಿರುಗಿಸದೇ ಇರುವುದರಿಂದ ಅವರಿಗೆ ಪಾವತಿಸಬೇಕಾಗಿದ್ದ ಡಿ.ಸಿ.ಆರ್.ಜಿ ಹಣವನ್ನು ಸಂದಾಯ ಮಾಡಿರುವುದಿಲ್ಲ, ಆದುದರಿಂದ ಅವರ ಪತ್ನಿಯಾದ ಶ್ರೀಮತಿ ಪಂಕಜ ಇವರು ದಿನಾಂಕ: 27-11-2008 ರಂದು ಈ ಕಛೇರಿಗೆ ಅರ್ಜಿ ಸಲ್ಲಿಸಿ ಅದರಲ್ಲಿ ಸದರಿ ಕಡತಗಳು ಹಾಗೂ ಅಳತೆ ಪುಸ್ತಕಗಳನ್ನು ಎಲ್ಲಾ ಕಡತಗಳನ್ನು ಮನೆಯಲ್ಲಿ ಹಾಗೂ ಸಂಬಂದಪಟ್ಟ ಎಲ್ಲಾ ರೀತಿಯಲ್ಲಿ ಹುಡುಕಿದರೂ ಸಿಕ್ಕದ ಕಾರಣ ನಿಮ್ಮ ಕಛೇರಿಯ ಅಳತೆ ಪುಸ್ತಕ ಸಿಕ್ಕಿರುವುದಿಲ್ಲ ಎಂದು ತಿಳಿಸಿರುತ್ತಾರೆ, ಆದುದರಿಂದ ಅವರಿಗೆ ಪಾವತಿಸಬೇಕಾಗಿದ್ದ ಡಿ.ಸಿ.ಆರ್.ಜಿ. ಹಣವನ್ನು ಪಾವತಿಸಬೇಕೆಂದು ತಮ್ಮ ಮನವಿ ಪತ್ರದಲ್ಲಿ ಕೋರಿರುತ್ತಾರೆ, ಸದರಿ ಹಣವನ್ನು ಪಾವತಿಸಲು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ದಿವಂಗತ ಹೆಚ್. ಕೆ. ಲವಕುಮಾರ ರಾಜ ಅರಸ್ ಸಹಾಯಕ ಇಂಜಿನಿಯರ್ ಇವರು ಪ್ರಾಧಿಕಾರಕ್ಕೆ ಅಳತೆ ಪುಸ್ತಕ ಮತ್ತು ಕೆಲ ಕಡತಗಳನ್ನು ಹಿಂತಿರುಗಿಸದಿರುವ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಕಡತಗಳು ಮತ್ತು ಅಳತೆ ಪುಸ್ತಕಗಳು ಯಾವ ಕಾಮಗಾರಿಗೆ ಯಾವ ವರ್ಷಕ್ಕೆ ಸಂಬಂದಿಸಿದವು ಎಂಬ ಬಗ್ಗೆ ಹಾಗೂ ಕಾಮಗಾರಿ ನಿರ್ವಹಣೆ ಬಗ್ಗೆ ಆಯುಕ್ತರು ಪರಿಶೀಲಿಸಿ ಅಧ್ಯಕ್ಷರ ಅನುಮೋದನೆ ಪಡೆದು ಡಿ.ಸಿ.ಆರ್.ಜಿ. ಹಣ ಪಾವತಿಸುವ ಬಗ್ಗೆ ಪ್ರಾಧಿಕಾರದಿಂದ ತೀರುವಳಿ ಪತ್ರ (ಎನ್‌ಒಸಿ) ನೀಡಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 2.**

ಚಿಕ್ಕಮಗಳೂರು ನಗರದ ದಂಟರಮಕ್ಕಿ ಬಸ್ ನಿಲ್ದಾಣದ ಹತ್ತಿರ ಸರ್ಕಲ್ (ವೃತ್ತ) ನಿರ್ಮಾಣ ಮಾಡುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರವು ದಿನದಿಂದ ದಿನಕ್ಕೆ ಜನದಟ್ಟಣೆಯಾಗಿ ಅದಿಕ ವಾಹನ ಸಂಚಾರ ಹಾಗೂ ಸದರಿ ರಸ್ತೆಯು ಕಡೂರು ಮಂಗಳೂರು ರಾಜ್ಯ ಹೆದ್ದಾರಿ ರಸ್ತೆಯಾಗಿದ್ದು ಸದರಿ ರಸ್ತೆಯಿಂದ ದಂಟರಮಕ್ಕಿ ಗ್ರಾಮ ಹಾಗೂ ಕುರುವಂಗಿ ರಸ್ತೆಯ ಕವಲು ರಸ್ತೆಗಳಿದ್ದು ಸದರಿ ರಸ್ತೆಯ ಜಂಕ್ಷನ್‌ನಲ್ಲಿ ವೃತ್ತ ನಿರ್ಮಾಣ ಮಾಡುವುದು ಸೂಕ್ತವಾಗಿರುತ್ತದೆ, ವೃತ್ತ ನಿರ್ಮಾಣ ಮಾಡಲು ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ಚಿಕ್ಕಮಗಳೂರು ನಗರದ ದಂಟರಮಕ್ಕಿ ಗ್ರಾಮ ಹಾಗೂ ಕುರುವಂಗಿ ರಸ್ತೆಯ ಕವಲು ರಸ್ತೆಗಳಿದ್ದು ಸದರಿ ರಸ್ತೆಯ ಜಂಕ್ಷನ್‌ನಲ್ಲಿ ನಿಯಮಾನುಸಾರ ವೃತ್ತ ನಿರ್ಮಾಣ ಮಾಡಬಹುದೆಂದು ಹಾಗೂ ಇದಕ್ಕೆ ಸಂಬಂದಿಸಿದಂತೆ ಖರ್ಚು ವೆಚ್ಚಗಳ ಅಂದಾಜು ಪಟ್ಟಿ ತಯಾರಿಸಿ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ಡಾ., ಮುಮ್ತಾಜ್ ಆಲಿಖಾನ್ ಮಾನ್ಯ ಸಚಿವರು ಹಜ್, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಇವರು ದಂಟರಮಕ್ಕಿ ಬಡಾವಣೆಯ ಮುನ್ಸಿಪಲ್ ಅಸೆಸ್‌ಮೆಂಟ್ ನಂಬರ್. 1762 / 1192 ರಲ್ಲಿನ ವಸತಿ (ವಿದ್ಯಾರ್ಥಿ ನಿಲಯ) ನಿವೇಶನದಲ್ಲಿ ಆಸ್ಪತ್ರೆ ಕಟ್ಟಡ ನಿರ್ಮಾಣ ಮಾಡಲು ಅನುಮತಿ ಕೋರಿರುವ ಬಗ್ಗೆ.

**ಟಿಪ್ಪಣಿ :**

ಡಾ., ಮುಮ್ತಾಜ್ ಆಲಿಖಾನ್ ಮಾನ್ಯ ಸಚಿವರು ಹಜ್, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಇವರು ದಂಟರಮಕ್ಕಿ ಬಡಾವಣೆಯ ಮುನ್ಸಿಪಲ್ ಅಸೆಸ್‌ಮೆಂಟ್ ನಂಬರ್. 1762 / 1192 ರಲ್ಲಿನ ವಸತಿ (ವಿದ್ಯಾರ್ಥಿ ನಿಲಯ) ನಿವೇಶನದಲ್ಲಿ ಆಸ್ಪತ್ರೆ ಕಟ್ಟಡ ನಿರ್ಮಾಣ ಮಾಡಲು ಅನುಮತಿ ಕೋರಿರುತ್ತಾರೆ, ಸದರಿ ಜಾಗವು ಉದ್ಯಾನವನ ಉದ್ದೇಶದಿಂದ ವಸತಿ (ಹಾಸ್ಟಲ್) ಉದ್ದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ. ನಅಇ : 10 : ಮೈಅಪ್ರಾ : 2004, ದಿನಾಂಕ: 20-10-2004 ರಲ್ಲಿ ಭೂಉಪಯೋಗ ಬದಲಾವಣೆಯಾಗಿರುತ್ತದೆ, ಸದರಿ ನಿವೇಶನದಲ್ಲಿ ವಸತಿ (ಹಾಸ್ಟಲ್) ಉದ್ದೇಶದ ಬದಲಾಗಿ ಆಸ್ಪತ್ರೆ ನಿರ್ಮಾಣ ಮಾಡಲು ಭೂ ಉಪಯೋಗದ ಬದಲಾವಣೆ ಕೋರಿರುವಂತೆ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲು ಕೋರಿರುತ್ತಾರೆ, ಅದರಂತೆ ಸದರಿ ವಿಷಯವನ್ನು ಸಭೆಯ ಮುಂದೆ ಮಂಡಿಸಿ ಸಭೆಯ ತೀರ್ಮಾನದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಸದರಿ ಜಾಗಕ್ಕೆ ಸರ್ಕಾರದಿಂದ ಈಗಾಗಲೇ ಉದ್ಯಾನವನ ಉದ್ದೇಶದಿಂದ ವಸತಿ (ಹಾಸ್ಟಲ್) ಉದ್ದೇಶಕ್ಕೆ ಸರ್ಕಾರದ ಆದೇಶ ಸಂಖ್ಯೆ. ನಅಇ : 10 : ಮೈಅಪ್ರಾ : 2004, ದಿನಾಂಕ: 20-10-2004 ರಲ್ಲಿ ಭೂಉಪಯೋಗ ಬದಲಾವಣೆಯಾಗಿ ವಸತಿ ವಲಯದಲ್ಲಿರುತ್ತದೆ, ವಸತಿ ವಲಯದಲ್ಲಿ ಆಸ್ಪತ್ರೆ ನಿರ್ಮಾಣ ಮಾಡಲು ವಲಯ ನಿಯಮಾವಳಿಯ ಪುಟ ಸಂಖ್ಯೆ. 65 (ಬಿ) ರನ್ವಯ ಅವಕಾಶವಿರುತ್ತದೆ, ಆದುದರಿಂದ ಸದರಿ ವಿಷಯವನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ತೀರ್ಮಾನದಂತೆ ಕ್ರಮ ವಹಿಸಬಹುದಾಗಿರುತ್ತದೆ.

**ತೀರ್ಮಾನ :**

ಡಾ., ಮುಮ್ತಾಜ್ ಆಲಿಖಾನ್ ಮಾನ್ಯ ಹಜ್, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಇವರು ದಂಟರಮಕ್ಕಿ ಬಡಾವಣೆಯ ಮುನ್ಸಿಪಲ್ ಅಸೆಸ್‌ಮೆಂಟ್ ನಂಬರ್. 1762 / 1192 ರಲ್ಲಿನ ವಸತಿ (ವಿದ್ಯಾರ್ಥಿ ನಿಲಯ) ನಿವೇಶನದಲ್ಲಿ ಆಸ್ಪತ್ರೆ ಕಟ್ಟಡ ನಿರ್ಮಾಣ ಮಾಡಲು ಅನುಮತಿ ನೀಡುವ ಬಗ್ಗೆ ಕಾರ್ಯದರ್ಶಿಗಳು ವಕ್ಫ್ ಮಂಡಳಿ ರವರಿಂದ ನಿರ್ಮಾಣ ಮಾಡಬಯಸುವ ಆಸ್ಪತ್ರೆಯ ಪೂರ್ಣ ವಿವರಗಳ ಮಾಹಿತಿ ಪಡೆದು ನಂತರ ಆಸ್ಪತ್ರೆ ಕಟ್ಟಡ ನಿರ್ಮಾಣಕ್ಕೆ ಭೂ ಬದಲಾವಣೆಗೆ ಅನುಮತಿ ಕೊಡುವ ಬಗ್ಗೆ ಕ್ರಮವಹಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 4.**

ಶ್ರೀಮತಿ ಭವಾರಿಬಾಯಿ ಕೊಂ ಲೇಟ್ ಲಾಲ್‌ಚಂದ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 72 / P ರಲ್ಲಿನ 20.73 x 53.96 ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀಮತಿ ಭವಾರಿಬಾಯಿ ಕೊಂ ಲೇಟ್ ಲಾಲ್‌ಚಂದ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 72 / P ರಲ್ಲಿನ 20.73 x 53.96 ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನ ಇದನ್ನು ಸರ್ವೀಸ್ ಸ್ಟೇಷನ್ (ಕೈಗಾರಿಕೆಗೆ) ಅನುಮೋದನೆ ಕೋರಿರುತ್ತಾರೆ, ಸದರಿ ಜಾಗಕ್ಕೆ ಭೂ ಪರಿವರ್ತಿತ ಮಂಜೂರಾತಿ ಆದೇಶ ನೀಡಿರುತ್ತಾರೆ, ಈ ಜಾಗವು ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಿದೆ, ಸದರಿ ಜಾಗದ ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿದ್ದು ವಸತಿ ವಲಯದಲ್ಲಿರುತ್ತದೆ. ಈ ಪ್ರಸ್ತಾವನೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 522 : ಮೈಅಪ್ರಾ : 2005, ದಿನಾಂಕ: 10-03-2006 ರನ್ವಯ ಶುಲ್ಕಗಳನ್ನು ಪಾವತಿಸಿಕೊಂಡು ಮತ್ತಿತರೆ ಷರತ್ತುಗಳಿಗೊಳಪಟ್ಟು ವಸತಿ ಏಕ ನಿವೇಶನ ಅನುಮೋದನೆ ನೀಡಲು ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 72 / P ರಲ್ಲಿನ 20.73 x 53.96 ಮೀ ಅಳತೆಯ ಜಾಗವು ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಲಾಗಿದ್ದು, ಹಾಗೂ ರಸ್ತೆ ಸಂಪರ್ಕ ಬಂದಿದ್ದು ಸದರಿ ಜಾಗದ ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿರುತ್ತದೆ, ಆದುದರಿಂದ ಸದರಿ ಜಾಗಕ್ಕೆ ಸುತ್ತೋಲೆಯನ್ವಯ ಕೈಗಾರಿಕೆಗೆ ಕ್ರಮ ವಹಿಸಬಹುದಾಗಿರುತ್ತದೆ, ವಿಷಯವನ್ನು ಸಭೆಯ ಮುಂದೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ತೀರ್ಮಾನ :**

ಶ್ರೀಮತಿ ಭವಾರಿಬಾಯಿ ಕೊಂ ಲೇಟ್ ಲಾಲ್‌ಚಂದ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 72 / P ರಲ್ಲಿನ 20.73 x 53.96 ಮೀ ಅಳತೆಯ ಜಾಗಕ್ಕೆ ಗ್ಯಾರೇಜ್ (ವರ್ಕ್ ಶಾಪ್) ಉಪಯೋಗಕ್ಕೆ ಒಂಟಿ ನಿವೇಶನ ಅನುಮೋದನೆ ನೀಡುವ ಬಗ್ಗೆ ಸಭೆಗೆ ನಗರ ಯೋಜನಾ ಸದಸ್ಯರು ವಿಷಯವನ್ನು ಸಭೆಯ ಮುಂದೆ ಮಂಡಿಸಿದರು ಸದರಿ ಜಾಗವು ವಸತಿ ಪ್ರದೇಶಗಳಲ್ಲಿದ್ದು, 30 ಅಡಿ ಅಗಲದ ರಸ್ತೆಯನ್ನು ಹೊಂದಿರುವುದರಿಂದ ಸಂಚಾರವ್ಯವಸ್ಥೆಗೆ ಅಡಚಣೆಯಾಗುವುದರಿಂದ ಆಟೋಮೋಬೈಲ್ ಸರ್ವೀಸ್ ಇಂಡಸ್ಟ್ರೀಸ್ ಸ್ಥಾಪಿಸಲು ಅನುಮತಿ ನೀಡಬಾರದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 5.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾದಿಕಾರದ ವ್ಯಾಪ್ತಿಯಲ್ಲಿ ಸ್ವಾಗತ ಕಮಾನುಗಳನ್ನು ನಿರ್ಮಾಣ ಮಾಡುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬೇರೆ ಪ್ರದೇಶಗಳಿಂದ ನಗರಕ್ಕೆ ಪ್ರವಾಸ ಮಾಡುವ ಸ್ಥಳಗಳಲ್ಲಿ ಸ್ವಾಗತ ಕಮಾನುಗಳನ್ನು ನಿರ್ಮಾಣ ಮಾಡುವ ಕುರಿತು ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬೇರೆ ಪ್ರದೇಶಗಳಿಂದ ನಗರಕ್ಕೆ ಪ್ರವಾಸ ಮಾಡುವ ಸ್ಥಳಗಳಲ್ಲಿ ಸ್ವಾಗತ ಕಮಾನುಗಳನ್ನು ನಿರ್ಮಾಣ ಮಾಡಲು ಮಾನ್ಯ ಜಿಲ್ಲಾಧಿಕಾರಿಗಳವರು ಸೂಚಿಸಿದರು, ಆದರಂತೆ ಸಭೆಯು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿತು.

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಣ್ಣ ಮತ್ತು ದೊಡ್ಡ ಕೆರೆಗಳನ್ನು ಗುರ್ತಿಸಿ ಅವುಗಳ ರಕ್ಷಣೆ ಮತ್ತು ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳಲು ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದರು. ಈ ವಿಷಯವನ್ನು ಚರ್ಚಿಸಲಾಗಿ ಸೂಕ್ತ ಯೋಜನಾ ವರದಿಗಳನ್ನು ತಯಾರಿಸಿ ಕೆರೆ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಲ್ಲಿಸಿ ಆರ್ಥಿಕ ಸಹಾಯವನ್ನು ಪಡೆದು ಯೋಜನೆಗಳನ್ನು ಅನುಷ್ಠಾನಗೊಳಿಸಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಜಾಹಿರಾತು ಫಲಕಗಳನ್ನು ಅಥವಾ ಗೋಡೆ ಬರಹಗಳನ್ನು ಮಾಡಿದಲ್ಲಿ ಅಂಥವರಿಂದ ತೆರಿಗೆ ವಸೂಲಿ ಮಾಡಲು ಮಾನ್ಯ ಜಿಲ್ಲಾಧಿಕಾರಿಗಳು ಸೂಚಿಸಿದಾಗ ಸಭೆಯು ಈ ಬಗ್ಗೆ ಕ್ರಮಕೈಗೊಳ್ಳಲು ಸರ್ವಾನುಮತದಿಂದ ಒಪ್ಪಿಗೆ ಸೂಚಿಸಿದೆ.

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಚಿಕ್ಕಮಗಳೂರು ನಗರದ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ನಾಲ್ಕು ದಿಕ್ಕಿನಲ್ಲಿ ಕನಿಷ್ಠ 500 ಎಕರೆ ಭೂಮಿಯನ್ನು ಸ್ವಾದೀನ ಪಡಿಸಿಕೊಂಡು ಲೇಔಟ್ ನಿರ್ಮಾಣ ಮಾಡಿದಲ್ಲಿ ಜನಸಾಂದ್ರತೆ ಹೆಚ್ಚಿರುವ ನಗರ ಪ್ರದೇಶದ ಸಾರ್ವಜನಿಕರಿಗೆ ಹಾಗೂ ಬೇರೆ ಊರುಗಳಿಂದ ಬಂದು ವಾಸಿಸಲು ಬಯಸುವವರಿಗೆ ಹೆಚ್ಚು ಅನುಕೂಲವಾಗುತ್ತದೆ ಮತ್ತು ಉತ್ತಮ ನಾಗರೀಕ ಸೌಲಭ್ಯಗಳ ನಗರವಾಗಿ ಬೆಳೆಯಲು ಅನುಕೂಲವಾಗುತ್ತದೆಂದು ಮಾನ್ಯ ಜಿಲ್ಲಾಧಿಕಾರಿಗಳು ತಿಳಿಸಿದರು ಸಭೆಯು ಸರ್ವಾನುಮತದಿಂದ ಇದಕ್ಕೆ ಒಪ್ಪಿಗೆ ಸೂಚಿಸಲಾಯಿತು ಹಾಗೂ ಸೂಕ್ತ ಸ್ಥಳವನ್ನು ನೋಡಿ ಪರಿಶೀಲಿಸಿ ಮುಂದಿನ ಸಭೆಗೆ ಮಂಡಿಸಲು ತೀರ್ಮಾನಿಸಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 15-01-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು.**

| | | |
|---|---|---|
| 1 | ಶ್ರೀ ಸಿ. ಎಸ್. ರಂಗನಾಥ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಶ್ರೀ ಜಿ. ಲೋಕೇಶ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 3 | ಶ್ರೀ ಮದು ಕುಮಾರ್‌ರಾಜ್ ಅರಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 4 | ಶ್ರೀಮತಿ ವೀಣಾ ಶೆಟ್ಟಿ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಶ್ರೀ ರಾಜು<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಶ್ರೀ ಶ್ರೀನಿವಾಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 7 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 8 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. | ಸದಸ್ಯರು |
| 9 | ಸಹಾಯಕ ನಿರ್ದೇಶಕರು,<br>ನಗರ ಯೋಜನಾ ಇಲಾಖೆ, ಚಿಕ್ಕಮಗಳೂರು. (ಪ್ರತಿನಿಧಿ ಹಾಜರಿದ್ದರು) | ನಗರ ಯೋಜನಾ ಸದಸ್ಯರು |
| 10 | ಕಾರ್ಯಪಾಲಕ ಇಂಜಿನಿಯರ್,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. (ಪ್ರತಿನಿಧಿ ಹಾಜರಿದ್ದರು) | ಇಂಜಿನಿಯರ್ ಸದಸ್ಯರು |
| 11 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ,<br>ಹಾಸನ (ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 12 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |
| 13 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 14 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು.(ಪ್ರತಿನಿದಿ ಹಾಜರಿದ್ದರು) | ಸದಸ್ಯರು |
| 15 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. (ಪ್ರತಿನಿದಿ ಹಾಜರಿದ್ದರು) | ಸದಸ್ಯರು |

## ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.

| | | |
|---|---|---|
| 1 | ಮಾನ್ಯ ಶ್ರೀ. ಡಿ. ಎಂ. ಪುಟ್ಟೇಗೌಡ,<br>ವಿಧಾನ ಪರಿಷತ್ ಸದಸ್ಯರು, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 3 | ಸೈಂಟಿಫಿಕ್ ಆಫೀಸರ್,<br>ಪ್ರಕೃತಿ ಮತ್ತು ಪರಿಸರ ಇಲಾಖೆ, ಬೆಂಗಳೂರು. | ಸದಸ್ಯರು |
| 4 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

**ವಿಷಯ ನಂ 1.**

ದಿನಾಂಕ: 05-12-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ:**

ದಿನಾಂಕ: 05-12-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದು.

**ತೀರ್ಮಾನ :**

ದಿನಾಂಕ: 05-12-2008 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 2.**

2008 ನೇ ಸಾಲಿನ ನವೆಂಬರ್ ಮತ್ತು ಡಿಸೆಂಬರ್ ಮಾಹೆಗಳ ಆದಾಯ ಮತ್ತು ವೆಚ್ಚದ ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

**ಟಿಪ್ಪಣಿ:**

ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ (1) ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದಾಗಿದ್ದು ಸಭೆಗೆ ಮಂಡಿಸಿದೆ.

**ತೀರ್ಮಾನ :**

2008 ನೇ ಸಾಲಿನ ನವೆಂಬರ್ ಮತ್ತು ಡಿಸೆಂಬರ್ ಮಾಹೆಗಳ ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ (1) ಮತು (2) ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ತೇಗೂರು ಗ್ರಾಮದ ಸರ್ವೆ ನಂ. 110, 111, 112, 113, 115, 118, 132 ಮತ್ತಿತರೆ ಸರ್ವೆ ನಂಬರುಗಳಲ್ಲಿ 110 ಎಕರೆ ಜಮೀನು ಭೂಸ್ವಾಧೀನ ಪಡಿಸಿಕೊಳ್ಳುವ ಕುರಿತು ದಿನಾಂಕ: 29-12-2008 ರಂದು ರೈತರ ಹಾಗೂ ಭೂಮಾಲೀಕರ ಸಭೆ ಕರೆದು ಚರ್ಚೆ ನಡೆಸಿದ ಕುರಿತು. ವಿಷಯ ಪರಿಶೀಲನೆ ಮಾಡುವುದಕ್ಕಾಗಿ ಸಭೆಯ ಅನುಮೋದನೆ ಕೋರುವ ಬಗ್ಗೆ.

**ಟಿಪ್ಪಣಿ :**

ತೇಗೂರು ಗ್ರಾಮದ ಸರ್ವೆ ನಂ. 110, 111, 112, 113, 115, 118, 132 ಮತ್ತಿತರೆ ಸರ್ವೆ ನಂಬರುಗಳಲ್ಲಿ 110 ಎಕರೆ ಜಮೀನು ಭೂಸ್ವಾಧೀನ ಪಡಿಸಿಕೊಂಡು ವಸತಿ ಯೋಜನೆ ಅಭಿವೃದ್ಧಿ ಪಡಿಸುವ ಸಲುವಾಗಿ ದಿನಾಂಕ: 29-12-2008 ರಂದು ತೇಗೂರು ಗ್ರಾಮದ ರೈತರ ಹಾಗೂ ಭೂಮಾಲೀಕರ ಸಭೆ ಕರೆದು ಅವರೊಂದಿಗೆ ಖರೀದಿಗೆ ದರ ನಿಗದಿ ಬಗ್ಗೆ ಚರ್ಚಿಸಲಾಗಿ, ಸಭೆಯಲ್ಲಿ ಭಾಗವಹಿಸಿದ್ದ ರೈತರ ಪರವಾಗಿ ಹಲವು ಮುಖ್ಯಸ್ಥರು ಮಾತನಾಡಿ ನೂರಾರು ವರ್ಷಗಳಿಂದ ವ್ಯವಸಾಯಕ್ಕಾಗಿ ಹಾಗೂ ಗೋವುಗಳ ಮೇವಿಗಾಗಿ ಉಳಿಸಿಕೊಂಡಿರುವ ಜಮೀನನ್ನು ಪ್ರಾಧಿಕಾರದ ಯೋಜನೆಯಿಂದ ಕೈಬಿಟ್ಟು ಉಳಿಸಿಕೊಡಲು ಮನವಿ ಮಾಡಿರುತ್ತಾರೆ. ಭೂಮಿಯ ಬೆಲೆ ನಿಗದಿ ಬಗ್ಗೆ ಯಾರು ಮಾತನಾಡಲು ಒಪ್ಪಲಿಲ್ಲ ಸದರಿ ವಿಷಯವನ್ನು ಮುಂದಿನ ಸಭೆಯಲ್ಲಿ ಹಾಗೂ ಜಿಲ್ಲಾಧಿಕಾರಿಗಳ ಬಳಿ ಚರ್ಚಿಸಿ ಪರಿಶೀಲಿಸಲಾಗುವುದೆಂದು ಅಧ್ಯಕ್ಷತೆ ವಹಿಸಿದ್ದ ಪ್ರಾಧಿಕಾರದ ಅಧ್ಯಕ್ಷರು ತಿಳಿಸಿರುತ್ತಾರೆ. ಅದರಂತೆ ಸಭೆಯು ಪರಿಶೀಲಿಸಿ ಚರ್ಚಿಸಲು ಹಾಗೂ ನಿರ್ಣಯಕ್ಕಾಗಿ ವಿಷಯ ಮಂಡಿಸಿದೆ.

**ತೀರ್ಮಾನ :**

ತೇಗೂರು ಗ್ರಾಮದ ಸರ್ವೆ ನಂ. 110, 111, 112, 113, 115, 118, 132 ಮತ್ತಿತರೆ ಸರ್ವೆ ನಂಬರುಗಳಲ್ಲಿ 110 ಎಕರೆ ಜಮೀನು ಭೂಸ್ವಾಧೀನ ಪಡಿಸಿಕೊಳ್ಳುವ ಕುರಿತು ದಿನಾಂಕ: 29-12-2008 ರಂದು ರೈತರ ಹಾಗೂ ಭೂ ಮಾಲೀಕರ ಸಭೆ ಕರೆದು ಚರ್ಚೆ ನಡೆಸಿದ ವಿಷಯದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ನಂತರ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಅಧ್ಯಕ್ಷರು ಮಾತನಾಡಿ ಇತ್ತೀಚೆಗೆ ಸರ್ಕಾರದ ಆದೇಶದಂತೆ ಭೂ ಮಾಲೀಕರ ಪಾಲುದಾರಿಕೆಯಲ್ಲಿ ನಿವೇಶನ ನಿರ್ಮಾಣ ಮಾಡುವ ಬಗ್ಗೆ ರೈತರು ಆಸಕ್ತಿ ತೋರಿಸಿದಲ್ಲಿ ಅದನ್ನು ಜಾರಿಗೊಳಿಸಬಹುದೆಂದು ರೈತರು ಸ್ವಪ್ರೇರಣೆಯಿಂದ ಭೂಸ್ವಾಧೀನದ ಬಗ್ಗೆ ಆಸಕ್ತಿ ತೋರಿಸಿದರೆ ಅವರಿಗೆ ಆದಷ್ಟು ಗರಿಷ್ಠ ಮೊತ್ತದ ಪರಿಹಾರ ನೀಡಲು ಇಲ್ಲವಾದಲ್ಲಿ ಕಾನೂನು ರೀತಿಯಲ್ಲಿ ಉಪವಿಭಾಗಾಧಿಕಾರಿಗಳವರ ಮೂಲಕ ಭೂಸ್ವಾದೀನ ಪಡಿಸಿಕೊಳ್ಳಬಹುದೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ನಂ 4.**

ಚಿಕ್ಕಮಗಳೂರು ತಾಲ್ಲೂಕು ರಾಮನಹಳ್ಳಿ ಗ್ರಾಮದ ಸರ್ವೆ ನಂ. 155, 156, 157 ಮತ್ತು 158 ರಲ್ಲಿನ 6 ಎಕರೆ 02 ಗುಂಟೆ ಜಮೀನನ್ನು ಸಂಬಂಧ ಪಟ್ಟ ಮಾಲೀಕರಿಂದ ಖರೀದಿ ಮಾಡುವ ಬಗ್ಗೆ ಸಭೆ ಅನುಮೋದನೆ ಕೋರಿ.

**ಟಿಪ್ಪಣಿ :**

ಚಿಕ್ಕಮಗಳೂರು ತಾಲ್ಲೂಕು ರಾಮನಹಳ್ಳಿ ಗ್ರಾಮದ ಸರ್ವೆ ನಂ. 155, 156, 157 ಮತ್ತು 158 ರಲ್ಲಿನ 6 ಎಕರೆ 02 ಗುಂಟೆ ಜಮೀನನ್ನು ವಸತಿ ಯೋಜನೆ ಅಭಿವೃದ್ಧಿ ಪಡಿಸುವ ಸಲುವಾಗಿ ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ನಡೆದಿದ್ದು, ಈ ಭೂಮಿಗೆ ಸಂಬಂಧಿಸಿದಂತೆ ದಿನಾಂಕ: 06-01-2004 ರಂದು ಪರಸ್ಪರ ಒಪ್ಪಂದ ಆಗಿ ಸಹಿ ಆಗಿರುತ್ತದೆ. ರೂ. 9.00 ಕ್ಕೆ ಒಂದು ಚದುರ ಅಡಿ ಭೂಮಿ ನೀಡಲು ಒಪ್ಪಿಗೆ ಆಗಿದ್ದು, 5 ವರ್ಷಗಳಾಗಿರುವುದರಿಂದ ಭೂಮಿಯನ್ನು ಈಗಿನ ಮಾರುಕಟ್ಟೆ ಬೆಲೆಗೆ ಆದರೆ ನೀಡುವುದಾಗಿ ಮಾಲೀಕರು ಆಕ್ಷೇಪಣಾ ಪತ್ರ ನೀಡಿರುತ್ತಾರೆ.

ಉಪ ವಿಭಾಗಾಧಿಕಾರಿಗಳು ಸಹ ಪರಿವರ್ತಿತ ಭೂಮಿಯ ಬೆಲೆ ರೂ. 80.00 ಒಂದು ಚದುರ ಅಡಿಗೆ ಇರುವುದರಿಂದ ಅಷ್ಟು ಬೆಲೆ ನೀಡುವ ಬಗ್ಗೆ ಪ್ರಾಧಿಕಾರದ ಅಭಿಪ್ರಾಯ ಕೇಳಿರುತ್ತಾರೆ. ಪ್ರಾಧಿಕಾರದ ಅಧ್ಯಕ್ಷರು ಭೂ ಮಾಲೀಕರನ್ನು ಕಛೇರಿಗೆ ಆಹ್ವಾನಿಸಿ ಚರ್ಚಿಸಿದ್ದು, ಚದರ ಅಡಿಗೆ ರೂ. 50.00 ರಂತೆ ಒಂದು ಎಕರೆಗೆ ಕನಿಷ್ಟ ರೂ. 20.00 ಲಕ್ಷ (ಇಪ್ಪತ್ತು ಲಕ್ಷ ರುಪಾಯಿ) ಗಳನ್ನು ನೀಡಿದಲ್ಲಿ ಒಪ್ಪುವುದಾಗಿ ಮಾಲೀಕರು ತಿಳಿಸಿದ್ದು, ಸದರಿ ವಿಷಯವನ್ನು ಸಭೆಗೆ ಮಂಡಿಸಿ ನಿರ್ಣಯ ಕೈಗೊಳ್ಳಬೇಕಾಗಿರುತ್ತದೆ.

**ತೀರ್ಮಾನ :**

ಚಿಕ್ಕಮಗಳೂರು ತಾಲ್ಲೂಕು ರಾಮನಹಳ್ಳಿ ಗ್ರಾಮದ ಸರ್ವೆ ನಂ. 155, 156, 157 ಮತ್ತು 158 ರಲ್ಲಿನ 6 ಎಕರೆ 02 ಗುಂಟೆ ಜಮೀನನ್ನು ಸಂಬಂದಪಟ್ಟ ಭೂಮಾಲೀಕರಿಂದ ಖರೀದಿ ಮಾಡುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು, ಇತ್ತೀಚಿಗೆ ಜಮೀನಿನ ಬೆಲೆ ಅಧಿಕವಾಗಿರುವುದರಿಂದ ಹಾಗೂ ಐದು ವರ್ಷಗಳ ಹಿಂದೆ ನಿಗದಿಗೊಳಿಸಿದ್ದ ಜಮೀನಿನ ಬೆಲೆ ತುಂಬಾ ಕಡಿಮೆ ಇದ್ದುದರಿಂದ ಉಪ ವಿಭಾಗಾದಿಕಾರಿಗಳವರೂ ಸಹ ಜಮೀನಿನ ಬೆಲೆ ಇತ್ತೀಚಿಗೆ ಹೆಚ್ಚಾಗಿದ್ದು ಚದರ ಅಡಿಗೆ ರೂ. 50.00 ರಿಂದ ರೂ. 200.00 ರ ವರೆಗೆ ಇರುವುದಾಗಿ ತಿಳಿಸಿರುತ್ತಾರೆ. ಸದರಿ ಭೂಮಿಯ ತರೀಕೆರೆ – ಬಿಳೀಕೆರೆ ಮುಖ್ಯರಸ್ತೆಯಿಂದ ಆಕರ್ಷಕ ಪ್ರದೇಶದಲ್ಲಿದ್ದು, ನಿವೇಶನಗಳಿಗೆ ಹೆಚ್ಚು ಬೇಡಿಕೆ ಬರುವ ಸಾಧ್ಯತೆ ಇದೆ. ಆದ್ದರಿಂದ, ಚದರ ಅಡಿಗೆ ರೂ. 50.00 ರಂತೆ ಒಂದು ಎಕರೆಗೆ ಕನಿಷ್ಟ ರೂ. 20.00 ಲಕ್ಷ ರೂಗಳನ್ನು ಪರಿಹಾರ ಬೆಲೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 5.**

ಹಿರೇಮಗಳೂರು ಗ್ರಾಮದ ಕೆರೆ ಅಭಿವೃದ್ಧಿ ಪಡಿಸುವ ಸಲುವಾಗಿ ಕೆರೆ ಪಕ್ಕದಲ್ಲಿನ 8 ಎಕರೆ ಜಮೀನು ಭೂಸ್ವಾಧೀನ ಪಡಿಸಿಕೊಳ್ಳುವ ಬಗ್ಗೆ ಸಭೆ ಅನುಮೋದನೆ ಕೋರಿ.

**ಟಿಪ್ಪಣಿ :**

ಹಿರೇಮಗಳೂರು ಗ್ರಾಮದ ಕೆರೆ ಬಳಿ ವಾಟರ್‌ಪಾರ್ಕ್ ಮತ್ತು ಬೋಟಿಂಗ್ ವಿಹಾರಧಾಮ ನಿರ್ಮಾಣ ಮಾಡಲು ದಿನಾಂಕ: 05-12-2008 ರ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದ್ದು, ಆ ಕಾರ್ಯಗಳಿಗಾಗಿ ಕೆರೆ ಪಕ್ಕದಲ್ಲಿನ 8 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಸಲುವಾಗಿ ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

ಹಿರೇಮಗಳೂರು ಬೈ–ಪಾಸ್ ರಸ್ತೆಯಿಂದ ಹಿರೇಮಗಳೂರು ಕೆರೆಯವರೆಗೂ ವಿಸ್ತರಿಸಿರುವ ಸರ್ವೆ ನಂ. 374, 375, 376, 377 ಮತ್ತು 4 ರಲ್ಲಿನ ಒಟ್ಟು 8 ಎಕರೆ ಭೂಮಿಯನ್ನು ಕೆರೆ ಅಭಿವೃದ್ಧಿ ವಾಟರ್ ಪಾರ್ಕ್ ನಿರ್ಮಾಣಕ್ಕೆ ಭೂ ಸ್ವಾಧೀನ ಪರಿಗಣಿಸಲು ಮಾನ್ಯ ಅಧ್ಯಕ್ಷರು ಸೂಚಿಸಿದ್ದು, ಈ ಭೂಮಿ ಈಗಾಗಲೇ ಲೇಔಟ್ ನಿರ್ಮಾಣ ಮಾಡಲು ಸ್ವಾಧೀನ ಪಡಿಸುವಂತೆ ದಿನಾಂಕ: 05-12-2008 ರ ಸಭೆಯಲ್ಲಿ ನಿರ್ಣಯ ಆಗಿರುತ್ತದೆ. ವಿಷಯದ ಬಗ್ಗೆ ಚರ್ಚೆಗೆ ಹಾಗೂ ಅನುಮೋದನೆಗೆ ಮಂಡಿಸಿದೆ.

**ತೀರ್ಮಾನ :**

ಹಿರೇಮಗಳೂರು ಗ್ರಾಮದ ಕೆರೆ ಬಳಿ ವಾಟರ್‌ಪಾರ್ಕ್ ಮತ್ತು ಬೋಟಿಂಗ್ ವಿಹಾರಧಾಮ ನಿರ್ಮಾಣ ಮಾಡುವ ಸಲುವಾಗಿ ಕೆರೆ ಪಕ್ಕದಲ್ಲಿನ 8 ಎಕರೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳುವ ಕುರಿತು ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು, ವಾಟರ್ ಪಾರ್ಕಿಂಗ್ ಹಾಗೂ ಬೋಟಿಂಗ್ ವಿಹಾರಧಾಮ ನಿರ್ಮಾಣದ ಬಗ್ಗೆ 4.80 ಕೋಟಿ ರೂಗಳಿಗೆ ಅಂದಾಜು ತಯಾರಿಸಲಾಗುತ್ತಿದ್ದು ಸದರೀ ಯೋಜನೆಗೆ ಸರ್ಕಾರವು ಕೆರೆ ಅಭಿವೃದ್ದಿ ಪ್ರಾಧಿಕಾರದ ಅನುದಾನ ಪಡೆಯಲು ಹಾಗೂ ಸಂಬಂದಪಟ್ಟ ಇಲಾಖೆಯಿಂದ ಕೆರೆಯನ್ನು ಪ್ರಾಧಿಕಾರಕ್ಕೆ ವಹಿಸಿಕೊಳ್ಳಲು ಪತ್ರ ವ್ಯವಹಾರ ನಡೆಸಲು ಸಹ ಸಭೆಯಲ್ಲಿ ನಿರ್ದರಿಸಲಾಯಿತು ಹಾಗೆಯೇ ಕೆರೆಯ ಪಕ್ಕದಲ್ಲಿನ 8 ಎಕರೆ ಭೂಮಿಯನ್ನು ಅಭಿವೃದ್ದಿ ಪಡಿಸಲು ಅನುಕೂಲವಾಗುವಂತೆ ಸರ್ವೆ ನಂ. 374, 375, 376, 377 ಮತ್ತು 4 ರಲ್ಲಿನ ಒಟ್ಟು 8 ಎಕರೆ ಭೂಮಿಯನ್ನು ಭೂಸ್ವಾದೀನ ಪಡಿಸಿಕೊಳ್ಳಲು ಸಭೆಯಲ್ಲಿ, ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 6.**

ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆ ಮಾಡುವ ಕುರಿತು ವಿವಿಧ ಸಂಘ ಸಂಸ್ಥೆಗಳ ಮನವಿಗಳನ್ನು ಪರಿಶೀಲಿಸಿ ಹಂಚಿಕೆ ಮಾಡಲು ಸಭೆ ಅನುಮೋದನೆ ಕೋರಿ.

**ಟಿಪ್ಪಣಿ :**

ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನಗಳನ್ನು ವಿವಿಧ ಸಂಘ ಸಂಸ್ಥೆಗಳಿಗೆ ಹಾಗೂ ಸರ್ಕಾರಿ ಕಛೇರಿಗಳಿಗೆ ಹಂಚಿಕೆ ಮಾಡುವ ಬಗ್ಗೆ ದಿನಾಂಕ: 10-12-2008 ರಲ್ಲಿ ಪತ್ರಿಕಾ ಪ್ರಕರಣೆ ಹೊರಡಿಸಿದ್ದು, ಅದರಂತೆ 1) ಮೇ|| ಸಾಯಿಏಂಜಲ್ ವಿದ್ಯಾಸಂಸ್ಥೆ (Education Society) ಚಿಕ್ಕಮಗಳೂರು ರವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 57 / 1 ಮತ್ತು 57 / 2 ರಲ್ಲಿನ 14525.00 ಚದುರ ಅಡಿ ನಿವೇಶನವನ್ನು ವಿದ್ಯಾ ಸಂಸ್ಥೆ ಕಟ್ಟಡ ಕಟ್ಟಲು, 2) ಮೇ|| ಸರ್ವೋದಯ ವೃತ್ತಿ ಶಿಕ್ಷಣ ಸೊಸೈಟಿ (ರಿ) ಚಿಕ್ಕಮಗಳೂರು ರವರು ಹಿರೆಮಗಳೂರು ವಸತಿ ಬಡಾವಣೆಯ ನಿವೇಶನ ನಂ. 10 ರಲ್ಲಿನ 780.16 ಚ. ಮೀ. ನಿವೇಶನವನ್ನು ವಿದ್ಯಾಸಂಸ್ಥೆ ಹಾಗೂ ಹಾಸ್ಟಲ್ ನಿರ್ಮಾಣಕ್ಕಾಗಿ, 3) ಮೇ|| ಪತಂಜಲಿ ಯೋಗ ಶಿಕ್ಷಣ ಸಂಸ್ಥೆ ಚಿಕ್ಕಮಗಳೂರು ರವರು ಹಿರೇಮಗಳೂರು ವಸತಿ ಬಡಾವಣೆಯ ನಿವೇಶನ ಸಂಖ್ಯೆ. 503 ರಲ್ಲಿನ 1393.90 ಚ. ಮೀ. ಅಳತೆಯ ನಿವೇಶನವನ್ನು ಯೋಗಶಾಲೆ ಕಟ್ಟಡ ನಿರ್ಮಿಸಲು ಮತ್ತು 4) ಮೇ|| ರಂಗಾರಾಂ ವಿದ್ಯಾ ಸಂಸ್ಥೆ (ರಿ) ಬಿಳಿಕಲ್ಲು ರವರು ಪ್ರೌಢಶಾಲೆ ನಿರ್ಮಾಣಕ್ಕಾಗಿ ಹಿರೇಮಗಳೂರು ವಸತಿ ಬಡಾವಣೆಯ 4 ನೇ ಹಂತದಲ್ಲಿನ 446.00 ಚ. ಮೀ. ಅಳತೆ ನಿವೇಶನವನ್ನು ನೀಡಲು ಪುನಃ ಮನವಿ ಸಲ್ಲಿಸಿರುತ್ತಾರೆ. 5) ಶ್ರೀ ವಿನಾಯಕ ವೆಲ್‌ಫೇರ್ ಟ್ರಸ್ಟ್ ಕಲ್ಯಾಣನಗರ ಚಿಕ್ಕಮಗಳೂರು ರವರು ಹಿರೇಮಗಳೂರು ವಸತಿ ಬಡಾವಣೆಯ 3 ನೇ ಹಂತದಲ್ಲಿ ಒಟ್ಟು 278.71 ಚದರ ಮೀಟರ್ ವಿಸ್ತೀರ್ಣದ ನಾಗರೀಕ ಸೌಕರ್ಯದ ನಿವೇಶನ ಕೋರಿ ಅರ್ಜಿ ಸಲ್ಲಿಸಿದ್ದು ಶೇಕಡ 10 ರ ನಿವೇಶನ ಮೊತ್ತವನ್ನು ಪಾವತಿಸಿರುತ್ತಾರೆ. 6) ಶ್ರೀ ಶನಿದೇವರ ಶ್ರೀಶಕ್ತಿ ಸಂಘ ಗೌರಿ ಕಾಲುವೆ ಚಿಕ್ಕಮಗಳೂರು ರವರು ನಾಗರೀಕ ಸೌಕರ್ಯದ ನಿವೇಶನ ಕೋರಿ ದಿನಾಂಕ: 30-12-2008 ರಲ್ಲಿ ಮನವಿ ಸಲ್ಲಿಸಿರುತ್ತಾರೆ. ಹಾಗೂ ಸದರಿ ಕ್ರಮ ಸಂಖ್ಯೆ 1 ರಿಂದ 5 ರವರೆಗಿನ ಐದು ಸಂಸ್ಥೆಯವರು ನಿವೇಶನ ಹಂಚಿಕೆಗಾಗಿ ಜಾಹಿರಾತಿನಲ್ಲಿ ತಿಳಿಸಿದಂತೆ ನೋಂದಣಿ ಶುಲ್ಕ ಹಾಗೂ ಶೇಕಡ 10 ನಿವೇಶನದ ಶುಲ್ಕ ಇತ್ಯಾದಿ ಪಾವತಿಸಿ ಅರ್ಜಿ ಸಲ್ಲಿಸಿರುತ್ತಾರೆ. ಆದ್ದರಿಂದ ಸಂಬಂದಪಟ್ಟ ಸಂಸ್ಥೆಗಳಿಗೆ ನಾಗರೀಕ ಸೌಕರ್ಯದ ನಿವೇಶನ ಹಂಚಿಕೆ ಮಾಡಲು ಸಭೆಯ ಮುಂದೆ ವಿಷಯವನ್ನು ಮಂಡಿಸಿದೆ.

**ತೀರ್ಮಾನ :**

ಪ್ರಾಧಿಕಾರದಲ್ಲಿ ಲಭ್ಯವಿರುವ ನಾಗರೀಕ ಸೌಲಭ್ಯದ ನಿವೇಶನಗಳನ್ನು ಹಂಚಿಕೆಗಾಗಿ ವಿವಿಧ ಸಂಘ ಸಂಸ್ಥೆಗಳಿಂದ ನಿವೇಶನ ಕೋರಿ ಮನವಿಗಳು ಬಂದಿದ್ದು ವಿವರಗಳನ್ನು ಈ ಕೆಳಕಂಡಂತೆ ಚರ್ಚಿಸಿ ಠೇವಣಿ ಹಣ ಪಾವತಿಸಿರುವ ಈ ಕೆಳಕಂಡ ಎಲ್ಲಾ ಸಂಘ ಸಂಸ್ಥೆಗಳಿಗೆ ಲೀಸ್ ಡೀಡ್ ಮಾಡಿಕೊಡಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಈ ಸಂದರ್ಭದಲ್ಲಿ ನಗರಯೋಜನಾ ಸದಸ್ಯರು ಹಾಜರಿದ್ದು ವಿದ್ಯಾ ಸಂಸ್ಥೆಗೆ ನಿವೇಶನ ಎಂದು ಹಂಚಿಕೆ ಮಾಡಬಹುದು ಕಟ್ಟಡ ಅನುಮತಿ ಸಂದರ್ಭದಲ್ಲಿ ನಿಯಮಾವಳಿಗಳಂತೆ ಪ್ರಾಥಮಿಕ / ಪ್ರೌಢಶಾಲೆ / ಕಾಲೇಜು ಸ್ಥಾಪನೆ ಕಟ್ಟಡ ನಿರ್ಮಾಣಕ್ಕೆ ಅನ್ವಯಿಸುವ ನಿಯಮಾವಳಿಗಳಂತೆ ಅನುಮತಿ ಪಡೆಯಬೇಕೆಂಬ ಷರತ್ತು ವಿಧಿಸಿ ನೀಡಬೇಕೆಂದು ತಿಳಿಸಿದರು.

1) ರಂಗಾರಾಂ ವಿದ್ಯಾಸಂಸ್ಥೆ ಇವರು ಪ್ರಾಧಿಕಾರದ ವಸತಿ ಬಡಾವಣೆಯಲ್ಲಿನ 446.00 ಚದುರ ಅಡಿ ನಿವೇಶನವನ್ನು ವಿದ್ಯಾ ಸಂಸ್ಥೆಯ ಉಪಯೋಗಕ್ಕಾಗಿ.
2) ಮೇ|| ಸಾಯಿಏಂಜಲ್ ವಿದ್ಯಾಸಂಸ್ಥೆ (Education Society) ಚಿಕ್ಕಮಗಳೂರು ರವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 57 / 1 ಮತ್ತು 57 / 2 ರಲ್ಲಿನ 14525.00 ಚದುರ ಅಡಿ ನಿವೇಶನವನ್ನು ವಿದ್ಯಾಸಂಸ್ಥೆಯ ಉಪಯೋಗಕ್ಕಾಗಿ.
3) ಮೇ|| ಪತಂಜಲಿ ಯೋಗ ಶಿಕ್ಷಣ ಸಂಸ್ಥೆ ಚಿಕ್ಕಮಗಳೂರು ರವರು ಹಿರೇಮಗಳೂರು ವಸತಿ ಬಡಾವಣೆಯ ನಿವೇಶನ ಸಂಖ್ಯೆ. 503 ರಲ್ಲಿನ 1393.90 ಚ. ಮೀ. ಅಳತೆಯ ನಿವೇಶನವನ್ನು ಯೋಗಶಾಲೆ ಕಟ್ಟಡ ನಿರ್ಮಿಸಲು.

4) ಮೇ॥ ಲೋಕಶಿಕ್ಷಣ ಟ್ರಸ್ಟ್ ರವರು ಹಿರೇಮಗಳೂರು ಗ್ರಾಮದ ಸರ್ವೆ ನಂ. 503 ರಲ್ಲಿನ 5000 ಚ. ಅಡಿ. ಅಳತೆಯ ನಾಗರೀಕ ಸೌಕರ್ಯದ ನಿವೇಶನವನ್ನು ಕಛೇರಿ ಕಟ್ಟಡ ನಿರ್ಮಿಸಲು.
5) ಶ್ರೀ ವಿನಾಯಕ ವೆಲ್‌ಫೇರ್ ಟ್ರಸ್ಟ್ ಕಲ್ಯಾಣನಗರ ಚಿಕ್ಕಮಗಳೂರು ರವರು ಹಿರೇಮಗಳೂರು ವಸತಿ ಬಡಾವಣೆಯ 3 ನೇ ಹಂತದಲ್ಲಿ ಒಟ್ಟು 278.71 ಚದರ ಮೀಟರ್ ವಿಸ್ತೀರ್ಣದ ನಾಗರೀಕ ಸೌಕರ್ಯದ ನಿವೇಶನವನ್ನು ಸಮುದಾಯಭವನ ಉದ್ದೇಶಕ್ಕಾಗಿ.
6) ಮೇ॥ ಸರ್ವೋದಯ ವೃತ್ತಿ ಶಿಕ್ಷಣ ಸೊಸೈಟಿ (ರಿ) ಚಿಕ್ಕಮಗಳೂರು ರವರು ಹಿರೇಮಗಳೂರು ವಸತಿ ಬಡಾವಣೆಯ ನಿವೇಶನ ನಂ. 10 ರಲ್ಲಿನ 780.16 ಚ. ಮೀ. ನಿವೇಶನವನ್ನು ಹಾಸ್ಟಲ್ ನಿರ್ಮಾಣಕ್ಕಾಗಿ.

ಠೇವಣಿ ಪಾವತಿಸದ ಶ್ರೀ ಶನಿದೇವರ ಶ್ರೀಶಕ್ತಿ ಸಂಘ ಗೌರಿ ಕಾಲುವೆ ಚಿಕ್ಕಮಗಳೂರು ರವರು ನಾಗರೀಕ ಸೌಕರ್ಯದ ನಿವೇಶನಕ್ಕೆ ಠೇವಣಿ ಹಣ ಪಾವತಿಸಿದ ನಂತರ ನಿಯಮಾನುಸಾರ ಹಂಚಿಕೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ನಂ 7.**

ಪ್ರಾಧಿಕಾರದ ವ್ಯಾಪ್ತಿಯ ಹಿರೇಮಗಳೂರು ವಸತಿ ಬಡಾವಣೆಯಲ್ಲಿ ಈಗಾಗಲೇ ಹಂಚಿಕೆ ಮಾಡಿರುವ ನಿವೇಶನಗಳ ಮಾಲೀಕರುಗಳು ಹಂಚಿಕೆ ಪಡೆದು 10 ವರ್ಷಗಳು ಮುಗಿದರೂ ಮನೆ ಕಟ್ಟದೇ ನಿವೇಶನ ಮಾರಾಟ ಮಾಡಲು ನಿರಾಕ್ಷೇಪಣಾ ಪತ್ರ ಕೋರುತ್ತಿರುವ ಬಗ್ಗೆ ಕುರಿತು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ ಸಭೆಯ ಅನುಮೋದನೆ ಕೋರಿ.

**ಟಿಪ್ಪಣಿ.**

ಪ್ರಾಧಿಕಾರದ ವ್ಯಾಪ್ತಿಯ ಹಿರೇಮಗಳೂರು ವಸತಿ ಬಡಾವಣೆಯಲ್ಲಿ ಈಗಾಗಲೇ ಹಂಚಿಕೆ ಮಾಡಿರುವ ನಿವೇಶನಗಳಲ್ಲಿ ಶೇಕಡ 10 ರಿಂದ 15 ರಷ್ಟು ಜನರು ಮನೆ ನಿರ್ಮಾಣ ಮಾಡಲಾಗಿದ್ದು, ಸರ್ಕಾರಿ ಆದೇಶದಂತೆ ನಿವೇಶನಗಳನ್ನು ಹಂಚಿಕೆ ಮಾಡಿದ 5 ವರ್ಷಗಳ ಅವಧಿಯಲ್ಲಿ ಮನೆ ಕಟ್ಟಿಕೊಳ್ಳಬೇಕಾಗಿರುತ್ತದೆ. ಆದರೆ 10 ವರ್ಷಗಳ ನಂತರ ಹೆಚ್ಚು ನಿವೇಶನಗಳ ಮಾಲೀಕರು ಮನೆ ಕಟ್ಟದೆ ನಿವೇಶನ ಮಾರಾಟ ಮಾಡಲು ಎನ್‌ಓಸಿ ಕೋರಿ ಅರ್ಜಿ ಸಲ್ಲಿಸುತ್ತಿರುತ್ತಾರೆ. ಆದ್ದರಿಂದ ಅಂತಹವರುಗಳಿಗೆ ಎನ್‌ಓಸಿ ನೀಡುವ ಕುರಿತು ವಿಷಯವನ್ನು ಸಭೆ ಮುಂದೆ ಮಂಡಿಸಿದೆ.

**ತೀರ್ಮಾನ :**

ಪ್ರಾಧಿಕಾರದ ವ್ಯಾಪ್ತಿಯ ಹಿರೇಮಗಳೂರು ವಸತಿ ಬಡಾವಣೆಯಲ್ಲಿ ಈಗಾಗಲೇ ಹಂಚಿಕೆ ಮಾಡಿರುವ ನಿವೇಶನಗಳಲ್ಲಿ ಕೇವಲ ಶೇಕಡ 15 ರಷ್ಟು ಜನರು ಮನೆ ನಿರ್ಮಾಣ ಮಾಡಲಾಗಿದ್ದು, ಸರ್ಕಾರಿ ಆದೇಶದಂತೆ ನಿವೇಶನಗಳನ್ನು ಹಂಚಿಕೆ ಮಾಡಿದ 5 ವರ್ಷಗಳ ಅವಧಿಯಲ್ಲಿ ಮನೆ ಕಟ್ಟಿಕೊಳ್ಳಬೇಕಾಗಿರುತ್ತದೆ. ಆದರೆ 10 ವರ್ಷಗಳ ನಂತರ ಹೆಚ್ಚು ನಿವೇಶನಗಳ ಮಾಲೀಕರು ಮನೆ ಕಟ್ಟದೆ ನಿವೇಶನ ಮಾರಾಟ ಮಾಡಲು ನಿರಾಕ್ಷೇಪಣಾ ಪತ್ರ (ಎನ್.ಓ.ಸಿ.) ಕೋರಿ ಅರ್ಜಿ ಸಲ್ಲಿಸುತ್ತಿರುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 123 : ಬೆಂರೂಪ್ರಾ : 2005, ದಿನಾಂಕ: 14-06-2005 ರಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ನಿವೇಶನ ಹಂಚಿಕೆಗಳು 1991 ಕ್ಕೆ ತಿದ್ದುಪಡಿ ತಂದಿದ್ದು ಅದರಂತೆ ಗುತ್ತಿಗೆ ಮಾರಾಟ ಒಪ್ಪಂದವನ್ನು ಪೂರೈಸಿದ 5 ವರ್ಷಗಳೊಳಗಾಗಿ ಹಂಚಿಕೆದಾರರು ನಿವೇಶನದಲ್ಲಿ ಕಟ್ಟಡ ನಿರ್ಮಿಸಬೇಕು ಮತ್ತು ಇದನ್ನು ಬೇರೆಯವರಿಗೆ ಮಾರಾಟ ಮಾಡಲು ಅವಕಾಶವಿರುವುದಿಲ್ಲ ಮತ್ತು ಮಾರಾಟ ಮಾಡಲು ಬಯಸಿದಲ್ಲಿ ಪ್ರಾಧಿಕಾರಕ್ಕೆ ನಿವೇಶನವನ್ನು ಅಧ್ಯರ್ಪಣೆ ಮಾಡಿ ನಿವೇಶನಕ್ಕೆ ಪಾವತಿಸಿದ್ದ ಮೊತ್ತದ ಮೇಲೆ ಶೇಕಡ 12 ರಂತೆ ವಾರ್ಷಿಕ ಬಡ್ಡಿಯಂತೆ ಹಣ ಪಡೆಯಬಹುದು ಈಗ 1993 ರಿಂದ 2008 ರವರೆಗೆ ಒಟ್ಟು 1776 ನಿವೇಶನಗಳ ಪೈಕಿ ಸುಮಾರು 250 ಮನೆಗಳು ಮಾತ್ರ ನಿರ್ಮಾಣವಾಗಿದ್ದು ಉಳಿದಂತೆ ನಿವೇಶನಗಳನ್ನು ಮಾರಾಟ ಮಾಡಲು ಹಂಚಿಕೆದಾರರು ನಿರಾಕ್ಷೇಪಣಾ ಪತ್ರ ಕೇಳುತ್ತಿರುತ್ತಾರೆ, ಈ ಬಗ್ಗೆ ನಿರ್ಧಾರವಾಗಬೇಕಾಗಿರುತ್ತೆ ಎಂದು ಆಯುಕ್ತರು ಸಭೆಗೆ ವಿವರಿಸಿದರು.

ಸಭೆಯಲ್ಲಿ ಚರ್ಚೆಯಾದ ನಂತರ ಸರ್ಕಾರದ ಸುತ್ತೋಲೆ ದಿನಾಂಕದ ನಂತರ ಹಂಚಿಕೆಯಾಗಿರುವ ನಿವೇಶನದಾರರಿಗೆ ಈ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಮತ್ತು ಈ ಹಿಂದೆ ಹಾಂಚಿಕೆಯಾಗಿರುವವರಿಗೆ ನಿರಾಕ್ಷೇಪಣಾ ಪತ್ರ ನೀಡುವ ಸಂದರ್ಭದಲ್ಲಿ ನಿವೇಶನ ಖರೀದಿಸುವವರಿಂದ ಮತ್ತು ಕ್ರಯ ಪತ್ರ ಬಯಸುವವರಿಂದ ಕನಿಷ್ಟ 1 ವರ್ಷದೊಳಗೆ ಮನೆ ನಿರ್ಮಾಣ ಮಾಡುವ ಬಗ್ಗೆ ಮತ್ತು ನಿರ್ಮಾಣ ಮಾಡದಿದ್ದಲ್ಲಿ 14-06-2005 ರ ಸುತ್ತೋಲೆಯಂತೆ ನಿವೇಶನವನ್ನು ವಾಪಸ್ ಪಡೆಯುವ ಅಥವಾ ಶೇಕಡ 12 ರಷ್ಟು ವಾರ್ಷಿಕ ಬಡ್ಡಿ ವಿಧಿಸಿ ಸಮಯಾವಕಾಶ ನೀಡುವ ಷರತ್ತುಗಳೊಂದಿಗೆ ಮುಚ್ಚಳಿಕೆ ಪತ್ರ ಬರೆಸಿಕೊಂಡು ಕ್ರಮ ಕೈಗೊಳ್ಳಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 8.**

ಪೌರಾಯುಕ್ತರು ನಗರ ಸಭೆ ಚಿಕ್ಕಮಗಳೂರು ರವರು ತಮ್ಮ ಕಛೇರಿಯ ಪೌರ ಕಾರ್ಮಿಕರುಗಳಿಗೆ ಹೊಸದಾಗಿ ಮಾಡುತ್ತಿರುವ ಲೇಔಟ್‌ಗಳಲ್ಲಿ ಶೇಕಡ 18 ರಡಿಯಲ್ಲಿ ವಿತರಣೆ ಮಾಡಲು ಅಂದಾಜು 100 ನಿವೇಶನಗಳನ್ನು ಹಂತ ಹಂತವಾಗಿ ನೀಡುವಂತೆ ದಿನಾಂಕ: 18-12-2008 ರಲ್ಲಿ ಪ್ರಾಧಿಕಾರಕ್ಕೆ ಮನವಿ ಸಲಿಸಿರುವ ಕುರಿತು 6.00 x 9.00 ಮೀಟರ್ (20' x 30' ಅಡಿ) ಅಳತೆ ನಿವೇಶನಗಳನ್ನು ಮೀಸಲಿಡುವ ಕುರಿತು ಸಭೆಯ ಅನುಮೋದನೆ ಕೋರಿ.

**ಟಿಪ್ಪಣಿ :**

ಪೌರಾಯುಕ್ತರು ನಗರಸಭೆ ಚಿಕ್ಕಮಗಳೂರು ಇವರು ತಮ್ಮ ಕಛೇರಿಯ ಪೌರ ಕಾರ್ಮಿಕರುಗಳಿಗೆ ಹೊಸದಾಗಿ ಅಭಿವೃದ್ಧಿ ಪಡಿಸುತ್ತಿರುವ ಲೇಔಟ್‌ಗಳಲ್ಲಿ ಶೇಕಡ 18 ರ ಅಡಿಯಲ್ಲಿ ವಿತರಣೆ ಮಾಡಲು ಹಂತ ಹಂತವಾಗಿ ಸುಮಾರು 100 ಸಂಖ್ಯೆಯ 6.00 x 9.00 ಮೀಟರ್ (20' x 30' ಅಡಿ) ಅಳತೆ ನಿವೇಶನವನ್ನು ಮೀಸಲಿಡಬೇಕೆಂದು ಕೋರಿರುವ ಬಗ್ಗೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಪೌರಾಯುಕ್ತರು ನಗರಸಭೆ ಚಿಕ್ಕಮಗಳೂರು ರವರು ಪೌರಕಾರ್ಮಿಕರುಗಳಿಗೆ ಹೊಸದಾಗಿ ಮಾಡುತ್ತಿರುವ ಲೇಔಟ್‌ಗಳಲ್ಲಿ ಶೇ 18 ರಡಿಯಲ್ಲಿ ವಿತರಣೆ ಮಾಡಲು ಸುಮಾರು 100 ನಿವೇಶನಗಳನ್ನು ಒದಗಿಸುವಂತೆ ಕೋರಿರುವ ವಿಚಾರದಲ್ಲಿ ದೀರ್ಘವಾಗಿ ಚರ್ಚಿಸಲಾಯಿತು.

ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ನಗರ ಸಭೆಯಲ್ಲಿರುವ ಎಲ್ಲಾ ಅಧಿಕಾರಿಗಳು / ಪೌರಕಾರ್ಮಿಕರು ಮತ್ತು ನೌಕರರುಗಳಿಗೆ ಬಂದು ವಿಶೇಷ ಗೃಹ ನಿರ್ಮಾಣ ಯೋಜನೆ ಅನುಷ್ಠಾನಗೊಳಿಸಬಹುದೆಂದು ತಿಳಿಸಿದರು. ಅದರಂತೆ ಈ ಬಗ್ಗೆ ಪೌರಾಯುಕ್ತರು ಕ್ರಮವಹಿಸಿ ನಗರಸಭೆಯಿಂದ ನಿವೇಶನ ಮೌಲ್ಯ ಪಾವತಿಸಲು ಬ್ಯಾಂಕ್‌ನಿಂದ ನಿವೇಶನ / ಮನೆ ನಿರ್ಮಾಣ ಸಾಲ ಸೌಲಭ್ಯ ಒದಗಿಸಲು, ನಗರಾಭಿವೃದ್ಧಿ ಪ್ರಾಧಿಕಾರವು ನಿವೇಶನ ಮಂಜೂರಾತಿ ಮತ್ತು ಮನೆ ನಿರ್ಮಾಣ ಮಾಡುವ ಬಗ್ಗೆ ಹೀಗೆ ಫಲಾನುಭವಿ / ಬ್ಯಾಂಕ್ / ನಗರಸಭೆ / ನಗರಾಭಿವೃದ್ಧಿ ಪ್ರಾಧಿಕಾರಗಳ ಒಂದು ಒಪ್ಪಂದ ಪತ್ರ ತಯಾರಿಸಿ ಯೋಜನೆ ಕಾರ್ಯಗತಗೊಳಿಸುವಂತೆ ಪ್ರಸ್ತಾವನೆ ಸಲ್ಲಿಸಬಹುದೆಂದು ತಿಳಿಸಿದರು ವೈಯಕ್ತಿಕವಾಗಿ ನಿವೇಶನ ಹಂಚಿಕೆಯಾದಲ್ಲಿ ದುರುಪಯೋಗವಾಗುವ ಮತ್ತು ಮನೆ ನಿರ್ಮಾಣ ಆಗದೆ ಇರುವ ಸಂದರ್ಭಗಳೇ ಹೆಚ್ಚಾಗಿರುವುದರಿಂದ ಮೇಲಿನಂತೆ ಯೋಜನೆಯನ್ನು ಅನುಷ್ಠಾನಗೊಳಿಸಲು ಪರಿಗಣಿಸಬಹುದೆಂದು ತಿಳಿಸಿದರು ಸಭೆಯು ಇದಕ್ಕೆ ಸರ್ವಾನುಮತದಿಂದ ಒಪ್ಪಿಗೆ ನೀಡಿತು. (ಕ್ರಮ: ಆಯುಕ್ತರು, ನಗರಸಭೆ, ಚಿಕ್ಕಮಗಳೂರು)

**ವಿಷಯ ನಂ 9.**

ಶ್ರೀ ಸಿ. ಎಸ್. ವೆಂಕಟೇಶ್ ನಾಯ್ಡು ಬಿನ್ ಶ್ರೀನಿವಾಸ ನಾಯ್ಡು ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಬೀಕನಹಳ್ಳಿ ಗ್ರಾಮದ ಸರ್ವೆ ನಂ. 74 / 6 ಮತ್ತು 74 / 5 ರಲ್ಲಿನ 01 ಎಕರೆ – 13 ಗುಂಟೆ ಮತ್ತು ಶ್ರೀ ಬಿ. ಎ. ಬಾಲಕೃಷ್ಣ ಬಿನ್ ಅಣ್ಣಪ್ಪರಾವ್ ಚಿಕ್ಕಮಗಳೂರು ಇವರು ಬೀಕನಹಳ್ಳಿ ಗ್ರಾಮದ ಸರ್ವೆ ನಂ. 74/4 ಮತ್ತು 74/3 ರಲ್ಲಿನ 02 ಎಕರೆ– 09 ಗುಂಟೆ ವಿಸ್ತೀರ್ಣದ ಭೂಮಿಯನ್ನು ವಸತಿಗಾಗಿ ಭೂ ಪರಿವರ್ತನೆ ಕೋರಿ.

**ಟಿಪ್ಪಣಿ:**

ಶ್ರೀ ಸಿ. ಎಸ್. ವೆಂಕಟೇಶ್ ನಾಯ್ಡು ಬಿನ್ ಶ್ರೀನಿವಾಸ ನಾಯ್ಡು ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಬೀಕನಹಳ್ಳಿ ಗ್ರಾಮದ ಸರ್ವೆ ನಂ. 74 / 6 ಮತ್ತು 74 / 5 ರಲ್ಲಿನ 01 ಎಕರೆ – 13 ಗುಂಟೆ ಮತ್ತು ಶ್ರೀ ಬಿ. ಎ. ಬಾಲಕೃಷ್ಣ ಬಿನ್ ಅಣ್ಣಪ್ಪರಾವ್ ಚಿಕ್ಕಮಗಳೂರು ಇವರು ಬೀಕನಹಳ್ಳಿ ಗ್ರಾಮದ ಸರ್ವೆ ನಂ. 74/4 ಮತ್ತು 74/3 ರಲ್ಲಿನ 02 ಎಕರೆ– 09 ಗುಂಟೆ ವಿಸ್ತೀರ್ಣದ ಭೂಮಿಯನ್ನು ಪರಿಶೀಲಿಸಲಾಯಿತು. ಸದರಿ ಭೂಮಿಯನ್ನು ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಿದೆ, ಸದರಿ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರ ಕಛೇರಿಯ ಪತ್ರ ಸಂಖ್ಯೆ. ಎ2 : ಎಎಲ್ಎನ್ : 219 : 2006-07 ದಿನಾಂಕ: 22-11-2007 ರಲ್ಲಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ನೀಡಲಾಗಿದೆ. ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿ ಅಭಿಪ್ರಾಯವನ್ನು ನೀಡಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಸಿ. ಎಸ್. ವೆಂಕಟೇಶ್ ನಾಯ್ಡು ಬಿನ್ ಶ್ರೀನಿವಾಸ ನಾಯ್ಡು ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಬೀಕನಹಳ್ಳಿ ಗ್ರಾಮದ ಸರ್ವೆ ನಂ. 74 / 6 ಮತ್ತು 74 / 5 ರಲ್ಲಿನ 01 ಎಕರೆ – 13 ಗುಂಟೆ ಮತ್ತು ಶ್ರೀ ಬಿ. ಎ. ಬಾಲಕೃಷ್ಣ ಬಿನ್ ಅಣ್ಣಪ್ಪರಾವ್ ಚಿಕ್ಕಮಗಳೂರು ಇವರು ಬೀಕನಹಳ್ಳಿ ಗ್ರಾಮದ ಸರ್ವೆ ನಂ. 74/4 ಮತ್ತು 74/3 ರಲ್ಲಿನ 02 ಎಕರೆ– 09 ಗುಂಟೆ ವಿಸ್ತೀರ್ಣದ ಭೂಮಿಯನ್ನು ಪರಿಶೀಲಿಸಲಾಯಿತು. ಸದರಿ ಭೂಮಿಯನ್ನು ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಿದೆ, ಸದರಿ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರ ಕಛೇರಿಯ ಪತ್ರ ಸಂಖ್ಯೆ. ಎ2 : ಎಎಲ್ಎನ್ : 219 : 2006-07 ದಿನಾಂಕ: 22-11-2007 ರಲ್ಲಿ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆಯಾಗಿರುತ್ತದೆ, ಸದರಿ ಲೇಔಟ್ ವಿನ್ಯಾಸವನ್ನು ಅನುಮೋದನೆ ನೀಡಲು ತಾಂತ್ರಿಕ ಅಭಿಪ್ರಾಯ ನೀಡಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಶ್ರೀ ವೆಂಕಟೇಶ ನಾಯ್ಡು ಬಿನ್ ಶ್ರೀನಿವಾಸ ನಾಯ್ಡು ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಬೀಕನಹಳ್ಳಿ ಗ್ರಾಮದ ಸರ್ವೆ ನಂ. 74 / 6 ಮತ್ತು 74 / 5 ರಲ್ಲಿನ 01 ಎಕರೆ 0.13 ಗುಂಟೆ ಮತ್ತು ಶ್ರೀ ಬಿ. ಎ. ಬಾಲಕೃಷ್ಣ ಬಿನ್ ಅಣ್ಣಪ್ಪರಾವ್ ಚಿಕ್ಕಮಗಳೂರು ರವರು ಬೀಕನಹಳ್ಳಿ ಗ್ರಾಮದ ಸರ್ವೆ ನಂ. 74 / 4 ಮತ್ತು 74 / 3 ರಲ್ಲಿ 2 ಎಕರೆ 0.9 ಗುಂಟೆ ಭೂಮಿಯನ್ನು ವಸತಿಗಾಗಿ ಭೂ ಪರಿವರ್ತನೆ ಮಾಡುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು, ಸಂಬಂಧಪಟ್ಟಂತೆ ಚರ್ಚಿಸಲಾಗಿ ಲೇಔಟ್ ನಿರ್ಮಾಣ ಮಾಡುವ ಸಂದರ್ಭದಲ್ಲಿ ಪ್ರತಿಯೊಂದು ಹಂತದಲ್ಲಿಯೂ ಪ್ರಾಧಿಕಾರ ನಗರಯೋಜನಾ ಇಲಾಖೆ ಹಾಗೂ ಸಂಬಂದಿಸಿದ ಇತರೆ ಇಲಾಖೆಗಳು ಸ್ಥಳ ಪರಿಶೀಲನೆ ಮಾಡಿ ಆಗಿಂದಾಗ್ಗೆ ಗುಣಮಟ್ಟದ ಕಾಮಗಾರಿಗಳು ನಡೆಯುವ ಬಗ್ಗೆ ಮತ್ತು ಲೇಔಟ್ ವಿನ್ಯಾಸದಂತೆ ನಿಯಮಗಳನ್ನು ಪಾಲಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುವ ಷರತ್ತನ್ನು ವಿಧಿಸಿ ವಿನ್ಯಾಸ ಅನುಮೋದನೆ ನೀಡಲು ಸಭೆಯು ಒಪ್ಪಿಗೆ ನೀಡಿತು.

**ವಿಷಯ ನಂ 10.**

ಶ್ರೀಮತಿ ಭವಾರಿಬಾಯಿ ಕೊಂ ಲೇಟ್ ಲಾಲ್‌ಚಂದ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 72 / P ರಲ್ಲಿನ 20.73 x 53.96 = 1118.59 ಚ. ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀಮತಿ ಭವಾರಿಬಾಯಿ ಕೊಂ ಲೇಟ್ ಲಾಲ್‌ಚಂದ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 72 / P ರಲ್ಲಿನ 20.73 x 53.96 = 1118.59 ಚ. ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನವನ್ನು ಸರ್ವಿಸ್ ಸ್ಟೇಷನ್ (ಕೈಗಾರಿಕೆಗೆ) ಅನುಮೋದನೆ ಕೋರಿರುತ್ತಾರೆ, ಸದರಿ ಜಾಗಕ್ಕೆ ಭೂ ಪರಿವರ್ತಿತ ಮಂಜೂರಾತಿ ಆದೇಶ ನೀಡಿರುತ್ತಾರೆ, ಈ ಜಾಗವು ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಿದೆ, ಸದರಿ ಜಾಗದ ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿದ್ದು ವಸತಿ ವಲಯದಲ್ಲಿರುತ್ತದೆ. ಈ ಪ್ರಸ್ತಾವನೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 522 : ಮೈಅಪ್ರಾ : 2005, ದಿನಾಂಕ: 10-03-2006 ರನ್ವಯ ಶುಲ್ಕಗಳನ್ನು ಪಾವತಿಸಿಕೊಂಡು ಮತ್ತಿತರೆ ಷರತ್ತುಗಳಿಗೊಳಪಟ್ಟು ವಸತಿ ಏಕ ನಿವೇಶನ ಅನುಮೋದನೆ ನೀಡಲು ಸಭೆಯ ಮುಂದೆ ಮಂಡಿಸಿದೆ.

ದಿನಾಂಕ: 05-12-2008 ರ ಸಭೆಯಲ್ಲಿ ಮಂಡಿಸಿ ಸದರಿ ಜಾಗವು ವಸತಿ ಪ್ರದೇಶಗಳಲ್ಲಿದ್ದು, 30 ಅಡಿ ಅಗಲದ ರಸ್ತೆಯನ್ನು ಹೊಂದಿರುವುದರಿಂದ ಸಂಚಾರ ವ್ಯವಸ್ಥೆಗೆ ಅಡಚಣೆಯಾಗುವುದರಿಂದ ಆಟೋಮೋಬೈಲ್ ಸರ್ವೀಸ್ ಇಂಡಸ್ಟ್ರೀಸ್ ಸ್ಥಾಪಿಸಲು ಅನುಮತಿ ನೀಡಬಾರದೆಂದು ತೀರ್ಮಾನಿಸಲಾಗಿದೆ, ಅದರಂತೆ ಶ್ರೀಮತಿ ಭವರಿಬಾಯಿ ಕೊಂ ಲೇಟ್ ಲಾಲ್‌ಚಂದ್ ಇವರು ಮತ್ತೊಮ್ಮೆ ಅರ್ಜಿ ಸಲ್ಲಿಸಿ ಸದರಿ ಕಟ್ಟಡದ ಬಳಿ ವಾಹನ ಪಾರ್ಕಿಂಗ್‌ಗಾಗಿ ಹೆಚ್ಚಿನ ಜಾಗ ಬಿಡಲು ವ್ಯವಸ್ಥೆ ಮಾಡುವುದಾಗಿ ತಿಳಿಸಿದ್ದು ಅದರಂತೆ ಪುನರ್ ಪರಿಶೀಲಿಸಿ ಮಂಜೂರಾತಿ ನೀಡಲು ಕೋರಿರುತ್ತಾರೆ. ಅದರಂತೆ, ಸದರಿ ವಿಷಯವನ್ನು ಸಭೆಯ ಮುಂದೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 72 / P ರಲ್ಲಿನ 20.73 x 53.96 ಮೀ ಅಳತೆಯ ಜಾಗದಲ್ಲಿ ಆಟೋ ಮೋಬೈಲ್ ಸರ್ವಿಸ್ ಇಂಡಸ್ಟ್ರೀಸ್ ಗ್ಯಾರೇಜ್ (ವರ್ಕ್ ಶಾಪ್) ಉಪಯೋಗಕ್ಕೆ ಕೋರಿರುತ್ತಾರೆ. ಸದರಿ ಪ್ರದೇಶವು ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಲಾಗಿದ್ದು, ಹಾಗೂ ರಸ್ತೆ ಸಂಪರ್ಕ ಬಂದಿದ್ದು ಸದರಿ ಜಾಗದ ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿರುತ್ತದೆ, ಆದುದರಿಂದ ಸದರಿ ಜಾಗಕ್ಕೆ ಸುತ್ತೋಲೆಯನ್ವಯ **(ದ್ವಿಚಕ್ರ ಮತ್ತು ಸೈಕಲ್ ಸರ್ವಿಸ್ ಮತ್ತು ರಿಪೇರಿ)** ಕೈಗಾರಿಕೆಗೆ ಕ್ರಮ ವಹಿಸಬಹುದಾಗಿದ್ದು ಪಾರ್ಕಿಂಗ್ ವ್ಯವಸ್ಥೆಗೆ ಸೂಚಿಸಿ ನೀಡಬಹುದಾಗಿದೆ, ವಿಷಯವನ್ನು ಸಭೆಯ ಮುಂದೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ತೀರ್ಮಾನ :**

ಶ್ರೀಮತಿ ಭವಾರಿಬಾಯಿ ಕೊಂ ಲೇಟ್ ಲಾಲ್‌ಚಂದ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 72 / P ರಲ್ಲಿನ 20.73 x 53.96 = 1118.59 ಚ. ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನದಲ್ಲಿ ಸರ್ವಿಸ್ ಸ್ಟೇಷನ್ (ಕೈಗಾರಿಕೆ) ನಿರ್ಮಾಣಕ್ಕೆ ಅನುಮೋದನೆ ಕೋರಿರುವ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು. ನಂತರ ಮಾನ್ಯ ಜಿಲ್ಲಾಧಿಕಾರಿಗಳವರು ಮಾತನಾಡುತ್ತಾ ಸದರೀ ಜಾಗವು ವಸತಿ ಪ್ರದೇಶದಲ್ಲಿದ್ದು 30 ಅಡಿ ಅಗಲದ ರಸ್ತೆಯನ್ನು ಹೊಂದಿರುತ್ತದೆ ಕೈಗಾರಿಕೆ ನಡೆಸಲು ಅನುಮೊದನೆ ನೀಡಿದರೆ ಸಂಚಾರ ವ್ಯವಸ್ಥೆಗೆ ಅಡಚಣೆ ಉಂಟಾಗುತ್ತದೆ. ಎಂದು ತಿಳಿಸಿ ನಂತರ ಶ್ರೀಮತಿ ಭವಾರಿಭಾಯಿ ಕೊಂ ಲೇಟ್ ಲಾಲ್‌ಚಂದ್ ನಿವೇಶನ ಮಾಲೀಕರಿಂದ ಅವರ ನಿವೇಶವದಲ್ಲಿ 30 ಅಡಿಯನ್ನು ರಸ್ತೆ ವಿಸ್ತರಣೆಗಾಗಿ ಅಂದರೆ 30 ರಿಂದ 60 ಅಡಿ ರಸ್ತೆ ನಿರ್ಮಾಣ ಮಾಡಲು ಅನುಕೂಲವಾಗುವಂತೆ ಹಸ್ತಾಂತರಿಸಲು ಸಭೆಯಲ್ಲಿ ನಿರ್ಣಯಕ್ಕೈಗೊಂಡ ಹಸ್ತಾಂತರಿಸಿದ ನಂತರ ಕೈಗಾರಿಕೆ (ಸರ್ವೀಸ್ ಸ್ಟೇಷನ್ ನಿರ್ಮಾಣ) ಗೆ ಅನುಮೋದನೆ ನೀಡಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮನ ಕೈಗೊಳ್ಳಲಾಯಿತು.

**ವಿಷಯ ನಂ 11.**

ಶ್ರೀ ಪ್ರದೀಪ್ ಸಿ. ಹೆಚ್. ಬಿನ್ ಲೇಟ್ ಎ. ಜೆ. ಹನುಮಂತನಾಯ್ಡು ವಿನಾಯಕ ಬಡಾವಣೆ ಕೋಟೆ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 158 ರಲ್ಲಿನ 03 ಎಕರೆ – 05 ಗುಂಟೆ ವಿಸ್ತೀರ್ಣದ ಭೂಮಿಯನ್ನು ವಸತಿಗಾಗಿ ಭೂ ಪರಿವರ್ತನೆ ಕೋರಿ.

**ಟಿಪ್ಪಣಿ:**

ಶ್ರೀ ಪ್ರದೀಪ್ ಸಿ. ಹೆಚ್. ಬಿನ್ ಲೇಟ್ ಎ. ಜೆ. ಹನುಮಂತನಾಯ್ಡು ವಿನಾಯಕ ಬಡಾವಣೆ ಕೋಟೆ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 158 ರಲ್ಲಿನ 03 ಎಕರೆ – 05 ಗುಂಟೆ ವಿಸ್ತೀರ್ಣದ ಭೂಮಿಯನ್ನು ಪರಿಶೀಲಿಸಲಾಯಿತು. ಸದರಿ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರ ಕಛೇರಿಯ ಪತ್ರ ಸಂಖ್ಯೆ. ಎ2 : ಎಎಲ್ಎನ್ : 14 : 1997 - 98 ದಿನಾಂಕ: 10-11-1997 ರಲ್ಲಿ ವಸತಿ ಉದ್ದೇಶಕ್ಕೆ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿರುತ್ತಾರೆ.

ಸದರಿ ಪ್ರದೇಶಕ್ಕೆ ಭೂಮಿಯನ್ನು ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಿದೆ, ಈ ಪ್ರಸ್ತಾವನೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 522 : ಮೈಅಪ್ರಾ : 2005, ದಿನಾಂಕ: 10-03-2006 ರನ್ವಯ ಶುಲ್ಕಗಳನ್ನು ಪಾವತಿಸಿಕೊಂಡು ಮತ್ತಿತರೆ ಷರತ್ತುಗಳಿಗೊಳಪಟ್ಟು **ವಸತಿ ವಿನ್ಯಾಸ** ಅನುಮೋದನೆ ನೀಡಲು ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಪ್ರದೀಪ್ ಸಿ. ಹೆಚ್. ಬಿನ್ ಲೇಟ್ ಎ. ಜೆ. ಹನುಮಂತನಾಯ್ಡು ವಿನಾಯಕ ಬಡಾವಣೆ ಕೋಟೆ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 158 ರಲ್ಲಿನ 03 ಎಕರೆ – 05 ಗುಂಟೆ ವಿಸ್ತೀರ್ಣದ ಭೂಮಿಯನ್ನು ಪರಿಶೀಲಿಸಲಾಯಿತು. ಸದರಿ ಜಮೀನು ಮಹಾಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಿದ್ದು ಸದರಿ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರ ಕಛೇರಿಯ ಪತ್ರ ಸಂಖ್ಯೆ. ಎ2 : ಎಎಲ್ಎನ್ : 14 : 1997 - 98 ದಿನಾಂಕ: 10-11-1997 ರಲ್ಲಿ ವಸತಿ ಉದ್ದೇಶಕ್ಕೆ ಭೂ ಅನ್ಯಕ್ರಾಂತ ಮಂಜೂರಾತಿ ಆಗಿರುತ್ತದೆ, ಈ ಪ್ರಸ್ತಾವನೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 522 : ಮೈಅಪ್ರಾ : 2005, ದಿನಾಂಕ: 10-03-2006 ರ ಷರತ್ತಿಗೊಳಪಟ್ಟು ಹಾಗೂ ಈ ಪ್ರದೇಶಕ್ಕೆ ಸಂಬಂದಿಸಿದ ಶುಲ್ಕವನ್ನು ಪಾವತಿಸಿಕೊಂಡು **ವಸತಿ ವಿನ್ಯಾಸ** ಅನುಮೋದನೆ ನೀಡಬಹುದಾಗಿರುತ್ತದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ತೀರ್ಮಾನ :**

ಶ್ರೀ ಪ್ರದೀಪ್ ಸಿ. ಹೆಚ್. ಬಿನ್ ಲೇಟ್ ಎ. ಜೆ. ಹನುಮಂತನಾಯ್ಡು, ವಿನಾಯಕ ಬಡಾವಣೆ, ಕೋಟೆ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 158 ರಲ್ಲಿನ 03 ಎಕರೆ – 05 ಗುಂಟೆ ವಿಸ್ತೀರ್ಣದ ಭೂಮಿಯನ್ನು ವಸತಿಗಾಗಿ ಭೂ ಪರಿವರ್ತನೆ ಕೋರಿರುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಸಂಬಂದಪಟ್ಟಂತೆ ಲೇಔಟ್ ನಿರ್ಮಾಣ ಮಾಡುವ ಸಂದರ್ಭದಲ್ಲಿ ಪ್ರತಿಯೊಂದು ಹಂತದಲ್ಲಿಯೂ ಪ್ರಾಧಿಕಾರ ನಗರಯೋಜನಾ ಇಲಾಖೆ ಹಾಗೂ ಸಂಬಂದಿಸಿದ ಇತರೆ ಇಲಾಖೆಗಳು ಸ್ಥಳ ಪರಿಶೀಲನೆ ಮಾಡಿ ಆಗಿಂದಾಗೆ ಗುಣಮಟ್ಟದ ಕಾಮಗಾರಿಗಳು ನಡೆಯುವ ಬಗ್ಗೆ ಮತ್ತು ಲೇಔಟ್ ವಿನ್ಯಾಸದಂತೆ ನಿಯಮಗಳನ್ನು ಪಾಲಿಸುವ ಬಗ್ಗೆ ಕ್ರಮ ತೆಗೆದುಕೊಳ್ಳುವ ಷರತ್ತನ್ನು ವಿಧಿಸಿ ವಿನ್ಯಾಸ ಅನುಮೋದನೆ ನೀಡಲು ಸಭೆಯು ಒಪ್ಪಿಗೆ ನೀಡಿತು.

**ವಿಷಯ ನಂ 12.**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯ ಒಂದನೇ ಹಂತದಲ್ಲಿನ ಡಿ– 39 ರ ಸಂಖ್ಯೆಯ ನಿವೇಶನದ ಮಾಲಿಕರಾದ ಜಿ. ವಿ. ಜಗದಾಂಬ ಬಿನ್ ವೀರಣ್ಣ ಇವರು ಮನೆಯನ್ನು ಕಟ್ಟದಿರುವ ಬಗ್ಗೆ ಹಾಗೂ ಕಾಲಾವದಿ ವಿಸ್ತರಿಸುವ ಕುರಿತು.

**ಟಿಪ್ಪಣಿ:**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಹಿರೇಮಗಳೂರು ವಸತಿ ಬಡಾವಣೆಯ ಒಂದನೇ ಹಂತದಲ್ಲಿನ ಡಿ– 39 ರ ಸಂಖ್ಯೆಯ ನಿವೇಶನದ ಮಾಲಿಕರಾದ ಜಿ. ವಿ. ಜಗದಾಂಬ ಬಿನ್ ವೀರಣ್ಣ ಇವರಿಗೆ ಈ ಕಛೇರಿಯ ಪತ್ರ ಸಂಖ್ಯೆ.ನಅಪ್ರಾಚಿ : ಆಡಳಿತ : ನಿಹ : 62 : 1992 - 93 ದಿನಾಂಕ: 20-11-1992 ರಂದು ಹಂಚಿಕೆಯಾಗಿರುತ್ತದೆ, ಅದರಂತೆ ಗುತ್ತಿಗೆ ಹಾಗೂ ಕ್ರಯ ಪತ್ರ ನೊಂದಣಿಯಾಗಿರುತ್ತದೆ, ದಿನಾಂಕ:27-01-2007 ರಂದು ನಡೆದ ಪ್ರಾಧಿಕಾರದ ಸಭೆಯ ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯ ನಂ.12 ರಲ್ಲಿ 2006 ನೇ ವರ್ಷದಿಂದ, ಪ್ರಾರಂಭದ ವರ್ಷವಾಗಿ ಪರಿಗಣಿಸಿ.

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮಗಳು 1991 ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ. ಯುಡಿಡಿ : 248 : ಎಂಎನ್ಎಲ್ : 97, ದಿನಾಂಕ:12-05-2000. ಮತ್ತು ಸರ್ಕಾರದ ಸುತ್ತೋಲೆ ಸಂಖ್ಯೆ. ಯುಡಿಡಿ : 123 : ಬೆಮಪ್ರಾ : 2005, ದಿನಾಂಕ:14-06-2005. ರ ಅನ್ವಯ ತಾವು ನಿವೇಶನವನ್ನು ಸ್ವಾದೀನಕ್ಕೆ ಪಡೆದ 5 ವರ್ಷಗಳ ಅವಧಿಯೊಳಗಾಗಿ ಮನೆಯನ್ನು ನಿರ್ಮಾಣ ಮಾಡಬೇಕಾಗಿತ್ತು. ಆದರೆ ಈ ಅವಧಿಯಲ್ಲೂ ನಿರ್ಮಾಣ ಮಾಡಿರುವುದಿಲ್ಲ. ಪ್ರಾಧಿಕಾರವು ವಸತಿ ಬಡಾವಣೆಯಲ್ಲಿ ರಸ್ತೆ, ಚರಂಡಿ, ವಿದ್ಯುತ್, ನೀರು ಸರಬರಾಜು ವ್ಯವಸ್ತೆಯನ್ನು ಈಗಾಗಲೇ ಕಲ್ಪಿಸಲಾಗಿದೆ, ಅದರಂತೆ ದಂಡ ವಸೂಲಿ ಮಾಡಲಾಗುತ್ತಿದೆ, ಅದರಂತೆ ಜಿ. ವಿ. ಜಗದಾಂಬ ಬಿನ್ ವೀರಣ್ಣ ಇವರು ಅಂಗವಿಕಲರಾಗಿದ್ದು ಸದರಿಯವರು ಸರ್ಕಾರವು ಅಂಗವಿಕಲರಿಗೆ ನೀಡುತ್ತಿರುವ ಸೌಲಭ್ಯಗಳನ್ನು ಪರಿಗಣಿಸಿ, ಪ್ರಾಧಿಕಾರದಿಂದಲೂ ಸಹ ನಿವೇಶನಕ್ಕೆ ದಂಡ ಶುಲ್ಕದಿಂದ ವಿನಾಯಿತಿ ನೀಡಬೇಕೆಂದು ದಿನಾಂಕ: 29-12-2008 ರಂದು ಅರ್ಜಿ ಸಲ್ಲಿಸಿರುತ್ತಾರೆ ಅದರಂತೆ ಸದರಿಯವರಿಗೆ ವಿನಾಯಿತಿ ನೀಡುವ ಕುರಿತು ಪ್ರಾಧಿಕಾರದ ಸಭೆಗೆ ಮಂಡಿಸಿದೆ.

**ತೀರ್ಮಾನ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ವಸತಿ ಬಡಾವಣೆಯ ಒಂದನೇ ಹಂತದಲ್ಲಿನ ಡಿ– 39 ರ ಸಂಖ್ಯೆಯ ನಿವೇಶನದ ಮಾಲೀಕರಾದ ಜಿ. ವಿ. ಜಗದಾಂಭ ಬಿನ್ ವೀರಣ್ಣ ಇವರು ಮನೆಯನ್ನು ಕಟ್ಟದಿರುವ ಬಗ್ಗೆ ಹಾಗೂ ಕಾಲಾವಧಿ ವಿಸ್ತರಿಸುವ ಕುರಿತು ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ನಂತರ ಅರ್ಜಿದಾರರಿಗೆ ಅಂಗವಿಕಲರಾಗಿರುವುದರಿಂದ ವಿಶೇಷ ಪ್ರಕರಣವೆಂದು ಪರಿಗಣಿಸಿ, ಇನ್ನು ಒಂದು ವರ್ಷದೊಳಗೆ ಮನೆ ನಿರ್ಮಾಣ ಮಾಡಬೇಕೆಂಬ ನಿಬಂಧನೆ ವಿಧಿಸಿ ಮನೆ ಕಟ್ಟಲು ಕಾಲಾವಕಾಶ ನೀಡಲು ಹಾಗೂ ನಂತರವೂ ಅವರು ಮನೆ ನಿರ್ಮಾಣ ಮಾಡದಿದ್ದಲ್ಲಿ ದಿನಾಂಕ: 14-06-2005 ರ ಸರ್ಕಾರಿ ಸುತ್ತೋಲೆಯಂತೆ ಕ್ರಮಜರುಗಿಸುವಂತೆ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 13.**

ಪ್ರಾಧಿಕಾರಕ್ಕೆ ಸರ್ಕಾರದಿಂದ ಮಂಜೂರಾಗಿ ಮುಂದುವರಿಯುತ್ತಿರುವ ಒಟ್ಟು 9 ಹುದ್ದೆಗಳಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರು, ಎರಡನೇ ದರ್ಜೆ ಸಹಾಯಕರು ಹಾಗೂ ಬೆರಳಚ್ಚುಗಾರರ ಹುದ್ದೆಗಳನ್ನು ನೇಮಕ ಮಾಡಿಕೊಳ್ಳುವ ಬಗ್ಗೆ ಸಭೆಯ ಅನುಮೋದನೆ ಕೋರಿ.

**ಟಿಪ್ಪಣಿ :**

ಪ್ರಾಧಿಕಾರದ ಕಛೇರಿಗೆ ಈ ಕೆಳಕಂಡಂತೆ ಒಂಬತ್ತು ಹುದ್ದೆಗಳು ಮಂಜೂರಾಗಿದ್ದು ಅವುಗಳ ಮಂಜೂರಾತಿ ಅವಧಿಯು ದಿನಾಂಕ: 30-06-2008 ಕ್ಕೆ ಮುಕ್ತಾಯವಾಗಿದ್ದು ಅವುಗಳನ್ನು ಖಾಯಂ ಆಗಿ ಮುಂದುವರಿಸಲು ಮಂಜೂರಾತಿ ನೀಡುವಂತೆ ಈ ಕಛೇರಿಯ ಪತ್ರದ ಸಂಖ್ಯೆ. ನಅಪ್ರಾಚಿ : ಸಿಬ್ಬಂದಿ : 16 : 2008 - 09, ದಿನಾಂಕ: 24-09-2008 ರಲ್ಲಿ ಸರ್ಕಾರಕ್ಕೆ ಕೋರಲಾಗಿತ್ತು, ಆದರೆ ಈವರೆವಿಗೆ ಮಂಜೂರಾತಿ ನೀಡಿಕೆ ಆದೇಶ ಬಂದಿರುವುದಿಲ್ಲ.

| ಕ್ರ ಸಂ. | ಹುದ್ದೆಯ ಹೆಸರು | ವೇತನ ಶ್ರೇಣಿ | ಹುದ್ದೆಗಳ ಸಂಖ್ಯೆ | ಷರಾ |
|---|---|---|---|---|
| 1. | ಸಹಾಯಕ ಇಂಜಿನಿಯರ್ | 11400 - 21600 | 1 | |
| 2. | ಲಿಟರೇಟ್ ಅಸಿಸ್ಟೆಂಟ್ | 5800 - 10500 | 1 | |
| 3. | ನಾಲ್ಕನೇ ದರ್ಜೆ ಸಹಾಯಕರು | 5200 - 8200 | 1 | |
| 4. | “ಡಿ” ಗ್ರೂಪ್ ನೌಕರರು | 4800 – 7275 | 1 | |
| 5. | ಲೆಕ್ಕಾದೀಕ್ಷಕರು | 10800 - 20025 | 1 | |
| 6. | ಪ್ರಥಮ ದರ್ಜೆ ಸಹಾಯಕರು | 7275 - 13350 | 1 | |
| 7. | ಎರಡನೇ ದರ್ಜೆ ಸಹಾಯಕರು | 5500 - 10500 | 1 | |
| 8. | ಬೆರಳಚ್ಚುಗಾರರು | 5500 - 10500 | 1 | |
| 9. | ವರ್ಕ್ ಇನ್ಸ್‌ಪೆಕ್ಟರ್ | 5500 - 10500 | 1 | |

ಈ ಮೇಲ್ಕಂಡ ಹುದ್ದೆಗಳಲ್ಲಿ ಕ್ರಮ ಸಂಖ್ಯೆ. 1 ಮತ್ತು 5 ರ ಹುದ್ದೆಗಳು ನಿಯೋಜನೆ ಮೇರೆಗೆ ಲೋಕೋಪಯೋಗಿ ಹಾಗೂ ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ಪಡೆಯಬೇಕಾಗಿರುತ್ತದೆ, ಹಾಲಿ ಕ್ರಮ ಸಂಖ್ಯೆ 5 ಕ್ಕೆ ಸಂಬಂದಿಸಿದಂತೆ ಲೆಕ್ಕಾದೀಕ್ಷಕರು ರಾಜ್ಯ ಲೆಕ್ಕ ಪತ್ರ ಇಲಾಖೆಯಿಂದ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು ಸಹಾಯಕ ಇಂಜಿನಿಯರ್ ಹುದ್ದೆ ಖಾಲಿ ಇರುತ್ತದೆ. ಕ್ರಮ ಸಂಖ್ಯೆ. 2 ಮತ್ತು 3 ರಲ್ಲಿನ ಲಿಟರೇಟ್ ಸಹಾಯಕರು ಹಾಗೂ ನಾಲ್ಕನೇ ದರ್ಜೆ ಸಹಾಯಕರುಗಳು ಮಾತ್ರ ಇಲಾಖೆಯವರು ಕಾರ್ಯ ನಿರ್ವಹಿಸುತ್ತಿರುತ್ತಾರೆ ಕ್ರಮ ಸಂಖ್ಯೆ. 4 ಮತ್ತು 9 ರಲ್ಲಿನ “ಡಿ” ದರ್ಜೆ ನೌಕರರು ಹಾಗೂ ವರ್ಕ್ ಇನ್ಸ್‌ಪೆಕ್ಟರ್ ರವರು ದಿನಗೂಲಿ ಮಾಸಿಕ ಆದಾರದ ಮೇಲೆ ಕೆಲಸ ನಿರ್ವಹಿಸುತ್ತಿರುತ್ತಾರೆ, ಉಳಿದ ಕ್ರಮ ಸಂಖ್ಯೆ. 6, 7 ಮತ್ತು 8 ರ ಹುದ್ದೆಗಳು ಖಾಲಿ ಇದ್ದು ಪ್ರಾಧಿಕಾರದಲ್ಲಿ ಇತ್ತೀಚೆಗೆ ಹೊಸದಾಗಿ ವಸತಿ ಬಡಾವಣೆ ಅಭಿವೃದ್ಧಿ ಪಡಿಸುತ್ತಿರುವ ಯೋಜನೆಗಳು ಜಾರಿಯಲ್ಲಿದ್ದು ಕಛೇರಿ ಕೆಲಸಗಳು ಅದಿಕವಾಗಿರುವುದರಿಂದ 1 ಪ್ರಥಮ ದರ್ಜೆ ಸಹಾಯಕರು, 1 ದ್ವಿತಿಯ (ಎರಡನೇ) ದರ್ಜೆ ಸಹಾಯಕರು ಹಾಗೂ 1 ಬೆರಳಚ್ಚುಗಾರರು ಹೀಗೆ ಒಟ್ಟು 3 ಜನ ನೌಕರರನ್ನು ಖಾಯಂ ಆಗಿ ನಿಯಮಾನುಸಾರ ಸರ್ಕಾರದ ಅನುಮತಿ ಪಡೆದು ಪ್ರಾಧಿಕಾರವು ನೇಮಕ ಮಾಡಿಕೊಳ್ಳುವಂತೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಪ್ರಾಧಿಕಾರಕ್ಕೆ ಸರ್ಕಾರದಿಂದ ಮಂಜೂರಾಗಿ ಮುಂದುವರಿಯುತ್ತಿರುವ 9 ಹುದ್ದೆಯಲ್ಲಿ ಖಾಲಿ ಇರುವ ಪ್ರಥಮ ದರ್ಜೆ ಸಹಾಯಕರು, ದ್ವಿತಿಯ ದರ್ಜೆ ಸಹಾಯಕರು ಹಾಗೂ ಬೆರಳಚ್ಚುಗಾರರ ಹುದ್ದೆಗಳನ್ನು ಪ್ರಾಧಿಕಾರದಿಂದ ನೇಮಕ ಮಾಡಿಕೊಳ್ಳುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ನಂತರ ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡುತ್ತಾ ಪ್ರಾಧಿಕಾರದ ವರಮಾನವು ಅಧಿಕಗೊಂಡು ಸದೃಡಗೊಂಡ ನಂತರ ಖಾಲಿ ಹುದ್ದೆಗಳನ್ನು ಭರ್ತಿಮಾಡಿಕೊಳ್ಳ ಬಹುದಾಗಿರುತ್ತೆ. ಅಲ್ಲಿಯವರೆಗೆ ಈಗಿರುವಂತೆ ಇತರೆ ಮೂಲಗಳಿಂದ ನೌಕರರ ಸೇವೆ ಪಡೆದು ಪ್ರಾಧಿಕಾರದ ಕೆಲಸಕಾರ್ಯಗಳನ್ನು ನಿರ್ವಹಿಸುವಂತೆ ಸೂಚಿಸಿದರು ಇದನ್ನು ಸಭೆಯು ಸರ್ವಾನುಮತದದಿಂದ ಒಪ್ಪಿ ತೀರ್ಮಾನ ಕೈಗೊಳ್ಳಲಾಯಿತು.

**ವಿಷಯ ನಂ 14.**

ಚಿಕ್ಕಮಗಳೂರು ನಗರದ ಎಂ. ಜಿ. ರಸ್ತೆಯಿಂದ ಕೆ. ಎಂ. ರಸ್ತೆಗೆ ಸೇರುವ ಅಂಡೇ ಛತ್ರ ರಸ್ತೆಯಲ್ಲಿರುವ ಡಿವೈಡರ್ ತೆಗೆದು ಸುಗಮ ರಸ್ತೆ ಸಂಚಾರ ವ್ಯವಸ್ಥೆ ಕಲ್ಪಿಸುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರದ ಎಂ. ಜಿ. ರಸ್ತೆಯಿಂದ ಕೆ. ಎಂ. ರಸ್ತೆಗೆ ಸೇರುವ ಅಂಡೇ ಛತ್ರ ರಸ್ತೆಯಲ್ಲಿ ಈ ಹಿಂದೆ ರಸ್ತೆ ಡಿವೈಡರ್ ಮತ್ತು ಹೈಮಾಸ್ಕ್ ಲೈಟ್ ಅಳವಡಿಸಿದ್ದು ಸದರಿ ರಸ್ತೆಯಲ್ಲಿ ಡಿವೈಡರ್ ನಿರ್ಮಿಸಿರುವುದರಿಂದ ವಾಹನ ಸಂಚಾರಕ್ಕೆ ಅಡ್ಡಿಯಾಗಿದ್ದು ಮತ್ತು ರಸ್ತೆಯ ಒಂದು ಭಾಗದಲ್ಲಿ ಮಾತ್ರ ವಾಹನ ಸಂಚಾರ ಮಾಡುತ್ತಿದ್ದು ಇನ್ನೊಂದು ಭಾಗದಲ್ಲಿ ವಾಹನ ನಿಲುಗಡೆ ಮಾಡುತ್ತಿದ್ದು ಸದರಿ ರಸ್ತೆಯಲ್ಲಿ ಡಿವೈಡರ್ ಸದುಪಯೋಗವಾಗುತ್ತಿರುವುದಿಲ್ಲ ಎಂದು ಮಾನ್ಯ ಶಾಸಕರು ಚಿಕ್ಕಮಗಳೂರು ವಿದಾನ ಸಭಾ ಕ್ಷೇತ್ರ ಚಿಕ್ಕಮಗಳೂರು ರವರು ದಿನಾಂಕ: 02-12-2009 ರಂದು ನಗರದ ವೀಕ್ಷಣೆ ಸಂದರ್ಭದಲ್ಲಿ ತಿಳಿಸಿರುತ್ತಾರೆ ಅದರಂತೆ ಅಂಡೇ ಛತ್ರ ರಸ್ತೆಯಲ್ಲಿ ನಿರ್ಮಿಸಿರುವ ರಸ್ತೆ ಡಿವೈಡರ್ ತೆಗೆದು ಹೈಮಾಸ್ಕ್ ಲೈಟ್‌ನ್ನು ಅವಶ್ಯವಿರುವ ಸ್ಥಳಕ್ಕೆ ಸ್ಥಳಾಂತರಿಸಿ ಸುಗಮ ರಸ್ತೆ ಸಂಚಾರ ವ್ಯವಸ್ಥೆ ಕಲ್ಪಿಸುವುದು ಸೂಕ್ತವಾಗಿರುತ್ತದೆ, ಸದರಿ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಚಿಕ್ಕಮಗಳೂರು ನಗರದ ಎಂ. ಜಿ. ರಸ್ತೆಯಿಂದ ಕೆ. ಎಂ. ರಸ್ತೆಗೆ ಸೇರುವ ಅಂಡೇ ಛತ್ರ ರಸ್ತೆಯಲ್ಲಿರುವ ಡಿವೈಡರ್ ತೆಗೆದು ಸುಗಮ ರಸ್ತೆ ಸಂಚಾರ ವ್ಯವಸ್ಥೆ ಕಲ್ಪಿಸುವ ವಿಚಾರದ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ನಂತರ ಸದರಿ ಡಿವೈಡರ್ ನಿರ್ಮಿಸುವ ರಸ್ತೆಯ ನಗರಸಭೆ ವ್ಯಾಪ್ತಿಗೆ ಬರುತ್ತುದ್ದು ಸಭೆಯಲ್ಲಿ ಭಾಗವಹಿಸಿದ್ದ ನಗರಸಭೆ ಆಯುಕ್ತರಿಗೆ ಈ ಬಗ್ಗೆ ಪೋಲೀಸ್ ಇಲಾಖೆಗೆ ಪತ್ರ ಬರೆದು ಅನುಮತಿ ಪಡೆದು ನಂತರ ಡಿವೈಡರ್ ತೆರೆವುಗೊಳಿಸುವಂತೆ ಮಾನ್ಯ ಜಿಲಾಧಿಕಾರಿಗಳವರು ತಿಳಿಸಿದರು ಇದನ್ನು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು. (ಕ್ರಮ: ಆಯುಕ್ತರು, ನಗರಸಭೆ, ಚಿಕ್ಕಮಗಳೂರು).

**ವಿಷಯ ನಂ 15.**

ಶ್ರೀ ವೈ. ಬಿ. ಕುಮಾರಸ್ವಾಮಿ ದಿನಗೂಲಿ ಮಾಸಿಕ ವೇತನ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ವರ್ಕ್ಸ್ ಇನ್ಸ್‌ಪೆಕ್ಟರ್ ರವರಿಗೆ ಮಾಹೆಯೊಂದಕ್ಕೆ ರೂ. 500.00 ಗಳನ್ನು ಪ್ರಯಾಣ ಭತ್ಯೆಯಾಗಿ ನೀಡುವ ಕುರಿತು ಸಭೆ ಅನುಮೋದನೆ ಕೋರಿ.

**ಟಿಪ್ಪಣಿ :**

ಶ್ರೀ ವೈ. ಬಿ. ಕುಮಾರಸ್ವಾಮಿ ರವರು ಪ್ರಾಧಿಕಾರದಲ್ಲಿ ದಿನಗೂಲಿ ಮಾಸಿಕ ಆದಾರದ ಮೇಲೆ ವರ್ಕ್ ಇನ್ಸ್‌ಪೆಕ್ಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದು, ಅವರು ಪ್ರತಿ ನಿತ್ಯ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಿರ್ವಹಿಸುವ ಕಾಮಗಾರಿಗಳ ವೀಕ್ಷಣೆ ಅನದೀಕೃತ ಕಟ್ಟಡ ನಿರ್ಮಾಣ ಇತ್ಯಾದಿ ವಿಷಯಗಳನ್ನು ಕಛೇರಿಗೆ ವರದಿ ಮಾಡಲು ನಗರದ ವ್ಯಾಪ್ತಿಯಲ್ಲಿ ಪ್ರಯಾಣ ಮಾಡಬೇಕಾಗಿರುವುದರಿಂದ ಅವರಿಗೆ ತಿಂಗಳಿಗೆ ರೂ. 500.00 ಗಳನ್ನು ಪ್ರತಿದಿನದ ಪ್ರಯಾಣ ಮತ್ತು ಕಾರ್ಯವರದಿ ಅನುಸರಿಸಿ ಪ್ರಯಾಣ ವೆಚ್ಚ ಭರಿಸುವ ಸಲುವಾಗಿ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ತೀರ್ಮಾನ :**

ಶ್ರೀ ವೈ.ಬಿ. ಕುಮಾರಸ್ವಾಮಿ ರವರು ಪ್ರಾಧಿಕಾರದಲ್ಲಿ ದಿನಗೂಲಿ ಮಾಸಿಕ ಆದಾರದ ಮೇಲೆ ವರ್ಕ್ ಇನ್ಸ್‌ಪೆಕ್ಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದು ಅವರು ಪ್ರತಿನಿತ್ಯ ಪ್ರಾಧಿಕಾರದ ವ್ಯಾಪ್ತಿಯಲ್ಲಿ ನಿರ್ವಹಿಸುವ ಕಾಮಗಾರಿ ವೀಕ್ಷಣೆ ಅನಧಿಕೃತ ಕಟ್ಟಡ ನಿರ್ಮಾಣ ಇತ್ಯಾದಿ ವಿಷಯಗಳನ್ನು ಕಛೇರಿಗೆ ವರದಿ ಮಾಡಲು,

ನಗರದ ವ್ಯಾಪ್ತಿಯಲ್ಲಿ ಪ್ರಯಾಣ ಮಾಡಬೇಕಾಗಿರುವುದರಿಂದ ಅವರಿಗೆ ತಿಂಗಳಿಗೆ ರೂ. 500.00 ಪ್ರಯಾಣ ಭತ್ಯ ನೀಡುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ನಂತರ ಮಾನ್ಯ ಜಿಲ್ಲಾಧಿಕಾರಿಗಳವರು ಸಲಹೆ ಮಾಡಿ ಶ್ರೀ ವೈ. ಬಿ. ಕುಮಾರಸ್ವಾಮಿ ರವರಿಗೆ ಮಾಹೆಯಾನ ರೂ. 750.00 ಪ್ರಯಾಣ ಭತ್ಯ ನೀಡಬಹುದು ಎಂದರು, ಇದಕ್ಕೆ ಒಪ್ಪಿ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

## ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಬಹುದಾದ ಇತರೆ ವಿಷಯಗಳು.

**ವಿಷಯ ನಂ 1.**

ಶ್ರೀ ಮುನೀರ್ ಅಹಮದ್, ಶ್ರೀ ಸಿ. ಎಂ. ನದೀಮ್ ಅಹಮದ್, ಶ್ರೀ ಸಿ. ಎಂ. ವಸೀಮ್ ಅಹಮದ್ ಇವರು ಚಿಕ್ಕಮಗಳೂರು ನಗರದ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 44 ಮತ್ತು 50 ರಲ್ಲಿನ ಸುಮಾರು 07 ಎಕರೆ – 05 ಗುಂಟೆ ವಿಸ್ತೀರ್ಣದಲ್ಲಿನ ರೂಪ ರೇಖೆಗೆ ಅಂತಿಮ ಅನುಮೋದನೆ ನೀಡುವ ಕುರಿತು.

**ಟಿಪ್ಪಣಿ:**

ಶ್ರೀ ಮುನೀರ್ ಅಹಮದ್, ಶ್ರೀ ಸಿ. ಎಂ. ನದೀಮ್ ಅಹಮದ್, ಶ್ರೀ ಸಿ. ಎಂ. ವಸೀಮ್ ಅಹಮದ್ ಇವರು ಚಿಕ್ಕಮಗಳೂರು ನಗರದ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 44 ಮತ್ತು 50 ರಲ್ಲಿನ ಸುಮಾರು 07 ಎಕರೆ – 05 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ಲೇಔಟ್ ಅನುಮೋದನೆಗೆ ದಿನಾಂಕ: 04-02-2005 ರ ಸಭೆಯಲ್ಲಿ ಮಂಡಿಸಿ ತಾತ್ಕಾಲಿಕ ಅನುಮೋದನೆ ನೀಡಲಾಗಿತ್ತು, ಅದರಂತೆ ಲೇಔಟ್‌ನಲ್ಲಿ ಬರುವಂತಹ ರಸ್ತೆ, ಚರಂಡಿ, ಮೋರಿ ಮತ್ತು ವಿದ್ಯುತ್ ಸಂಪರ್ಕ ಹಾಗೂ ನೀರು ಸರಬರಾಜು ಮತ್ತಿತರೆ ಮೂಲಭೂತ ಸೌಕರ್ಯಗಳನ್ನು ಅಳವಡಿಸಿರುವುದನ್ನು ಪರಿಶೀಲಿಸಿ, ಅದರಂತೆ ಸದರಿ ಲೇಔಟ್‌ನ ಅಂತಿಮ ಅನುಮೋದನೆಗಾಗಿ ಅರ್ಜಿ ಸಲ್ಲಿಸಿದ್ದು ಸದರಿ ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರಗಳಿಂದ ದೃಡೀಕರಣ ಪತ್ರ ಪಡೆದನಂತರ ಅಂತಿಮ ರೂಪ ರೇಖಾ ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಮುನೀರ್ ಅಹಮದ್, ಮತ್ತಿತರರು ಚಿಕ್ಕಮಗಳೂರು ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 44 ಮತ್ತು 50 ರಲ್ಲಿನ ಸುಮಾರು 07 ಎಕರೆ – 05 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ತಾತ್ಕಾಲಿಕ ವಸತಿ ರೂಪ ರೇಖೆಗೆ ಅನುಮೋದನೆ ನೀಡಲಾಗಿದೆ ಅದರಂತೆ, ರಸ್ತೆ ಉದ್ಯಾನವನ, ಹಾಗೂ ನಾಗರೀಕ ಸೌಕರ್ಯದ ನಿವೇಶನ ಹಾಗೂ ವಸತಿ ನಿವೇಶನಗಳನ್ನು ರೂಪರೇಖೆಯಲ್ಲಿ ನೀಡಿರುವಂತೆ ಅಳವಡಿಸಿರುವುದನ್ನು ಪರಿಶೀಲಿಸಿ ಹಾಗೂ ಸಾರ್ವಜನಿಕವಾಗಿ ಉಪಯೋಗಿಸುವಂತಹ ರಸ್ತೆ ಚರಂಡಿ ಮೋರಿ ಹಾಗೂ ನೀರು ಸರಬರಾಜು ವ್ಯವಸ್ಥೆಗಳನ್ನು ಅಳವಡಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಕಾಮಗಾರಿಯನ್ನು ನಿರ್ವಹಿಸಿರುವ ಬಗ್ಗೆ ದೃಡೀಕರಣ ಪತ್ರ ಪಡೆದ ನಂತರ ಅಂತಿಮ ರೂಪರೇಖಾ ನಕ್ಷೆಗೆ ಅನುಮೋದನೆ ನೀಡಲು ಪ್ರಾಧಿಕಾರದ ಸಭೆಗೆ ಮಂಡಿಸಿ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಶ್ರೀ ಮುನೀರ್ ಅಹಮದ್, ಶ್ರೀ ಸಿ. ಎಂ. ನದೀಮ್ ಅಹಮದ್ ಶ್ರೀ ಸಿ.ಎಂ. ವಸೀಮ್ ಅಹಮದ್ ಇವರು ಚಿಕ್ಕಮಗಳೂರು ನಗರದ ಚಿಕ್ಕಮಗಳೂರು ಸರ್ವೆ ನಂ. 44 ಮತ್ತು 50 ರಲ್ಲಿನ ಒಟ್ಟು 07 ಎಕರೆ 05 ಗುಂಟೆ ವಿಸ್ತೀರ್ಣದಲ್ಲಿನ ರೂಪರೇಖೆಗೆ, ಅಂತಿಮ ಅನುಮೋದನೆ ನೀಡುವ ಕುರಿತು, ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಸದರಿ ಲೇಔಟ್ ಒಂದು ಭಾಗದಲ್ಲಿನ ರಸ್ತೆ ಮಧ್ಯದಲ್ಲಿ ಬೋರ್‌ವೆಲ್ ಅಳವಡಿಸಿರುವುದನ್ನು ರಸ್ತೆಗೆ ತೊಂದರೆ ಆಗದಂತೆ ಸರಿಪಡಿಸಲು ನಗರಸಭೆಗೆ ತಿಳಿಸಲು ಹಾಗೂ,

ರಸ್ತೆಗೆ ತೊಂದರೆಯಾಗುವಂತೆ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳಿದ್ದು ಅವುಗಳನ್ನು ಸೂಕ್ತ ಪ್ರದೇಶಗಳಿಗೆ ಸ್ಥಳಾಂತರಿಸಿ ಲೇಔಟ್ ವಿನ್ಯಾಸಕ್ಕೆ ಪೂರಕವಾಗಿ ಅಳತೆಗಳನ್ನು ಪರಿಶೀಲಿಸಿ ಮತ್ತು ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣ ಪತ್ರಗಳನ್ನು ಪಡೆದ ನಂತರ ನಿಗದಿ ಪಡಿಸಿದ ಎಲ್ಲಾ ಗುಣಮಟ್ಟದ ಕಾಮಗಾರಿಗಳ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ, ರೂಪರೇಖೆಗೆ ಅಂತಿಮ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 2.**

ಶ್ರೀಮತಿ ದೀಪಾ ಕುಮಾರಸ್ವಾಮಿ ಕೊಂ ಡಾ., ಕೆ. ಇ. ಕುಮಾರಸ್ವಾಮಿ ಮತ್ತು ಶ್ರೀ ಶ್ರೇಯಾಂಶ್ಸ್ ನಂದೀಶ್ವರ್ ಬಿನ್ ರಾಯಪ್ಪ (ಜಂಟಿ) ಕಡೂರು ಕ್ಲಿನಿಕ್ ಕೆ. ಎಂ. ರಸ್ತೆ, ಚಿಕ್ಕಮಗಳೂರು ಇವರು ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿನ ಸುಮಾರು 15 ಎಕರೆ – 00 ಗುಂಟೆ ಜಮೀನಿಗೆ ವಸತಿ ವಿನ್ಯಾಸಕ್ಕೆ ಅಂತಿಮ ಅನುಮೋದನೆ ನೀಡುವ ಕುರಿತು.

**ಟಿಪ್ಪಣಿ:**

ಶ್ರೀಮತಿ ದೀಪಾ ಕುಮಾರ ಕೊಂ ಡಾ., ಕೆ. ಇ. ಕುಮಾರಸ್ವಾಮಿ ಮತ್ತು ಶ್ರೀ ಶ್ರೇಯಾಂಶ್ಸ್ ನಂದೀಶ್ವರ್ ಬಿನ್ ರಾಯಪ್ಪ (ಜಂಟಿ) ಕಡೂರು ಕ್ಲಿನಿಕ್ ಕೆ. ಎಂ. ರಸ್ತೆ, ಚಿಕ್ಕಮಗಳೂರು ಇವರು ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿನ 15 ಎಕರೆ – 00 ಗುಂಟೆ ಜಮೀನಿಗೆ ವಸತಿ ವಿನ್ಯಾಸ ಅನುಮೋದನೆಯನ್ನು ದಿನಾಂಕ: 25-08-2007 ರ ಸಭೆಯಲ್ಲಿ ಮಂಡಿಸಿ ತಾತ್ಕಾಲಿಕ ವಸತಿ ರೂಪ ರೇಖೆಗೆ ಅನುಮೋದನೆ ನೀಡಲಾಗಿತ್ತು, ಅದರಂತೆ ರೂಪ ರೇಖೆಯಲ್ಲಿ ಬರುವಂತಹ ರಸ್ತೆ, ಚರಂಡಿ, ಮೋರಿ ಮತ್ತು ವಿದ್ಯುತ್ ಸಂಪರ್ಕ ಹಾಗೂ ನೀರು ಸರಬರಾಜು ಮತ್ತಿತರೆ ಮೂಲಭೂತ ಸೌಕರ್ಯಗಳನ್ನು ಅಳವಡಿಸಿರುತ್ತಾರೆ, ಅದರಂತೆ ಸದರಿ ವಸತಿ ರೂಪ ರೇಖೆಯ ಅಂತಿಮ ಅನುಮೋದನೆಗಾಗಿ ಅರ್ಜಿ ಸಲ್ಲಿಸಿದ್ದು ಸದರಿ ಕಾಮಗಾರಿಗಳನ್ನು ನಿರ್ವಹಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರಗಳಿಂದ ದೃಡೀಕರಣ ಪತ್ರ ಪಡೆದನಂತರ ಅಂತಿಮ ರೂಪ ರೇಖಾ ನಕ್ಷೆಗೆ ಅನುಮೋದನೆ ನೀಡುವ ಬಗ್ಗೆ ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀಮತಿ ದೀಪಾ ಕುಮಾರ ಕೊಂ ಡಾ., ಕೆ. ಇ. ಕುಮಾರಸ್ವಾಮಿ ಮತ್ತು ಶ್ರೀ ಶ್ರೇಯಾಂಶ್ಸ್ ನಂದೀಶ್ವರ್ ಬಿನ್ ರಾಯಪ್ಪ (ಜಂಟಿ) ಕಡೂರು ಕ್ಲಿನಿಕ್ ಕೆ. ಎಂ. ರಸ್ತೆ, ಚಿಕ್ಕಮಗಳೂರು ಇವರು ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿನ ಸುಮಾರು 15 ಎಕರೆ – 00 ಗುಂಟೆ ಜಮೀನಿಗೆ ತಾತ್ಕಾಲಿಕ ವಸತಿ ರೂಪ ರೇಖೆಗೆ ಅನುಮೋದನೆ ನೀಡಲಾಗಿದೆ ಆದರಂತೆ, ರಸ್ತೆ ಉದ್ಯಾನವನ, ಹಾಗೂ ನಾಗರೀಕ ಸೌಕರ್ಯದ ನಿವೇಶನ ಹಾಗೂ ವಸತಿ ನಿವೇಶನಗಳನ್ನು ರೂಪರೇಖೆಯಲ್ಲಿ ನೀಡಿರುವಂತೆ **ಅಳವಡಿಸಿರುವುದನ್ನು ಪರಿಶೀಲಿಸಿ** ಹಾಗೂ ಸಾರ್ವಜನಿಕವಾಗಿ ಉಪಯೋಗಿಸುವಂತಹ ರಸ್ತೆ ಚರಂಡಿ ಮೋರಿ ಹಾಗೂ ನೀರು ಸರಬರಾಜು ವ್ಯವಸ್ಥೆಗಳನ್ನು ಅಳವಡಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಕಾಮಗಾರಿಯನ್ನು ನಿರ್ವಹಿಸಿರುವ ಬಗ್ಗೆ ದೃಡೀಕರಣ ಪತ್ರ ಪಡೆದ ನಂತರ ಅಂತಿಮ ರೂಪರೇಖಾ ನಕ್ಷೆಗೆ ಅನುಮೋದನೆ ನೀಡಲು ಪ್ರಾಧಿಕಾರದ ಸಭೆಗೆ ಮಂಡಿಸಿ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಶ್ರೀಮತಿ ದೀಪಾಕುಮಾರ್ ಕೊ ಡಾ|| ಕೆ.ಇ. ಕುಮಾರ ಸ್ವಾಮಿ ಮತ್ತು ಶ್ರೀ ಶ್ರೇಯಾಂಶ್ಸ್ ನಂದೀಶ್ವರ್ ಬಿನ್ ರಾಯಪ್ಪ (ಜಂಟಿ) ಕಡೂರು ಕ್ಲಿನಿಕ್ ಕೆ. ಎಂ. ರಸ್ತೆ, ಚಿಕ್ಕಮಗಳೂರು ರವರು ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿನ 15 ಎಕರೆ ಜಮೀನಿಗೆ ವಸತಿ ರೂಪರೇಖೆಗೆ, ಅಂತಿಮ ಅನುಮೋದನೆ ನೀಡುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು.

ಲೇಔಟ್ ವಿನ್ಯಾಸಕ್ಕೆ ಪೂರಕವಾಗಿ ಅಳತೆಗಳನ್ನು ಪರಿಶೀಲಿಸಿ, ಮತ್ತು ಸಂಬಂಧಪಟ್ಟ ಇಲಾಖೆಗಳಿಂದ ನಿರಾಕ್ಷೇಪಣ ಪತ್ರಗಳನ್ನು ಪಡೆದ ನಂತರ ಮತ್ತು ನಿಗದಿ ಪಡಿಸಿದ ಎಲ್ಲಾ ಗುಣಮಟ್ಟದ ಕಾಮಗಾರಿಗಳು ನಡೆದಿರುವ ಬಗ್ಗೆ ಪುನಃ ಪರಿಶೀಲಿಸಿ, ರೂಪರೇಖೆಗೆ ಅಂತಿಮ ಅನುಮೋದನೆ ನೀಡಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರವು ಹೊಸದಾಗಿ ರಚಿಸುತ್ತಿರುವ ಹಿರೇಮಗಳೂರು ಗ್ರಾಮದ ಸರ್ವೆ ನಂ. 321 ಮತ್ತಿತರೆ ಸರ್ವೆ ನಂಬರುಗಳಲ್ಲಿನ ಸುಮಾರು 17 ಎಕರೆ – 37½ ಗುಂಟೆ ಜಮೀನಿಗೆ ಸಂಬಂದಿಸಿದಂತೆ, ಜಮೀನಿಗೆ ನ್ಯಾಯಾಲಯದಲ್ಲಿ ರಿಟ್ ಸಲ್ಲಿಸಿರುವ ಬಗ್ಗೆ.

**ಟಿಪ್ಪಣಿ:**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರವು ಹೊಸದಾಗಿ ರಚಿಸುತ್ತಿರುವ ಹಿರೇಮಗಳೂರು ಗ್ರಾಮದ ಸರ್ವೆ ನಂ. 321 ಮತ್ತಿತರೆ ಸರ್ವೆ ನಂಬರುಗಳಲ್ಲಿನ ಸುಮಾರು 17 ಎಕರೆ – 37½ ಗುಂಟೆ ಜಮೀನಿಗೆ ಸಂಬಂದಿಸಿದಂತೆ, ಜಮೀನಿಗೆ ನ್ಯಾಯಾಲಯದಲ್ಲಿ ರಿಟ್ ಸಲ್ಲಿಸಿರುವ ಬಗ್ಗೆ. ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

**ತೀರ್ಮಾನ:**

ಈ ಬಗ್ಗೆ ಯಾವುದೇ ಕೋರ್ಟ್ ತಡೆಯಾಜ್ಞೆ ಇಲ್ಲದಿರುವುದರಿಂದ ಅನಧಿಕೃತ ವಾಸ ತೆರವುಗೊಳಿಸಿ ಲೇಔಟ್ ನಿರ್ಮಾಣ ಮಾಡಲು ಸಭೆ ಸರ್ವಾನುಮತದಿಂದ ತೀರ್ಮಾನಿಸಿತು.

**ವಿಷಯ ನಂ 5.**

ಭಾರತೀಯ ವೈದ್ಯಕೀಯ ಸಂಘ (ಐಎಂಎ) ಸಂಸ್ಥೆಗೆ ನಾಗರೀಕ ಸೌಲಭ್ಯ ಹಂಚಿಕೆ ಮಾಡುವ ಬಗ್ಗೆ.

**ಟಿಪ್ಪಣಿ:**

ಭಾರತೀಯ ವೈದ್ಯಕೀಯ ಸಂಘ (ಐಎಂಎ) ಸಂಸ್ಥೆಗೆ ನಾಗರೀಕ ಸೌಲಭ್ಯ ಹಂಚಿಕೆ ಮಾಡುವಾಗ ಶೇಕಡ 50 ರ ರಿಯಾಯಿತಿ ದರ ನೀಡುವ ಬಗ್ಗೆ ಸಭೆಯ ಅನುಮೋದನೆಗಾಗಿ ವಿಷಯವನ್ನು ಮಂಡಿಸಿದೆ.

**ತೀರ್ಮಾನ:**

ಭಾರತೀಯ ವೈದ್ಯಕೀಯ ಸಂಘ (ಐಎಂಎ) ಸಂಸ್ಥೆಗೆ ನಾಗರೀಕ ಸೌಲಭ್ಯ ಹಂಚಿಕೆ ಮಾಡುವಾಗ ಶೇಕಡ 50 ರ ರಿಯಾಯಿತಿ ದರ ನೀಡುವ ಬಗ್ಗೆ. ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು. ಈ ಬಗ್ಗೆ ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ಈ ಸಂಸ್ಥೆಯ ಸಂಪೂರ್ಣ ಲಾಭರಹಿತ ಸಾರ್ವಜನಿಕ ಸೇವೆಯ ಕಾರ್ಯ ಮಾಡುವುದರಿಂದ ಇವರಿಗೆ ಶೇಕಡ 50 ರ ರಿಯಾಯ್ತಿ ನೀಡಬೇಕೆಂದು ಹೇಳಿದರು. ಈ ಬಗ್ಗೆ ಸರ್ಕಾರದ ಅನುಮತಿ ಪಡೆದು, ಸದರಿ ಐ.ಎಂ.ಎ. ಸಂಸ್ಥೆಗೆ ಶೇಕಡ 50 ರ ರಿಯಾಯ್ತಿ ದರದಲ್ಲಿ ಹಂಚಿಕೆ ಮಾಡಬಹುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ಅಧ್ಯಕ್ಷರ ಅಪ್ಪಣೆ ಪಡೆದು ಸಭೆಯನ್ನು ಮುಕ್ತಾಯಗೊಳಿಸಲಾಯಿತು.**

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 15-01-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳ ಪುಸ್ತಕದಲ್ಲಿ ಈ ಕೆಳಕಂಡಂತೆ ಕೈತಪ್ಪಿನಿಂದ ತಪ್ಪಾಗಿರುವುದನ್ನು ಕೆಳಗಿನಂತೆ ತಿದ್ದುಪಡಿ ಮಾಡಲಾಗಿದೆ.

**ತೀರ್ಮಾನಗಳ ಪುಸ್ತಕದ ಪುಟ ಸಂಖ್ಯೆ. 9 ರಲ್ಲಿನ ವಿಷಯ ನಂ. 10 ರಲ್ಲಿನ**

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 72 / P ರಲ್ಲಿನ 20.73 x 53.96 ಮೀ ಅಳತೆಯ ಜಾಗದಲ್ಲಿ ಆಟೋ ಮೋಬೈಲ್ ಸರ್ವಿಸ್ ಇಂಡಸ್ಟ್ರೀಸ್ ಗ್ಯಾರೇಜ್ (ವರ್ಕ್ ಶಾಪ್) ಉಪಯೋಗಕ್ಕೆ ಕೋರಿರುತ್ತಾರೆ. ಸದರಿ ಪ್ರದೇಶವು ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಲಾಗಿದ್ದು, ಹಾಗೂ ರಸ್ತೆ ಸಂಪರ್ಕ ಬಂದಿದ್ದು ಸದರಿ ಜಾಗದ ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿರುತ್ತದೆ, ಆದುದರಿಂದ ಸದರಿ ಜಾಗಕ್ಕೆ ಸುತ್ತೋಲೆಯನ್ವಯ ಕೈಗಾರಿಕೆಗೆ ಕ್ರಮ ವಹಿಸಬಹುದಾಗಿದ್ದು ಪಾರ್ಕಿಂಗ್ ವ್ಯವಸ್ಥೆಗೆ ಸೂಚಿಸಿ ನೀಡಬಹುದಾಗಿದೆ, ಎಂಬುದನ್ನು ಸುತ್ತೋಲೆ ಯನ್ವಯ **"(ದ್ವಿಚಕ್ರ ಮತ್ತು ಸೈಕಲ್ ಸರ್ವೀಸ್ ಮತ್ತು ರಿಪೇರಿ)"** ಕೈಗಾರಿಕೆಗೆ ಕ್ರಮ ವಹಿಸಬಹುದಾಗಿದ್ದು, ಪಾರ್ಕಿಂಗ್ ವ್ಯವಸ್ಥೆಗೆ ಸೂಚಿಸಿ ನೀಡಬಹುದಾಗಿದೆ, ಎಂದು ಓದಿಕೊಳ್ಳುವುದು.

**ತೀರ್ಮಾನಗಳ ಪುಸ್ತಕದ ಪುಟ ಸಂಖ್ಯೆ. 10 ರಲ್ಲಿ ವಿಷಯ ನಂ. 11 ರಲ್ಲಿನ ಟಿಪ್ಪಣಿ 2 ನೇ ಪ್ಯಾರಾದಲ್ಲಿ:**

ಸದರಿ ಪ್ರದೇಶಕ್ಕೆ ಭೂಮಿಯನ್ನು ಚಿಕ್ಕಮಗಳೂರು ಪಟ್ಟಣದ ಮಹಾಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಿದೆ, ಈ ಪ್ರಸ್ತಾವನೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 522 : ಮೈಅಪ್ರಾ : 2005, ದಿನಾಂಕ: 10-03-2006 ರನ್ವಯ ಶುಲ್ಕಗಳನ್ನು ಪಾವತಿಸಿಕೊಂಡು ಮತ್ತಿತರೆ ಷರತ್ತುಗಳಿಗೊಳಪಟ್ಟು **"ವಸತಿ ಏಕ ನಿವೇಶನ"** ಎನ್ನುವ ಬದಲು **"ವಸತಿ ವಿನ್ಯಾಸ"** ಅನುಮೋದನೆ ನೀಡಲು ಸಭೆಯ ಮುಂದೆ ಮಂಡಿಸಿದೆ ಎಂದು ಓದಿಕೊಳ್ಳುವುದು.

**ತೀರ್ಮಾನಗಳ ಪುಸ್ತಕದ ಪುಟ ಸಂಖ್ಯೆ. 10 ರಲ್ಲಿನ**

**ನಗರ ಯೋಜನಾ ಸದಸ್ಯರ ಅಭಿಪ್ರಾಯದಲ್ಲಿ :**

ಶ್ರೀ ಪ್ರದೀಪ್ ಸಿ. ಹೆಚ್. ಬಿನ್ ಲೇಟ್ ಎ. ಜೆ. ಹನುಮಂತನಾಯ್ಡು ವಿನಾಯಕ ಬಡಾವಣೆ ಕೋಟೆ ರವರು ಚಿಕ್ಕಮಗಳೂರು ತಾಲ್ಲೂಕು ಕಸಬಾ ಹೋಬಳಿ ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 158 ರಲ್ಲಿನ 03 ಎಕರೆ – 05 ಗುಂಟೆ ವಿಸ್ತೀರ್ಣದ ಭೂಮಿಯನ್ನು ಪರಿಶೀಲಿಸಲಾಯಿತು. ಸದರಿ ಜಮೀನು ಮಹಾಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಿದ್ದು ಸದರಿ ಜಮೀನಿಗೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ರವರ ಕಛೇರಿಯ ಪತ್ರ ಸಂಖ್ಯೆ. ಎ2 : ಎಎಲ್ಎನ್ : 14 : 1997 - 98 ದಿನಾಂಕ: 10-11-1997 ರಲ್ಲಿ ವಸತಿ ಉದ್ದೇಶಕ್ಕೆ ಭೂ ಅನ್ಯಕ್ರಾಂತ ಮಂಜೂರಾತಿ ಆಗಿರುತ್ತದೆ, ಈ ಪ್ರಸ್ತಾವನೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 522 : ಮೈಅಪ್ರಾ : 2005, ದಿನಾಂಕ: 10-03-2006 ರ ಷರತ್ತಿಗೊಳಪಟ್ಟು ಹಾಗೂ ಈ ಪ್ರದೇಶಕ್ಕೆ ಸಂಬಂದಿಸಿದ ಶುಲ್ಕವನ್ನು ಪಾವತಿಸಿಕೊಂಡು **"ವಸತಿ ಏಕ ನಿವೇಶನ"** ಎಂಬ ಬದಲಿಗೆ **"ವಸತಿ ವಿನ್ಯಾಸ"** ಅನುಮೋದನೆ ನೀಡಬಹುದಾಗಿರುತ್ತದೆ, ಎಂದು ಓದಿಕೊಳ್ಳುವುದು.

**ತೀರ್ಮಾನಗಳ ಪುಸ್ತಕದ ಪುಟ ಸಂಖ್ಯೆ. 15 ರಲ್ಲಿನ ವಿಷಯ ನಂ. 2 ರಲ್ಲಿ**

**ನಗರ ಯೋಜನಾ ಸದಸ್ಯರ ಅಭಿಪ್ರಾಯದಲ್ಲಿ :**

ಶ್ರೀಮತಿ ದೀಪಾ ಕುಮಾರ ಕೊಂ ಡಾ., ಕೆ. ಇ. ಕುಮಾರಸ್ವಾಮಿ ಮತ್ತು ಶ್ರೀ ಶ್ರೇಯಾಂಶ್ಸ್ ನಂದೀಶ್ವರ್ ಬಿನ್ ರಾಯಪ್ಪ (ಜಂಟಿ) ಕಡೂರು ಕ್ಲಿನಿಕ್ ಕೆ. ಎಂ. ರಸ್ತೆ, ಚಿಕ್ಕಮಗಳೂರು ಇವರು ದಂಟರಮಕ್ಕಿ ಗ್ರಾಮದ ಸರ್ವೆ ನಂ. 5 ಮತ್ತು 6 ರಲ್ಲಿನ ಸುಮಾರು 15 ಎಕರೆ – 00 ಗುಂಟೆ ಜಮೀನಿಗೆ ತಾತ್ಕಾಲಿಕ ವಸತಿ ರೂಪ ರೇಖೆಗೆ ಅನುಮೋದನೆ ನೀಡಲಾಗಿದೆ ಅದರಂತೆ, ರಸ್ತೆ ಉದ್ಯಾನವನ, ಹಾಗೂ ನಾಗರೀಕ ಸೌಕರ್ಯದ ನಿವೇಶನ ಹಾಗೂ ವಸತಿ ನಿವೇಶನಗಳನ್ನು ರೂಪರೇಖೆಯಲ್ಲಿ ನೀಡಿರುವಂತೆ **"ಅಳವಡಿಸಿರುತ್ತಾರೆ"** ಎನ್ನುವ ಬದಲಿಗೆ **"ಅಳವಡಿಸಿರುವುದನ್ನು ಪರಿಶೀಲಿಸಿ"** ಹಾಗೂ ಸಾರ್ವಜನಿಕವಾಗಿ ಉಪಯೋಗಿಸುವಂತಹ ರಸ್ತೆ ಚರಂಡಿ ಮೋರಿ ಹಾಗೂ ನೀರು ಸರಬರಾಜು ವ್ಯವಸ್ಥೆಗಳನ್ನು ಅಳವಡಿಸಿರುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಕಾಮಗಾರಿಯನ್ನು ನಿರ್ವಹಿಸಿರುವ ಬಗ್ಗೆ ದೃಡೀಕರಣ ಪತ್ರ ಪಡೆದ ನಂತರ ಅಂತಿಮ ರೂಪರೇಖಾ ನಕ್ಷೆಗೆ ಅನುಮೋದನೆ ನೀಡಲು ಪ್ರಾಧಿಕಾರದ ಸಭೆಗೆ ಮಂಡಿಸಿ ಕ್ರಮ ಕೈಗೊಳ್ಳಬಹುದಾಗಿರುತ್ತದೆ. ಎಂದು ಓದಿಕೊಳ್ಳುವುದು.

ಆಯುಕ್ತರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

ಅಧ್ಯಕ್ಷರು
ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ
ಚಿಕ್ಕಮಗಳೂರು.

# ದಿನಾಂಕ: 06-03-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳು.

**ಸಭೆಯಲ್ಲಿ ಹಾಜರಿದ್ದ ಸದಸ್ಯರು.**

| | | |
|---|---|---|
| 1 | ಶ್ರೀ ಸಿ. ಎಸ್. ರಂಗನಾಥ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಅಧ್ಯಕ್ಷರು |
| 2 | ಶ್ರೀ ಜಿ. ಲೋಕೇಶ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 3 | ಶ್ರೀ ಮದು ಕುಮಾರ್‌ರಾಜ್ ಅರಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 4 | ಶ್ರೀಮತಿ ವೀಣಾ ಶೆಟ್ಟಿ<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 5 | ಶ್ರೀ ರಾಜು<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 6 | ಶ್ರೀ ಶ್ರೀನಿವಾಸ್<br>ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಚಿಕ್ಕಮಗಳೂರು | ಸದಸ್ಯರು |
| 7 | ಪೌರ ಆಯುಕ್ತರು,<br>ನಗರ ಸಭೆ, ಚಿಕ್ಕಮಗಳೂರು. | ಸದಸ್ಯರು |
| 8 | ಸಹಾಯಕ ನಿರ್ದೇಶಕರು,<br>ನಗರ ಯೋಜನಾ ಇಲಾಖೆ, ಚಿಕ್ಕಮಗಳೂರು. (ನಗರ ಯೋಜನಾ ಸದಸ್ಯರು) | ಸದಸ್ಯರು |
| 9 | ಕಾರ್ಯಪಾಲಕ ಇಂಜಿನಿಯರ್,<br>ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಹಾಸನ<br>(ಪ್ರತಿನಿದಿ ಹಾಜರಿದ್ದರು). | ಸದಸ್ಯರು |
| 10 | ಆಯುಕ್ತರು,<br>ನಗರಾಭಿವೃದ್ಧಿ ಪ್ರಾಧಿಕಾರ, ಚಿಕ್ಕಮಗಳೂರು. | ಸದಸ್ಯರು |

**ಸಭೆಯಲ್ಲಿ ಹಾಜರಿಲ್ಲದ ಸದಸ್ಯರು.**

| | | |
|---|---|---|
| 1 | ಮಾನ್ಯ ಶ್ರೀ. ಡಿ. ಎಂ. ಪುಟ್ಟೇಗೌಡ,<br>ವಿಧಾನ ಪರಿಷತ್ ಸದಸ್ಯರು, ಚಿಕ್ಕಮಗಳೂರು. | ಸದಸ್ಯರು |
| 2 | ಮಾನ್ಯ ಶ್ರೀ. ಸಿ. ಟಿ. ರವಿ,<br>ಶಾಸಕರು, ಚಿಕ್ಕಮಗಳೂರು. | ಸದಸ್ಯರು |
| 3 | ಮಾನ್ಯ ಜಿಲ್ಲಾಧಿಕಾರಿಗಳು<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 4 | ಮಾನ್ಯ ಜಿಲ್ಲಾ ಪೋಲಿಸ್ ಸೂಪರಿಂಟೆಂಡೆಂಟ್,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |

| | | |
|---|---|---|
| 5 | ಕಾರ್ಯಪಾಲಕ ಇಂಜಿನಿಯರ್,<br>ಲೋಕೋಪಯೋಗಿ ಇಲಾಖೆ, ಚಿಕ್ಕಮಗಳೂರು. | ಇಂಜಿನಿಯರ್ ಸದಸ್ಯರು |
| 6 | ಕಾರ್ಯಪಾಲಕ ಇಂಜಿನಿಯರ್,<br>ಮೆಸ್ಕಾಂ, ಚಿಕ್ಕಮಗಳೂರು. | ಸದಸ್ಯರು |
| 7 | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಸದಸ್ಯರು |
| 8 | ಸೈಂಟಿಫಿಕ್ ಆಫೀಸರ್,<br>ಪ್ರಕೃತಿ ಮತ್ತು ಪರಿಸರ ಇಲಾಖೆ, ಬೆಂಗಳೂರು. | ಸದಸ್ಯರು |
| 9 | ಜಿಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು,<br>ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು. | ಆಹ್ವಾನಿತರು |

**ವಿಷಯ ನಂ 1.**

ದಿನಾಂಕ: 15-01-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸುವ ಬಗ್ಗೆ.

**ಟಿಪ್ಪಣಿ:**

ದಿನಾಂಕ: 15-01-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದು.

**ತೀರ್ಮಾನ :**

ದಿನಾಂಕ: 15-01-2009 ರಂದು ನಡೆದ ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸಿಕ ಸಭೆಯ ತೀರ್ಮಾನಗಳನ್ನು ಪ್ರಾಧಿಕಾರದ ಎಲ್ಲಾ ಸದಸ್ಯರಿಗೂ ಕಳುಹಿಸಿಕೊಡಲಾಗಿದೆ. ಸದರಿ ಸಭೆಯ ತೀರ್ಮಾನಗಳನ್ನು ಸ್ಥಿರೀಕರಿಸಬಹುದು.

**ವಿಷಯ ನಂ 2.**

2009 ನೇ ಸಾಲಿನ ಜನವರಿ ಮಾಹೆಯ ಆದಾಯ ಮತ್ತು ವೆಚ್ಚದ ವಿವರಗಳನ್ನು ಪರಿಶೀಲಿಸಿ ಅನುಮೋದಿಸುವ ಬಗ್ಗೆ.

**ಟಿಪ್ಪಣಿ:**

ಆದಾಯ ಮತ್ತು ಖರ್ಚಿನ ವಿವರಗಳನ್ನು ಅನುಬಂಧ (1) ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದಾಗಿದ್ದು ಸಭೆಗೆ ಮಂಡಿಸಿದೆ.

**ತೀರ್ಮಾನ :**

2009 ನೇ ಸಾಲಿನ ಜನವರಿ ಮಾಹೆಯ ಆದಾಯ ಮತ್ತು ವೆಚ್ಚದ ವಿವರಗಳನ್ನು ಅನುಬಂಧ (1) ರಲ್ಲಿ ತಯಾರಿಸಿ ಪರಿಶೀಲಿಸಿ ಲೆಕ್ಕ ಪರಿಶೋಧನಾ ಷರತ್ತಿಗೊಳಪಟ್ಟು ಅನುಮೋದಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 3.**

ಚಿಕ್ಕಮಗಳೂರು ತಾಲ್ಲೂಕು ರಾಮನಹಳ್ಳಿ ಗ್ರಾಮದ ಸರ್ವೆ ನಂ. 155, 156, 157 ಮತ್ತು 158 ರಲ್ಲಿನ 6 ಎಕರೆ 02 ಗುಂಟೆ ಭೂಮಿ ಪರಿಹಾರ ಪಾವತಿಸಲು ಪ್ರಾಧಿಕಾರದಲ್ಲಿ ಲಭ್ಯವಿರುವ ಹಣದಿಂದ ಪಾವತಿಸುವ ಬಗ್ಗೆ.

**ಟಿಪ್ಪಣಿ :**

ಪ್ರಾಧಿಕಾರದಲ್ಲಿ ದಿನಾಂಕ: 31-01-2009 ರ ಅಂತ್ಯಕ್ಕೆ ಎಸ್‌ಬಿ ಖಾತೆ ಹಾಗೂ ನಿಶ್ಚಿತ ಠೇವಣಿ ರೂಪದಲ್ಲಿ ಒಟ್ಟು ರೂ. 1,20,20,463=00 ಹಣ ಪ್ರಾಧಿಕಾರದಿಂದ ಖರ್ಚು ಮಾಡಲು ಲಭ್ಯವಿದೆ. ಈ ಮೊತ್ತದಿಂದ ಭೂಸ್ವಾದೀನಕ್ಕೆ ಪರಿಹಾರ ಠೇವಣಿ ಪಾವತಿಸಲು, ಪರಿಗಣಿಸಬಹುದು. ನಂತರ ಈ ಯೋಜನೆಯಿಂದ ಬರುವ ಹಣದಿಂದ ಈ ಖಾತೆಗೆ ವರ್ಗಾಯಿಸಬಹುದಾಗಿದೆ, ವಿಷಯವನ್ನು ಸಭೆಯ ಅನುಮೋದನೆಗೆ ಮಂಡಿಸಿದೆ.

**ತೀರ್ಮಾನ :**

ಚಿಕ್ಕಮಗಳೂರು ತಾಲ್ಲೂಕು ರಾಮನಹಳ್ಳಿ ಗ್ರಾಮದ ಸರ್ವೆ ನಂ. 155, 156, 157 ಮತ್ತು 158 ರಲ್ಲಿನ 6 ಎಕರೆ 02 ಗುಂಟೆ ಭೂಮಿ ಸ್ವಾಧೀನ ಪಡಿಸಿಕೊಳ್ಳಲು ಸಂಬಂದಪಟ್ಟ ಭೂಮಾಲೀಕರುಗಳಿಗೆ ಪ್ರಾಧಿಕಾರದಲ್ಲಿ ದಿನಾಂಕ: 31-01-2009 ರ ಅಂತ್ಯಕ್ಕೆ ಎಸ್.ಬಿ. ಖಾತೆ ಹಾಗೂ ನಿಶ್ಚಿತ ಠೇವಣಿ ರೂಪದಲ್ಲಿ ಒಟ್ಟು ರೂ. 1,20,20,463=00 ಹಣದಿಂದ ಪರಿಹಾರವನ್ನು ಈ ಹಿಂದೆ ರೈತರೊಂದಿಗೆ ಸಮಾಲೋಚನೆ ನಡೆಸಿದ ದರದಲ್ಲಿ ನೀಡಬಹುದೆಂದು ಸಭೆಯಲ್ಲಿ ದೀರ್ಘವಾಗಿ ಚರ್ಚಿಸಿ ನಂತರ ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 4.**

ಚಿಕ್ಕಮಗಳೂರು ನಗರದ ಕೆ. ಎಂ. ರಸ್ತೆಯಿಂದ ದಂಟರಮಕ್ಕಿ ಬಡಾವಣೆಗೆ ಹೋಗುವ ಕೂಡು ರಸ್ತೆಯಲ್ಲಿ ವೃತ್ತ ನಿರ್ಮಾಣ ಮಾಡಲು ಟೆಂಡರ್ ಕರೆದು ಅಭಿವೃದ್ಧಿ ಪಡಿಸುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರದ ಕೆ. ಎಂ. ರಸ್ತೆಯಿಂದ ದಂಟರಮಕ್ಕಿ ಬಡಾವಣೆಗೆ ಹೋಗುವ ಕೂಡು ರಸ್ತೆಯಲ್ಲಿ ವೃತ್ತ ನಿರ್ಮಾಣಕ್ಕೆ ಒಟ್ಟು 4.00 ಲಕ್ಷಗಳ ಅಂದಾಜು ಪಟ್ಟಿ ತಯಾರಿಸಿದ್ದು, ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಚಿಕ್ಕಮಗಳೂರು ಇವರಿಂದ ತಾಂತ್ರಿಕ ಅನುಮೋದನೆ ಪಡೆದು ನಿಯಮಾನುಸಾರ ಟೆಂಡರ್ ಕರೆದು, ಲಭ್ಯವಿರುವ ಪ್ರಾಧಿಕಾರದ ನಿಧಿಯಿಂದ ಭರಿಸಿ ವೃತ್ತ ನಿರ್ಮಿಸಲು ಅನುಮೋದನೆ ಪಡೆಯುವ ಬಗ್ಗೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಚಿಕ್ಕಮಗಳೂರು ನಗರದ ಕೆ. ಎಂ. ರಸ್ತೆಯಿಂದ ದಂಟರಮಕ್ಕಿ ಬಡಾವಣೆಗೆ ಹೋಗುವ ಕೂಡು ರಸ್ತೆಯಲ್ಲಿ ವೃತ್ತ ನಿರ್ಮಾಣಕ್ಕೆ ಒಟ್ಟು 3.99 ಲಕ್ಷ ರೂಗಳಿಗೆ ಅಂದಾಜು ಪಟ್ಟಿ ತಯಾರಿಸಿ ಸದರಿ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು ಲೋಕೋಪಯೋಗಿ ಇಲಾಖೆ ರವರಿಂದ ತಾಂತ್ರಿಕ ಮಂಜೂರಾತಿ ಪಡೆದು ನಿಯಮಾನುಸಾರ ಟೆಂಡರ್ ಕರೆದು ಲಭ್ಯವಿರುವ ಪ್ರಾಧಿಕಾರದ ನಿಧಿಯಿಂದ ವೆಚ್ಚ ಭರಿಸುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಿ ವೃತ್ತ ನಿರ್ಮಿಸಲು ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

**ವಿಷಯ ನಂ 5.**

ಶ್ರೀಮತಿ ಭವಾರಿಬಾಯಿ ಕೊಂ ಲೇಟ್ ಲಾಲ್‌ಚಂದ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 72 / P ರಲ್ಲಿನ 20.73 x 53.96 = 1118.59 ಚ. ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀಮತಿ ಭವಾರಿಬಾಯಿ ಕೊಂ ಲೇಟ್ ಲಾಲ್‌ಚಂದ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 72 / P ರಲ್ಲಿನ 20.73 x 53.96 = 1118.59 ಚ. ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನವನ್ನು ಸರ್ವೀಸ್ ಸ್ಟೇಷನ್ (ಕೈಗಾರಿಕೆಗೆ) ಅನುಮೋದನೆ ಕೋರಿರುತ್ತಾರೆ, ಸದರಿ ಜಾಗಕ್ಕೆ ಭೂ ಪರಿವರ್ತಿತ ಮಂಜೂರಾತಿ ಆದೇಶ ನೀಡಿರುತ್ತಾರೆ, ಈ ಜಾಗವು ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆಯಲ್ಲಿ ವಸತಿಗಾಗಿ ಕಾಯ್ದಿರಿಸಿದೆ, ಸದರಿ ಜಾಗದ ಸುತ್ತಮುತ್ತ ವಸತಿ ಬೆಳವಣಿಗೆಗಳು ಬಂದಿದ್ದು ವಸತಿ ವಲಯದಲ್ಲಿರುತ್ತದೆ. ಈ ಪ್ರಸ್ತಾವನೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 522 : ಮೈಅಪ್ರಾ : 2005, ದಿನಾಂಕ: 10-03-2006 ರನ್ವಯ ಶುಲ್ಕಗಳನ್ನು ಪಾವತಿಸಿಕೊಂಡು ಮತ್ತಿತರೆ ಷರತ್ತುಗಳಿಗೊಳಪಟ್ಟು ವಸತಿ ಏಕ ನಿವೇಶನ ಅನುಮೋದನೆ ನೀಡಲು ಸಭೆಯ ಮುಂದೆ ಮಂಡಿಸಿದೆ.

ದಿನಾಂಕ: 05-12-2008 ಮತ್ತು 15-01-2009 ರ ಸಭೆಯಲ್ಲಿ ಮಂಡಿಸಿ ಸದರಿ ಜಾಗವು ವಸತಿ ಪ್ರದೇಶಗಳಲ್ಲಿದ್ದು, 30 ಅಡಿ ಅಗಲದ ರಸ್ತೆಯನ್ನು ಹೊಂದಿರುವುದರಿಂದ ಸಂಚಾರ ವ್ಯವಸ್ಥೆಗೆ ಅಡಚಣೆಯಾಗುವುದರಿಂದ ಆಟೋಮೋಬೈಲ್ ಸರ್ವೀಸ್ ಇಂಡಸ್ಟ್ರೀಸ್ ಸ್ಥಾಪಿಸಲು ಅನುಮತಿ ನೀಡಬಾರದೆಂದು ತೀರ್ಮಾನಿಸಲಾಗಿದೆ, ಅದರಂತೆ ಶ್ರೀಮತಿ ಭವರಿಬಾಯಿ ಕೊಂ ಲೇಟ್ ಲಾಲ್‌ಚಂದ್ ಇವರು ಮತ್ತೊಮ್ಮೆ ಅರ್ಜಿ ಸಲ್ಲಿಸಿ ಸದರಿ ಕಟ್ಟಡದ ಬಳಿ ವಾಹನ ಪಾರ್ಕಿಂಗ್‌ಗಾಗಿ ಹೆಚ್ಚಿನ ಜಾಗ ಬಿಡಲು ವ್ಯವಸ್ಥೆ ಮಾಡುವುದಾಗಿ ತಿಳಿಸಿದ್ದು ಅದರಂತೆ ಪುನರ್ ಪರಿಶೀಲಿಸಿ ಮಂಜೂರಾತಿ ನೀಡಲು ಕೋರಿರುತ್ತಾರೆ ಅದರಂತೆ ಸದರಿ ವಿಷಯವನ್ನು ಸಭೆಯ ಮುಂದೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದಾಗಿರುತ್ತದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀಮತಿ ಭವಾರಿಬಾಯಿ ಕೊಂ ಲೇಟ್ ಲಾಲ್‌ಚಂದ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 72 / P ರಲ್ಲಿನ 20.73 x 53.96 = 1118.59 ಚ. ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನವನ್ನು ಆಟೋಮೋಬೈಲ್ ಸರ್ವೀಸ್ ಇಂಡಸ್ಟ್ರೀಸ್ (ಕೈಗಾರಿಕೆಗೆ) ಅಂದರೆ ದ್ವಿಚಕ್ರ ವಾಹನಗಳು ಮತ್ತು ಬೈಸಿಕಲ್ ಸರ್ವಿಸ್ ಹಾಗೂ ರಿಪೇರಿಗೆ ವಸತಿ ವಲಯದಲ್ಲಿ ಅವಕಾಶವಿರುತ್ತದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದನ್ವಯ ಕ್ರಮ ವಹಿಸಬಹುದು ಎಂದು ತಿಳಿಸಲಾಗಿತ್ತು, ಈ ಬಗ್ಗೆ ಪ್ರಾಧಿಕಾರದ ಸಭೆಯಲ್ಲಿ ಚರ್ಚಿಸಿ 9.00 ಮೀ ರಸ್ತೆಯನ್ನು 18.00 ಮೀಟರ್ ಅಗಲಕ್ಕೆ ವಿಸ್ತರಿಸಿ ದ್ವಿಚಕ್ರ ವಾಹನಗಳು ಮತ್ತು ಬೈಸಿಕಲ್ ಸರ್ವಿಸ್ ಹಾಗೂ ರಿಪೇರಿಗೆ ನೀಡಬಹುದೆಂದು ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿತ್ತು.

ಅರ್ಜಿದಾರರು ಈಗ ಸದರಿ ಸರ್ವಿಸ್ ಇಂಡಸ್ಟ್ರೀ ಬದಲಿಗೆ ಕೋಲ್ಡ್ ಸ್ಟೋರೇಜ್ ಮಾಡಿಕೊಳ್ಳುತ್ತೇವೆ ಎಂದು ಮನವಿ ಸಲ್ಲಿಸಿರುವುದು ಕಂಡು ಬಂದಿರುತ್ತದೆ, ವಸತಿ ವಲಯದಲ್ಲಿ ಕೋಲ್ಡ್ ಸ್ಟೋರೇಜ್‌ಗೆ ಅವಕಾಶ ಇರುತ್ತದೆ, ಈಗಾಗಲೇ ಅರ್ಜಿದಾರರು ಕೋರಿರುವಂತೆ ಆಟೋಮೋಬೈಲ್ ಸರ್ವಿಸ್ ಇಂಡಸ್ಟ್ರೀಸ್‌ಗೆ ಮನವಿ ಮಾಡಿರುವುದನ್ನು ರದ್ದುಪಡಿಸಿ ಬದಲಿಗೆ ಕೋಲ್ಡ್ ಸ್ಟೋರೇಜ್‌ಗೆ ಅವಕಾಶ ನೀಡಲು ಹಿಂದಿನ ಸಭೆಯಲ್ಲಿ ನಿರ್ಧರಿಸಿದಂತೆ 30 ಅಡಿ ರಸ್ತೆ ಸರ್ಕಾರಕ್ಕೆ ವಹಿಸಿಕೊಡುವ ಷರತ್ತು ವಿಧಿಸಿ ನೀಡಲು ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯ ಮುಂದೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮವಹಿಸಬಹುದಾಗಿರುತ್ತದೆ.

**ತೀರ್ಮಾನ :**

ಶ್ರೀಮತಿ ಭವಾರಿಬಾಯಿ ಕೊಂ ಲೇಟ್ ಲಾಲ್‌ಚಂದ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 72 / P ರಲ್ಲಿನ 20.73 x 53.96 = 1118.59 ಚ. ಮೀ ಅಳತೆಯ ಜಾಗಕ್ಕೆ ವಸತಿ ಏಕ ನಿವೇಶನ ಅನುಮೋದನೆ ಕೋರಿರುವ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ನಗರ ಸಭೆಯ ಸಭೆಯಲ್ಲೂ ಸಹ ವಿಷಯ ಪ್ರಸ್ತಾಪವಾಗಿ ಲೈಸನ್ಸ್ ನೀಡುವ ಬಗ್ಗೆ ತಿರಸ್ಕರಿಸಿದ್ದು ಅದರಂತೆ ಇಲ್ಲೂ ಸಹ ತಿರಸ್ಕರಿಸಬಹುದೆಂದು ನಗರ ಸಭೆಯ ಆಯುಕ್ತರು ತಿಳಿಸಿದರು.

ಪ್ರಾಧಿಕಾರದ ಅಧ್ಯಕ್ಷರು ಮಾತನಾಡಿ ಅರ್ಜಿದಾರರು ಕೋಲ್ಡ್ ಸ್ಟೋರೇಜ್ ನಿರ್ಮಾಣಕ್ಕೆ ಭೂ ಉಪಯೋಗಕ್ಕೆ ಅವಕಾಶ ಮಾಡಿಕೊಡಲು ಕೋರಿದ್ದು ನಿಯಮಾನುಸಾರ ಅರ್ಹರಿರುವುದರಿಂದ ಒಪ್ಪಿಗೆ ನೀಡಬಹುದಾಗಿದೆ ಎಂದರು ಸಭೆಯ ಇತರೆ ಸದಸ್ಯರು ಈ ಭೂಮಿಯಲ್ಲಿ ಗೋಡಾನ್ ನಿರ್ಮಾಣ ಮಾಡಿ ಭಾಡಿಗೆಗೆ ನೀಡಲು ಸದರೀ ಅರ್ಜಿದಾರರು ಪ್ರಯತ್ನಿಸುತ್ತಿದ್ದು ವಸತಿ ಪ್ರದೇಶದಲ್ಲಿ ಈ ಚಟುವಟಿಕೆಗೆಗಳಿಗೆ ಅವಕಾಶ ನೀಡದಿರುವುದು ಸೂಕ್ತವೆಂದು ತಿಳಿಸಿದರು, ನಗರ ಯೋಜನಾ ಸದಸ್ಯರು ಮಾತನಾಡಿ ವಲಯ ನಿಯಮಾವಳಿಗಳಲ್ಲಿ ವಸತಿ ಪ್ರದೇಶದಲ್ಲೂ ಸಹ ಕೋಲ್ಡ್ ಸ್ಟೋರೇಜ್ ನಿರ್ಮಾಣಕ್ಕೆ (ಲಘು) ಅವಕಾಶವಿದೆಯೆಂದು ತಿಳಿಸಿದರು ನಂತರ ಅಧ್ಯಕ್ಷರು ಮಾತನಾಡಿ ಸಭೆಯು ಕೋಲ್ಡ್ ಸ್ಟೋರೇಜ್ ಉದ್ದೇಶಕ್ಕೆ ಭೂ ಉಪಯೋಗ ಮಾಡಿಕೊಳ್ಳಲು ಒಪ್ಪಿಗೆ ನೀಡಬಹುದು ನಂತರ ಈ ಉದ್ದೇಶ ಬದಲಾವಣೆ ಮಾಡಿ (ಸಭೆಯಲ್ಲಿ ಸದಸ್ಯರು ಆರೋಪಿಸಿರುವಂತೆ ಗೋಡಾನ್ ಅಥವ ಸಾರಿಗೆ ಉಗ್ರಾಣ ಉದ್ದೇಶಕ್ಕೆ ಅಥವಾ ಬೇರಾವುದೇ ಉದ್ದೇಶಕ್ಕೆ ಬಳಸಬಾರದೆಂಬ ಬಗ್ಗೆ ಷರತ್ತು ವಿಧಿಸಿ) ಹಾಗೂ ಸದರಿ ಉಪಯೋಗಕ್ಕೆ ಉಪಯೋಗಿಸಿದಲ್ಲಿ ನಗರಸಭೆ ಮತ್ತು ಪ್ರಾಧಿಕಾರದ ವತಿಯಿಂದ ಸೂಕ್ತ ಕ್ರಮ ತೆಗೆದುಕೊಳ್ಳಬಹುದೆಂದು ತಿಳಿಸಿದರು ಮತ್ತು ಈ ಉದ್ದೇಶಕ್ಕೆ ಸದರಿ ಅರ್ಜಿದಾರರು ರಸ್ತೆಗಾಗಿ 30 ಅಡಿ ಜಾಗವನ್ನು ಸರ್ಕಾರಕ್ಕೆ ನೊಂದಣಿ ಮಾಡಿಸಿದ ನಂತರ ಅನುಮತಿ ನೀಡಲು ಷರತ್ತು ವಿಧಿಸುವಂತೆ ಸೂಚಿಸಿ ಸಭೆಯು ಸರ್ವಾನುಮತದಿಂದ ಒಪ್ಪಿಗೆ ನೀಡಿತು.

**ವಿಷಯ ನಂ 6.**

ಹಿರೇಮಗಳೂರು ಕಲ್ಯಾಣನಗರ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಲೇಔಟ್ ಪ್ಲಾನ್‌ನಲ್ಲಿ ಆಗಿರುವ ಲೋಪಗಳನ್ನು ಸರಿಪಡಿಸಲು ಹೊಸ ಪ್ಲಾನ್ ಸರ್ಕಾರಕ್ಕೆ ಸಲ್ಲಿಸಿದ್ದು ಈ ಬಗ್ಗೆ ಅನುಮೋದನೆ ನೀಡುವ ಬಗ್ಗೆ.

**ಟಿಪ್ಪಣಿ :**

ದಿನಾಂಕ: 25-08-2007 ರ ಸಭೆಯಲ್ಲಿ ಅನುಮೋದನೆ ಆಗಿರುವ ಲೇಔಟ್ ಪ್ಲಾನ್ ನಗರ ಯೋಜನಾ ಇಲಾಖೆಗೆ ಅನುಮೋದನೆಗೆ ಕಳುಹಿಸಲಾಗಿತ್ತು, ಕೆಲವು ಬದಲಾವಣೆಗಳೊಂದಿಗೆ ಅನುಮೋದನೆ ನೀಡಲಾಗಿತ್ತು. ಆದರೆ, ಭೂಮಿಯ ಮೇಲೆ ಗುರುತು ಹಾಕಲು ಪ್ರಾರಂಭಿಸಿದಾಗ ಕೆಲವು ತಪ್ಪುಗಳಾಗಿರುತ್ತದೆ ಮತ್ತು ಶೇಕಡ 42 ರಷ್ಟು ಮಾತ್ರ ಭೂಮಿ ಉಪಯೋಗಕ್ಕೆ ಅನುಮೋದಿಸಿದ್ದು, ಶೇಕಡ 53 ರಷ್ಟು ಭೂಮಿ ಉಪಯೋಗಕ್ಕೆ ಮನವಿ ಮಾಡಿ ದಿನಾಂಕ: 22-01-2009 ರಂದು ಕಳುಹಿಸಲಾಗಿದೆ. ಇದಕ್ಕೆ ಅನುಮೋದನೆ ನೀಡುವ ಬಗ್ಗೆ ಸಭೆಗೆ ಮಂಡಿಸಿದೆ.

**ತೀರ್ಮಾನ :**

ಹಿರೇಮಗಳೂರು ಕಲ್ಯಾಣನಗರ ವಸತಿ ಬಡಾವಣೆಯನ್ನು ಅಭಿವೃದ್ಧಿ ಪಡಿಸಲು ಲೇಔಟ್ ಪ್ಲಾನ್‌ನಲ್ಲಿ ಆಗಿರುವ ಲೋಪಗಳನ್ನು ಸರಿಪಡಿಸಲು ಹೊಸ ಪ್ಲಾನ್ ಸರ್ಕಾರಕ್ಕೆ ಸಲ್ಲಿಸಿದ್ದು ಈ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು, ದಿನಾಂಕ: 25-08-2007 ರ ಸಭೆಯಲ್ಲಿ ಅನುಮೋದನೆ ಆಗಿರುವ ಲೇಔಟ್ ಪ್ಲಾನ್ ನಗರ ಯೋಜನಾ ಇಲಾಖೆಗೆ ಅನುಮೋದನೆಗೆ ಕಳುಹಿಸಲಾಗಿತ್ತು, ಕೆಲವು ಬದಲಾವಣೆಗಳೊಂದಿಗೆ ಅನುಮೋದನೆ ನೀಡಲಾಗಿತ್ತು. ಆದರೆ, ಭೂಮಿಯ ಮೇಲೆ ಗುರುತು ಹಾಕಲು ಪ್ರಾರಂಭಿಸಿದಾಗ ಕೆಲವು ತಪ್ಪುಗಳಾಗಿದ್ದು ಶೇಕಡ 42 ರಷ್ಟು ಮಾತ್ರ ಭೂಮಿ ಉಪಯೋಗಕ್ಕೆ ಅನುಮೋದಿಸಿದ್ದು, ಶೇಕಡ 53 ರಷ್ಟು ಭೂಮಿ ಉಪಯೋಗಕ್ಕೆ ಮನವಿ ಮಾಡಿ ದಿನಾಂಕ: 22-01-2009 ರಂದು ಕಳುಹಿಸಿರುವ ಬಗ್ಗೆ ಅಂದರೆ ಹೊಸ ಲೇಔಟ್ ಪ್ಲಾನ್ ಬಗ್ಗೆ ಚರ್ಚಿಸಿ ನಂತರ ಸಭೆಯು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

**ವಿಷಯ ನಂ 7.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಸ್ಟರ್ ಪ್ಲಾನ್ ಕರಡು ಸರ್ಕಾರದಿಂದ ಅನುಮೋದನೆ ಆಗಿದ್ದು, ಕೆಟಿಸಿಪಿ ಕಾಯ್ದೆ 1961 ಕಲಂ 13 (1) ರಂತೆ ಸಾರ್ವಜನಿಕ ಆಕ್ಷೇಪಣೆಗಳನ್ನು ಕರೆಯುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರದ ಮಹಾ ಯೋಜನಾ ನಕ್ಷೆ ಪರಿಷ್ಕೃತ – 1 ರ ಕರಡು ನಕ್ಷೆಯು ದಿನಾಂಕ: 31-12-2008 ರಂದು ಅನುಮೋದನೆಯಾಗಿರುತ್ತದೆ, ಅದರಂತೆ ಕೆ.ಟಿ.ಸಿ.ಪಿ. ಕಾಯ್ದೆ 1961 ಕಲಂ 13 (1) ರಂತೆ ಸಾರ್ವಜನಿಕ ಆಕ್ಷೇಪಣೆಗಳನ್ನು ಕರೆಯಲು 60 ದಿನಗಳ ಕಾಲವಕಾಶವನ್ನು ನಿಗದಿಪಡಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಿದ ನಂತರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಅಂತಿಮ ಅನುಮೋದನೆ ಪಡೆಯಲು ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಸದರಿ ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರದ ಮಹಾ ಯೋಜನಾ ನಕ್ಷೆ ಪರಿಷ್ಕೃತ – 1 ರ ಕರಡು ನಕ್ಷೆಯು ದಿನಾಂಕ: 31-12-2008 ರಂದು ಅನುಮೋದನೆಯಾಗಿರುತ್ತದೆ, ಅದರಂತೆ ಕೆ.ಟಿ.ಸಿ.ಪಿ. ಕಾಯ್ದೆ 1961 ಕಲಂ 13 (1) ರಂತೆ ಸಾರ್ವಜನಿಕ ಆಕ್ಷೇಪಣೆಗಳನ್ನು ಕರೆಯಲು 60 ದಿನಗಳ ಕಾಲವಕಾಶವನ್ನು ನಿಗದಿಪಡಿಸಿ ಆಕ್ಷೇಪಣೆಗಳನ್ನು ಆಹ್ವಾನಿಸಿದ ನಂತರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಅಂತಿಮ ಅನುಮೋದನೆ ಪಡೆಯಲು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 8.**

ಪ್ರಾಧಿಕಾರದ ವ್ಯಾಪ್ತಿಯಲ್ಲಿ ಏಕ ನಿವೇಶನಗಳಿಗೆ ಅನುಮೋದನೆಗೆ ಮುನ್ನ ಸರ್ಕಾರದ ಆದೇಶ ಹಾಗೂ ಸುತ್ತೋಲೆ ದಿನಾಂಕ: 10-03-2006 ರಂತೆ ಅಭಿವೃದ್ಧಿ ಪಡಿಸುವ / ಶುಲ್ಕ ಪಾವತಿಸಿಕೊಳ್ಳುವ ಬಗ್ಗೆ.

**ಟಿಪ್ಪಣಿ.**

ಮಾನ್ಯ ಶಾಸಕರು ಚಿಕ್ಕಮಗಳೂರು ಇವರು ದಿನಾಂಕ: 03-02-2009 ರಂದು ನಗರ ಸಂಚಾರ ಸಂದರ್ಭದಲ್ಲಿ ಏಕ ನಿವೇಶನ ಅನುಮೋದನೆಯಿಂದ ವ್ಯವಸ್ಥಿತ ಅಭಿವೃದ್ಧಿ ಆಗುತ್ತಿಲ್ಲ ಎಂದು ಹೇಳಿ ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.

ದಿನಾಂಕ: 10-03-2006 ರ ಸರ್ಕಾರದ ಆದೇಶ ಹಾಗೂ ಸುತ್ತೋಲೆ ಅನ್ವಯ ಏಕ ನಿವೇಶನ ಅನುಮೋದನೆಗೆ ಕೆಲವು ಷರತ್ತುಗಳನ್ನು ವಿಧಿಸಿರುತ್ತದೆ. ರಸ್ತೆ ಚರಂಡಿ ನೀರು ಸರಬರಾಜು ಕಾಮಗಾರಿಗಳನ್ನು ತಮ್ಮ ವೆಚ್ಚದಲ್ಲಿ ನಿರ್ವಹಿಸಬೇಕು ಅಥವಾ ಸರ್ಕಾರದ ವಿವಿಧ ಇಲಾಖೆಗಳ ದರದಂತೆ ಹಣ ಪಾವತಿಸಿಕೊಂಡು ಅಭಿವೃದ್ಧಿ ಪಡೆಸಬೇಕು ಈ ಬಗ್ಗೆ ಪ್ರಾಧಿಕಾರವು ನಿವೇಶನ ಅನುಮೋದನೆ ನೀಡುವಾಗ ಸಂಬಂಧಿಸಿದ ಷರತ್ತುಗಳನ್ನು ದಾಖಲಿಸುತ್ತದೆ. ನಗರಸಭೆಯು ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡುವ ಮುನ್ನ ಈ ಶುಲ್ಕ ಪಾವತಿಸಿಕೊಳ್ಳಬೇಕಿದ್ದು, ಪಾವತಿಸಿಕೊಳ್ಳುತ್ತಿಲ್ಲ. ನಗರದ ಸುವ್ಯವಸ್ಥಿತ ಅಭಿವೃದ್ಧಿ ಪರಿಗಣಿಸಿ ಇನ್ನು ಮುಂದೆ ಈ ಹಣ ಪಾವತಿಸಿಕೊಳ್ಳಲು ಅಥವಾ ಅಭಿವೃದ್ಧಿ ಪಡಿಸಿದ ನಂತರ ಅನುಮೋದನೆ / ಪರವಾನಗಿ ನೀಡುವಾಗ ಸುವ್ಯಸ್ಥಿತ ನಗರ ಬೆಳವಣಿಗೆಯ ದೃಷ್ಟಿಯಿಂದ ನಿರ್ಣಯ ಕೈಗೊಳ್ಳಬೇಕೆಂದು ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಆಯುಕ್ತರು ಮಾತನಾಡಿ ಏಕ ನಿವೇಶನ ಅನುಮೋದನೆ ಸಂದರ್ಭದಲ್ಲಿ ನಿವೇಶನದ ವ್ಯಾಪ್ತಿಗೆ ಬರುವ ರಸ್ತೆ ಮತ್ತು ಚರಂಡಿ ನಿರ್ಮಾಣವನ್ನು ಆ ನಿವೇಶಷ ಮಾಲಿಕರೇ ಮಾಡಬೇಕಾಗಿರುತದೆ, ಆದರೆ ನಗರದ ಹಲವೆಡೆ ಯಾವುದೇ ಏಕ ನಿವೇಶನಗಳ ವ್ಯಾಪ್ತಿಯ ರಸ್ತೆ ಮತ್ತು ಚರಂಡಿ ಅಭಿವೃದ್ದಿಯನ್ನು ಮಾಲೀಕರು ಮಾಡುತ್ತಿಲ್ಲ ಈ ಬಗ್ಗೆ ದಿನಾಂಕ: 03-02-2009 ರಲ್ಲಿ ಮಾನ್ಯ ಶಾಸಕರು ಚಿಕ್ಕಮಗಳೂರು ರವರು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸಲಹೆ ಮಾಡಿರುತ್ತಾರೆ.

ದಿನಾಂಕ: 10-03-2006 ರ ಸರ್ಕಾರದ ಆದೇಶ ಹಾಗೂ ಸುತ್ತೋಲೆಗಳ ಅನ್ವಯ ಏಕ ನಿವೇಶನ ಅನುಮೊದನೆಗೆ ಕೆಲವು ಷರತ್ತುಗಳನ್ನು ವಿದಿಸಿ ಅದರಂತೆ ನಿವೇಶನದ ಮಾಲೀಕರು ರಸ್ತೆ ಹಾಗೂ ಚರಂಡಿ ನಿರ್ಮಾಣ ಮಾಡಬೇಕು ಅಥವಾ ಸಂಬಂಧಿಸಿದ ಇಲಾಖೆಗಳ ಅಂದಾಜು ಪಟ್ಟಿಯಂತೆ ವೆಚ್ಚವನ್ನು ಸ್ಥಳೀಯ ಸಂಸ್ಥೆ ಅಥವಾ ಪ್ರಾಧಿಕಾರಕ್ಕೆ ಪಾವತಿಸಬೇಕು, ಆದರೆ ಇದು ಅನುಷ್ಠಾನವಾಗುತ್ತಿರುವುದಿಲ್ಲ , ಏಕ ನಿವೇಶನ ಅನುಮೋದನೆ ನೀಡುವ ಸಂದರ್ಭಗಳಲ್ಲಿ ಪ್ರಾಧಿಕಾರದಿಂದ ಷರತ್ತು ವಿಧಿಸುತ್ತಿದ್ದು ನಗರ ಸಭೆ ಈ ವೆಚ್ಚ ಪಾವತಿ ಮಾಡಿದ ನಂತರ ಮನೆ ನಿರ್ಮಾಣ ಪರವಾನಗಿ ನೀಡಬೇಕಾಗಿರುತ್ತದೆ ಆದರೆ ನಗರ ಸಭೆ ಈ ವೆಚ್ಚವೂ ಪಾವತಿಸಿಕೊಳ್ಳಲು ಕ್ರಮ ಕೈಗೊಂಡಿರುವುದಿಲ್ಲ, ಆದ್ದರಿಂದ ನಗರಾಭಿವೃದ್ಧಿ ಪ್ರಾಧಿಕಾರದಿಂದಲೇ ಸದರಿ ವೆಚ್ಚವನ್ನು ಪಾವತಿಸಿಕೊಂಡು ನಿವೇಶನ ಅನುಮೋದನೆ ನೀಡಲು ಸಭೆಯಲ್ಲಿ ನಿರ್ಣಯ ಕೈಗೊಳ್ಳಬೇಕೆಂದು ತಿಳಿಸಿದರು, ಇದಕ್ಕೆ ಅಧ್ಯಕ್ಷರು ಹಾಗೂ ಸಭೆಯ ಸದಸ್ಯರು ತೀವ್ರ ವಿರೋದ ವ್ಯಕ್ತಪಡಿಸಿದರು, ಸದರಿ ವೆಚ್ಚವನ್ನು ಪಾವತಿಸಿಕೊಳ್ಳುವ ಅವಶ್ಯಕತೆ ಇಲ್ಲ ಮತ್ತು ಅದರ ಅಭಿವೃದ್ಧಿಗೆ ಸರಿಯಾದ ರೀತಿ ವೆಚ್ಚ ಮಾಡಲು ಸಹ ಕಷ್ಟವಾಗುತ್ತದೆ ಎಂದು ತಿಳಿಸಿದರು. ಆಯುಕ್ತರು ಮಾತನಾಡಿ ಸರ್ಕಾರದ ಆದೇಶ ಮತ್ತು ಸುತ್ತೋಲೆಗೆ ವಿರುದ್ದವಾಗಿ ನಿರ್ಣಯ ಕೈಗೊಳ್ಳಲು ಬರುವುದಿಲ್ಲವೆಂದು ತಿಳಿಸಿದರು, ಸಭೆಯ ಅಧ್ಯಕ್ಷರು ಮಾತನಾಡಿ ಈ ಆದೇಶದ ಅನ್ವಯ ಆಗುವ ವೆಚ್ಚವನ್ನು ಈ ಹಿಂದಿನಂತೆ ನಗರ ಸಭೆಯೇ ಪಾವತಿಸಿಕೊಳ್ಳಲಿ ಈ ಸಂಬಂಧ ಕಟ್ಟು ನಿಟ್ಟಾಗಿ ಪಾಲಿಸಲು ನಗರ ಸಭೆ ಸೂಕ್ತ ಕ್ರಮ ತೆಗೆದುಕೊಳ್ಳಲು ಕೋರಿ ಈ ನಿರ್ಣಯದಂತೆ ನಗರ ಸಭೆಗೆ ಪತ್ರ ಬರೆಯಬಹುದೆಂದು ತಿಳಿಸಿದರು ಅದರಂತೆ ಸಭೆಯು ಇದಕ್ಕೆ ಒಪ್ಪಿಗೆ ಸೂಚಿಸಿತು.

**ವಿಷಯ ನಂ 9.**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆ (ಹಿರೇಮಗಳೂರು 2 ನೇ ಹಂತದ ಬಡಾವಣೆ) ಅಭಿವೃದ್ಧಿ ಪಡಿಸುವ ಬಗ್ಗೆ.

**ಟಿಪ್ಪಣಿ :**

ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆಯನ್ನು ಹಿರೇಮಗಳೂರು ಗ್ರಾಮದ ಸರ್ವೆ ನಂ. 321, 322, 324 ಮತ್ತಿತರೆ ಸರ್ವೆ ನಂಬರುಗಳಲ್ಲಿನ ಸುಮಾರು 17 ಎ– 37½ ಗುಂಟೆ ಜಮೀನಿನಲ್ಲಿ ಒಟ್ಟು ರೂ. 4.73 ಕೋಟಿಗಳ ಕಾಮಗಾರಿ ಆರಂಭಿಸಲು ದಿನಾಂಕ: 05-01-2009 ರಂದು ಸರ್ಕಾರವು ಆಡಳಿತಾತ್ಮಕ ಅಂತಿಮ ಅನುಮೋದನೆ ನೀಡಿರುತ್ತದೆ, ಲೇಔಟ್ ಅಭಿವೃದ್ಧಿಗೆ ಈಗಾಗಲೇ ಗುರುತು ಕಾರ್ಯ ಆರಂಭಿಸಲಾಗಿದೆ. ಸಿವಿಲ್ ಕಾಮಗಾರಿಗಳಾದ ಚರಂಡಿ, ರಸ್ತೆ, ಮೋರಿ ನಿರ್ಮಾಣ ಕಾಮಗಾರಿ, ವಿದ್ಯುತ್ ಸಂಪರ್ಕ ಕಾಮಗಾರಿ ಮತ್ತು ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಟೆಂಡರ್ ಅನುಮೋದನೆಯಾಗುವ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲು ಮತ್ತು ಅಭಿವೃದ್ದಿಪಡಿಸಲು ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಚಿಕ್ಕಮಗಳೂರು ನಗರಾಭಿವೃದ್ದಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆಯನ್ನು ಹಿರೇಮಗಳೂರು ಗ್ರಾಮದ ಸರ್ವೆ ನಂ. 321, 322, 324 ಮತ್ತಿತರೆ ಸರ್ವೆ ನಂಬರುಗಳಲ್ಲಿನ ಸುಮಾರು 17 ಎ– 37½ ಗುಂಟೆ ಜಮೀನಿನಲ್ಲಿ ಒಟ್ಟು ರೂ. 4.73 ಕೋಟಿಗಳ ಕಾಮಗಾರಿ ಆರಂಭಿಸಲು ದಿನಾಂಕ: 05-01-2009 ರಂದು ಸರ್ಕಾರವು ಆಡಳಿತಾತ್ಮಕ ಅಂತಿಮ ಅನುಮೋದನೆ ನೀಡಿರುತ್ತದೆ, ಲೇಔಟ್ ಅಭಿವೃದ್ಧಿಗೆ ಈಗಾಗಲೇ ಗುರುತು ಕಾರ್ಯ ಆರಂಭಿಸಲಾಗಿದೆ. ಸಿವಿಲ್ ಕಾಮಗಾರಿಗಳಾದ ಚರಂಡಿ, ರಸ್ತೆ, ಮೋರಿ ನಿರ್ಮಾಣ ಕಾಮಗಾರಿ, ವಿದ್ಯುತ್ ಸಂಪರ್ಕ ಕಾಮಗಾರಿಗಳನ್ನು ನಿಯಮಾನುಸಾರ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಟೆಂಡರ್ ಅನುಮೋದನೆಯಾಗುವ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲು ಮತ್ತು ಅಭಿವೃದ್ದಿಪಡಿಸಿ ವೆಚ್ಚ ಭರಿಸಲು ತೀರ್ಮಾನಿಸಲಾಯಿತು.

ಆಯುಕ್ತರು ಮಾತನಾಡಿ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಯನ್ನು ಈಗಾಗಲೇ ಕೆ. ಎಂ. ಆರ್. ಪಿ. ಯೋಜನೆಯಡಿ ನಗರಸಭೆ ಮತ್ತು ಒಳಚರಂಡಿ ಮಂಡಳಿಯಿಂದ ನಗರದಲ್ಲಿ ಅನುಷ್ಠಾನಗೊಳಿಸಲು ಮುಂದಾಗಿದ್ದು ಈ ಹೊಸ ಲೇಔಟ್‌ಗೂ ಸಹ ಅದೇ ಯೋಜನೆಯಡಿ ಸೇರಿಸಿಕೊಂಡಲ್ಲಿ ಪ್ರಾಧಿಕಾರಕ್ಕೆ ಹಣ ಉಳಿತಾಯವಾಗುತ್ತದೆ ಅದನ್ನು ನಗರದ ಅಭಿವೃದ್ಧಿಗಳಿಗೆ ಬಳಸಿಕೊಳ್ಳಬಹುದಾಗಿರುತ್ತದೆ ಎಂದು ಒಳಚರಂಡಿ ಮಂಡಳಿಯ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಮನವಿ ಮಾಡಿದರು, ಸಹಾಯಕ ಕಾರ್ಯಪಾಲಕ ಅಭಿಯಂತರರು ಮಾತನಾಡುತ್ತ ಈ ಬಗ್ಗೆ ಪ್ರಸ್ತಾವನೆ ಬಂದಲ್ಲಿ ಚರ್ಚಿಸಿ ಪರಿಶೀಲಿಸಿ ಉತ್ತರಿಸಲಾಗುವುದು ಎಂದು ತಿಳಿಸಿದರು, ಮಂಡಳಿಯಿಂದ ಈ ಕಾಮಗಾರಿ ಕೈಗೊಳ್ಳಲು ಸಾದ್ಯವಾಗದಿದ್ದಲ್ಲಿ ನಿಯಮಾನುಸಾರ ಪ್ರಾಧಿಕಾರದಿಂದಲೇ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲು ಸಭೆ ಒಪ್ಪಿಗೆ ನೀಡಿತು.

**ವಿಷಯ ನಂ 10.**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆ (ಹಿರೇಮಗಳೂರು 2 ನೇ ಹಂತದ ಬಡಾವಣೆ) ಯಲ್ಲಿ ನಿವೇಶನ ಮಂಜೂರಾತಿಗೆ ಆಯ್ಕೆ ಉಪಸಮಿತಿ ರಚಿಸುವ ಬಗ್ಗೆ.

**ಟಿಪ್ಪಣಿ :**

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮಗಳು 1991 ರಂತೆ ನಿವೇಶನ ಹಂಚಿಕೆಗಾಗಿ ಪ್ರಾಧಿಕಾರದಿಂದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಉಪಸಮಿತಿ ರಚಿಸಲು ಅವಕಾಶವಿದ್ದು ಅದರಂತೆ ಒಟ್ಟು 5 ಸದಸ್ಯರ ಉಪಸಮಿತಿ ರಚಿಸಬಹುದಾಗಿರುತ್ತದೆ. ವಿಷಯವನ್ನು ಸಬೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರದ ಕಲ್ಯಾಣನಗರ ವಸತಿ ಬಡಾವಣೆ (ಹಿರೇಮಗಳೂರು 2 ನೇ ಹಂತದ ಬಡಾವಣೆ) ಯಲ್ಲಿ ನಿವೇಶನ ಮಂಜೂರಾತಿಗೆ ಆಯ್ಕೆ ಉಪಸಮಿತಿ ರಚಿಸುವ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮಗಳು 1991 ರಂತೆ ನಿವೇಶನ ಹಂಚಿಕೆಗಾಗಿ ಪ್ರಾಧಿಕಾರದಿಂದ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ಒಂದು ಉಪಸಮಿತಿ ರಚಿಸಲು ಅವಕಾಶವಿದ್ದು ಅದರಂತೆ ಅಧಿಕಾರಿಗಳ ವತಿಯಿಂದ 1) ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ, 2) ಸಹಾಯಕ ನಿರ್ದೇಶಕರು ನಗರ ಯೋಜನಾ ಇಲಾಖೆ ಚಿಕ್ಕಮಗಳೂರು. 3) ಸಹಾಯಕ ಅಭಿಯಂತರರು ಕರ್ನಾಟಕ ನಗರ ನೀ  ಸರಬರಾಜು ಮತ್ತು ಒಳಚರಂಡಿ ಮಂಡಳಿ ಚಿಕ್ಕಮಗಳೂರು. ಅದಿಕಾರೇತರ ವರ್ಗದಿಂದ  4) ಮಾನ್ಯ ಅಧ್ಯಕ್ಷರು ಸಮಿತಿಯ ಅಧ್ಯಕ್ಷರಾಗಿರುತ್ತಾರೆ, ಹಾಗೆಯೇ 5) ಶ್ರೀಮತಿ ವೀಣಾ ರತ್ನಾಕರ ಶೆಟ್ಟಿ ಸದಸ್ಯರಾಗಿ ಆಯ್ಕೆ ಮಾಡಲಾಗಿದ್ದು ಹೀಗೆ ಒಟ್ಟು 5 ಸದಸ್ಯರ ಉಪಸಮಿತಿ ರಚಿಸಿ ಮುಂದಿನ ಸಭೆಯಲ್ಲಿ ಆಯ್ಕೆ ವರದಿಯನ್ನು ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು.

**ವಿಷಯ ನಂ 11.**

ಶ್ರೀ ವೈ. ಬಿ. ಕುಮಾರಸ್ವಾಮಿ ಮತ್ತು ಶ್ರೀ ಎ. ಪ್ರಭಾಕರ್ ರವರುಗಳನ್ನು ದಿನಗೂಲಿ ಮಾಸಿಕ ವೇತನದ ನೌಕರರನ್ನು ಖಾಯಂಗೊಳಿಸುವ ಬಗ್ಗೆ.

**ಟಿಪ್ಪಣಿ :**

ಶ್ರೀ ವೈ. ಬಿ. ಕುಮಾರಸ್ವಾಮಿ ಹಾಗೂ ಶ್ರೀ ಎ. ಪ್ರಭಾಕರ್ ರವರು ದಿನಾಂಕ: 09-09-1992 ರಿಂದ ದಿನಗೂಲಿ ಮಾಸಿಕ ವೇತನ ಆದಾರದ ಮೇರೆಗೆ ಈ ಕಛೇರಿಯಲ್ಲಿ ಕ್ರಮವಾಗಿ ವರ್ಕ್ ಇನ್ಸ್‌ಪೆಕ್ಟರ್ ಹಾಗೂ 'ಡಿ' ದರ್ಜೆ ನೌಕರರಾಗಿ ಕೆಲಸ ನಿರ್ವಹಿಸುತ್ತಿದ್ದು, ನಂತರ ಗೌರವಾನ್ವಿತ ಕಾರ್ಮಿಕ ನ್ಯಾಯಾಲಯ ಹಾಗೂ ಹೈಕೋರ್ಟ್‌ಗಳ ತೀರ್ಪಿನ ಅನ್ವಯ ಶ್ರೀ ವೈ. ಬಿ. ಕುಮಾರಸ್ವಾಮಿ ಹಾಗೂ ಶ್ರೀ ಎ. ಪ್ರಭಾಕರ ರವರು ದಿನಗೂಲಿ ಮಾಸಿಕದರದಲ್ಲಿ ಮುಂದುವರಿಯುತ್ತಿದ್ದು, ನಂತರ ಪ್ರಾಧಿಕಾರದ ದಿನಾಂಕ: 07-08-2008 ರ ಸಭೆಯ ನಿರ್ಣಯದಂತೆ ಅವರುಗಳಿಗೆ 2007-08 ನೇ ಸಾಲಿನ ಲೋಕೋಪಯೋಗಿ ಇಲಾಖೆ ಹಾಸನ ವೃತ್ತದ ಎಸ್. ಆರ್. ದರದಂತೆ ವೇತನವನ್ನು ಆಗಷ್ಟ್ 2008 ರಿಂದ ಪಾವತಿಸಲಾಗುತ್ತಿದೆ.

ಮೇಲಿನ ಎರಡು ನೌಕರರಿಗೆ ಸಂಬಂಧಿಸಿದ ಹುದ್ದೆಗಳಾದ ವರ್ಕ್ ಇನ್ಸ್‌ಸ್ಪೆಕ್ಟರ್ ಹಾಗೂ 'ಡಿ' ದರ್ಜೆ ಹುದ್ದೆಗಳು ಸರ್ಕಾರದಿಂದ ಮಂಜೂರಾಗಿದ್ದು 2007-08 ನೇ ಸಾಲಿನವರೆಗೂ ಮುಂದುವರಿಯುತ್ತಿರುವುದರಿಂದ ಈ ಇಬ್ಬರು ನೌಕರರನ್ನು ಖಾಯಂಗೊಳಿಸುವ ಬಗ್ಗೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಶ್ರೀ ವೈ. ಬಿ. ಕುಮಾರಸ್ವಾಮಿ ಹಾಗೂ ಶ್ರೀ ಎ. ಪ್ರಭಾಕರ್ ರವರು ದಿನಾಂಕ: 09-09-1992 ರಿಂದ ದಿನಗೂಲಿ ಮಾಸಿಕ ವೇತನ ಆದಾರದ ಮೇರೆಗೆ ಈ ಕಛೇರಿಯಲ್ಲಿ ಕ್ರಮವಾಗಿ ವರ್ಕ್ ಇನ್ಸ್‌ಪೆಕ್ಟರ್ ಹಾಗೂ 'ಡಿ' ದರ್ಜೆ ನೌಕರರಾಗಿ ಕೆಲಸ ನಿರ್ವಹಿಸುತ್ತಿದ್ದು, ನಂತರ ಗೌರವಾನ್ವಿತ ಕಾರ್ಮಿಕ ನ್ಯಾಯಾಲಯ ಹಾಗೂ ಹೈಕೋರ್ಟ್‌ಗಳ ತೀರ್ಪಿನ ಅನ್ವಯ ಶ್ರೀ ವೈ. ಬಿ. ಕುಮಾರಸ್ವಾಮಿ ಹಾಗೂ ಶ್ರೀ ಎ. ಪ್ರಭಾಕರ ರವರು ದಿನಗೂಲಿ ಮಾಸಿಕದರದಲ್ಲಿ ಮುಂದುವರಿಯುತ್ತಿದ್ದಾರೆ, ಈ ಮದ್ಯೆ ಕುಮಾರಸ್ವಾಮಿಯವರನ್ನು ದಿನಾಂಕ: 31-12-2000 ರಿಂದ 31-08-2007 ವರೆಗೆ ಸೇವೆಯಿಂದ ತೆಗೆಯಲಾಗಿದ್ದು ಕೋರ್ಟ್ ಆದೇಶದಂತೆ ಮರು ನೇಮಕ ಮಾಡಲಾಗಿತ್ತು, ನಂತರ ಪ್ರಾಧಿಕಾರದ ದಿನಾಂಕ: 07-08-2008 ರ ಸಭೆಯ ನಿರ್ಣಯದಂತೆ ಅವರುಗಳಿಗೆ 2007-08 ನೇ ಸಾಲಿನ ಲೋಕೋಪಯೋಗಿ ಇಲಾಖೆ ಹಾಸನ ವೃತ್ತದ ಎಸ್. ಆರ್. ದರದಂತೆ ವೇತನವನ್ನು ಆಗಷ್ಟ್ 2008 ರಿಂದ ಪಾವತಿಸಲಾಗುತ್ತಿದೆ. ಮೇಲಿನ ಎರಡು ನೌಕರರಿಗೆ ಸಂಬಂಧಿಸಿದ ಹುದ್ದೆಗಳಾದ ವರ್ಕ್ ಇನ್ಸ್‌ಸ್ಪೆಕ್ಟರ್ ಹಾಗೂ 'ಡಿ' ದರ್ಜೆ ಹುದ್ದೆಗಳು ಸರ್ಕಾರದಿಂದ ಮಂಜೂರಾಗಿದ್ದು 2007-08 ನೇ ಸಾಲಿನವರೆಗೂ ಮುಂದುವರಿಯುತ್ತಿರುವುದರಿಂದ ಈ ಇಬ್ಬರು ನೌಕರರನ್ನು ಖಾಯಂಗೊಳಿಸುವ ಬಗ್ಗೆ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಯಿತು, ಸದರಿಯವರು ದಿನಗೂಲಿ ಮಾಸಿಕ ವೇತನದ ಆದಾರದ ಮೇಲೆ ಕೆಲಸ ನಿರ್ವಹಿಸುತ್ತಿದ್ದು ಸದರಿಯವರಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಜಿಲ್ಲಾ ಪರಿಶೀಲನಾ ಸಮಿತಿಗೆ ಪ್ರಸ್ತಾವನೆಯನ್ನು ಸಲ್ಲಿಸಿ ಖಾಯಂಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 12.**

2009-10 ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ಅನುಮೋದಿಸುವ ಬಗ್ಗೆ.

**ಟಿಪ್ಪಣಿ :**

2009-10 ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 43 ರ ಅನ್ವಯ ತಯಾರಿಸಲಾಗಿದೆ.

| | |
|---|---|
| ಆರಂಭದ ಶಿಲ್ಕು | 10,28,200=00. |
| 2009-10 ನೇ ಸಾಲಿನ ಅಂದಾಜು ಆಧಾಯ | 6,11,85,892=00. |
| ಒಟ್ಟು ಆದಾಯ | 6,22,14,092=00. |
| 2009-10 ನೇ ಸಾಲಿನ ಅಂದಾಜು ಖರ್ಚು | 6,08,78,000=00. |
| ಉಳಿತಾಯ (ಅಂತ್ಯದ ಶಿಲ್ಕು) | 13,36,092=00. |

ಆಯವ್ಯಯ ಪಟ್ಟಿಯಲ್ಲಿ ಸಂಕ್ಷಿಪ್ತ ವಿವರಗಳೊಂದಿಗೆ ತಯಾರಿಸಲಾಗಿದೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 44 ರ ಅನ್ವಯ ಪ್ರಾಧಿಕಾರದ ಅನುಮೋದನೆ ಪಡೆದುಕೊಂಡು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 124 : ಬೆಂರೂಪ್ರಾ : 2004 : ದಿನಾಂಕ: 13-12-2004 ರ ಅನ್ವಯ ಜಿಲ್ಲಾಧಿಕಾರಿಗಳವರ ಅನುಮೋದನೆ ಪಡೆಯಬೇಕಾಗಿರುತ್ತದೆ. ಆಯವ್ಯಯದ ಅಂದಾಜು ಪಟ್ಟಿಯನ್ನು ತಯಾರಿಸಿ ಪ್ರಾಧಿಕಾರದ ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

2009-10 ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 43 ರ ಅನ್ವಯ ಆಯವ್ಯಯ ಪಟ್ಟಿಯಲ್ಲಿ ಸಂಕ್ಷಿಪ್ತ ವಿವರಗಳೊಂದಿಗೆ ತಯಾರಿಸಲಾಗಿದೆ.

| | |
|---|---|
| ಆರಂಭದ ಶಿಲ್ಕು | 10,28,200=00. |
| 2009-10 ನೇ ಸಾಲಿನ ಅಂದಾಜು ಆಧಾಯ | 6,11,85,892=00. |
| ಒಟ್ಟು ಆದಾಯ | 6,22,14,092=00. |
| 2009-10 ನೇ ಸಾಲಿನ ಅಂದಾಜು ಖರ್ಚು | 6,08,78,000=00. |
| ಉಳಿತಾಯ (ಅಂತ್ಯದ ಶಿಲ್ಕು) | 13,36,092=00. |

ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 ರ ಪ್ರಕರಣ 44 ರ ಅನ್ವಯ ಪ್ರಾಧಿಕಾರದ ಅನುಮೋದನೆ ಪಡೆದುಕೊಂಡು ಸರ್ಕಾರದ ಸುತ್ತೋಲೆ ಸಂಖ್ಯೆ. ನಅಇ : 124 : ಬೆಂರೂಪ್ರಾ : 2004 : ದಿನಾಂಕ: 13-12-2004 ರ ಅನ್ವಯ ಹಾಗೂ ಆಯವ್ಯಯದ ಅಂದಾಜು ಪಟ್ಟಿಯನ್ನು ತಯಾರಿಸಿ ಜಿಲ್ಲಾಧಿಕಾರಿಗಳವರ ಅನುಮೋದನೆ ಪಡೆಯಲು ಹಾಗೂ ಸರ್ಕಾರಕ್ಕೆ ಸಲ್ಲಿಸಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 13.**

ಶ್ರೀ ಆರ್. ಗುಣಶೇಖರ್ ಬಿನ್ ಬಿ. ಸಿ. ರಾಜು ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 134 / 3 ರಲ್ಲಿನ 00 ಎಕರೆ 34 ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ (ವಸತಿ) ಉದ್ದೇಶಕ್ಕಾಗಿ ಭೂಪರಿವರ್ತನೆಗೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀ ಆರ್. ಗುಣಶೇಖರ್ ಬಿನ್ ಬಿ. ಸಿ. ರಾಜು ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 134 / 3 ರಲ್ಲಿನ 00 ಎಕರೆ 34 ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ (ವಸತಿ) ಉದ್ದೇಶಕ್ಕಾಗಿ ಭೂಪರಿವರ್ತನೆಗೆ ಕೋರಿರುತ್ತಾರೆ, ಸದರಿ ಜಾಗಕ್ಕೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ರವರ ಕಛೇರಿಯ ಪತ್ರ ಸಂಖ್ಯೆ.ಎ2 : ಎಎಲ್ಎನ್ : ಸಿಆರ್ : 94 : 2008-09, ದಿನಾಂಕ: 29-12-2008 ರಲ್ಲಿ ಭೂಉಪಯೋಗದ ಬಗ್ಗೆ ಮಾಹಿತಿ ಕೋರಿರುತ್ತಾರೆ, ಸದರಿ ಜಾಗವು ಚಿಕ್ಕಮಗಳೂರು ಪಟ್ಟಣದ ವ್ಯಾಪಕಾಭಿವೃದ್ಧಿ ಯೋಜನೆ ನಕ್ಷೆಯಲ್ಲಿ ವಸತಿಗಾಗಿ ಕಾಯ್ದಿರಿಸಿದೆ, ಆದರೆ ಈಗಾಗಲೇ ತಯಾರಿಸಿರುವ ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆ ಪರಿಷ್ಕೃತ–1 (ತಾತ್ಕಾಲಿಕ) ಯೋಜನೆ ನಕ್ಷೆಯು ಸರ್ಕಾರದಿಂದ ಅನುಮೋದನೆಯಾಗಿದ್ದು ಈ ನಕ್ಷೆಯಲ್ಲಿ ಸದರಿ ಜಾಗವನ್ನು ಉದ್ಯಾನವನ ಉಪಯೋಗಕ್ಕಾಗಿ (ಕಾರ್ಟಾಗ್ರಫಿಕ್ ಎರರ್‌ನಿಂದ) ಕಾಯ್ದಿರಿಸಿದೆ, ಈ ಕುರಿತು ಸದರಿ ಭೂ ಉಪಯೋಗವನ್ನು ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿರುವಂತೆ ವಸತಿಗಾಗಿ ಕಾಯ್ದಿರಿಸಿ ಅರ್ಜಿದಾರರು ಕೋರಿರುವಂತೆ ಈ ಕಛೇರಿಯ ಅಭಿಪ್ರಾಯವನ್ನು ನೀಡುವ ಸಂಬಂದ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದೆಂದು ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಆರ್. ಗುಣಶೇಖರ್ ಬಿನ್ ಬಿ. ಸಿ. ರಾಜು ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 134 / 3 ರಲ್ಲಿನ 00 ಎಕರೆ 34 ಗುಂಟೆ ವಿಸ್ತೀರ್ಣದ ಜಮೀನು ಹಿಂದೆ ಚಿಕ್ಕಮಗಳೂರು ಪಟ್ಟಣಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ಧಿ ಯೋಜನಾ ನಕ್ಷೆಯಲ್ಲಿ ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಿದೆ, ಇತ್ತೀಚೆಗೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆ (ತಾತ್ಕಾಲಿಕ) ನಕ್ಷೆಯಲ್ಲಿ ಸದರಿ ಜಮೀನಿನಲ್ಲಿ ಬಫರನ್ನು ತೋರಿಸಲಾಗಿದೆ, ಸದರಿ ಜಮೀನಿನ ಪಶ್ಚಿಮದಲ್ಲಿ ನಾಲಾ ಹಾದು ಹೋಗಿದ್ದು, ಇದರ ಅಕ್ಕ ಪಕ್ಕ ಬಫರ್‌ಗಾಗಿ ಜಾಗವನ್ನು ನಿಗದಿಪಡಿಸುವ ಸಮಯದಲ್ಲಿ ಕಾರ್ಟಾಗ್ರಫಿಕ್ ಎರರ್‌ನಿಂದ ಸದರಿ ಜಮೀನಿಗೆ ಬಫರ್‌ನ ಬಣ್ಣ (ಹಸಿರು) ಬಂದಿರುತ್ತದೆ, ಹಿಂದೆ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ವಸತಿ ಉದ್ದೇಶಕ್ಕೆ ಕಾಯ್ದಿರಿಸಿರುವುದರಿಂದ ಮಹಾ ಯೋಜನೆ ಪರಿಷ್ಕೃತ–1 (ಅಂತಿಮ) ನಕ್ಷೆ ತಯಾರಿಸುವ ಸಮಯದಲ್ಲಿ ವಸತಿ ಉದ್ದೇಶಕ್ಕೆ (ನಾಲಾ ಅಕ್ಕ ಪಕ್ಕ ಬಫರ್ ತೋರಿಸಿ ಉಳಿದ ಜಮೀನಿಗೆ ಮಾತ್ರ ವಸತಿ ಉದ್ದೇಶಕ್ಕೆ) ಪರಿಗಣಿಸಬಹುದಾಗಿರುತ್ತದೆ, ಈಗ ವಸತಿ ಉದ್ದೇಶಕ್ಕೆ ಅಭಿಪ್ರಾಯ ನೀಡುವ ಸಂಬಂದ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದನ್ವಯ ಕ್ರಮವಹಿಸಬಹುದಾಗಿರುತ್ತದೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀ ಆರ್. ಗುಣಶೇಖರ್ ಬಿನ್ ಬಿ. ಸಿ. ರಾಜು ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 134 / 3 ರಲ್ಲಿನ 00 ಎಕರೆ 34 ಗುಂಟೆ ವಿಸ್ತೀರ್ಣದ ಜಮೀನು ಹಿಂದೆ ಚಿಕ್ಕಮಗಳೂರು ಪಟ್ಟಣಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ಧಿ ಯೋಜನಾ ನಕ್ಷೆಯಲ್ಲಿ ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಿದೆ, ಇತ್ತೀಚೆಗೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆ (ತಾತ್ಕಾಲಿಕ) ನಕ್ಷೆಯಲ್ಲಿ ಸದರಿ ಜಮೀನಿನಲ್ಲಿ ಬಫರನ್ನು ತೋರಿಸಲಾಗಿದೆ, ಸದರಿ ಜಮೀನಿನ ಪಶ್ಚಿಮದಲ್ಲಿ ನಾಲಾ ಹಾದು ಹೋಗಿದ್ದು, ಇದರ ಅಕ್ಕ ಪಕ್ಕ ಬಫರ್‌ಗಾಗಿ ಜಾಗವನ್ನು ನಿಗದಿಪಡಿಸುವ ಸಮಯದಲ್ಲಿ ಕಾರ್ಟಾಗ್ರಫಿಕ್ ಎರರ್‌ನಿಂದ ಸದರಿ ಜಮೀನಿಗೆ ಬಫರ್‌ನ ಬಣ್ಣ (ಹಸಿರು) ಬಂದಿರುತ್ತದೆ, ಹಿಂದೆ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ವಸತಿ ಉದ್ದೇಶಕ್ಕೆ ಕಾಯ್ದಿರಿಸಿರುವುದರಿಂದ ಮಹಾ ಯೋಜನೆ ಪರಿಷ್ಕೃತ–1 (ಅಂತಿಮ) ನಕ್ಷೆ ತಯಾರಿಸುವ ಸಮಯದಲ್ಲಿ ವಸತಿ ಉದ್ದೇಶಕ್ಕೆ (ನಾಲಾ ಅಕ್ಕ ಪಕ್ಕ ಬಫರ್ ತೋರಿಸಿ ಉಳಿದ ಜಮೀನಿಗೆ ಮಾತ್ರ ವಸತಿ ಉದ್ದೇಶಕ್ಕೆ) ಪರಿಗಣಿಸಬಹುದೆಂದು ಹಾಗೂ ಅದರಂತೆ ಭೂಪರಿವರ್ತನೆಗೆ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 14.**

ಶ್ರೀ ಸಿ. ರಾಜು ಬಿನ್ ಚಿನ್ನಕಣ್ಣರೆಡ್ಡಿ ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 134 / 2 ರಲ್ಲಿನ 00 ಎಕರೆ 21 ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ (ವಸತಿ) ಉದ್ದೇಶಕ್ಕಾಗಿ ಭೂಪರಿವರ್ತನೆಗೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀ ಸಿ. ರಾಜು ಬಿನ್ ಚಿನ್ನಕಣ್ಣರೆಡ್ಡಿ ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 134 / 2 ರಲ್ಲಿನ 00 ಎಕರೆ 21 ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ (ವಸತಿ) ಉದ್ದೇಶಕ್ಕಾಗಿ ಭೂಪರಿವರ್ತನೆಗೆ ಕೋರಿರುತ್ತಾರೆ, ಸದರಿ ಜಾಗಕ್ಕೆ ಮಾನ್ಯ ಜಿಲ್ಲಾಧಿಕಾರಿಗಳು ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ರವರ ಕಛೇರಿಯ ಪತ್ರ ಸಂಖ್ಯೆ.ಎ2 : ಎಎಲ್‌ಎನ್ : ಸಿಆರ್ : 93 : 2008-09, ದಿನಾಂಕ: 29-12-2008 ರಲ್ಲಿ ಭೂಉಪಯೋಗದ ಬಗ್ಗೆ ಮಾಹಿತಿ ಕೋರಿರುತ್ತಾರೆ, ಸದರಿ ಜಾಗವು ಚಿಕ್ಕಮಗಳೂರು ಪಟ್ಟಣದ ವ್ಯಾಪಕಾಭಿವೃದ್ಧಿ ಯೋಜನೆ ನಕ್ಷೆಯಲ್ಲಿ ವಸತಿಗಾಗಿ ಕಾಯ್ದಿರಿಸಿದೆ. ಸದರಿ ಜಾಗಕ್ಕೆ ಹಾಲಿ 9.00 ಮೀ ಅಗಲದ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿದ್ದು, ವಸತಿ ಬೆಳವಣಿಗೆಗಳಿಗೆ ಹೊಂದಿಕೊಂಡಿರುತ್ತದೆ, ಸದರಿ ಜಾಗವು ಸರ್ಕಾರದಿಂದ ದಿನಾಂಕ: 31-12-2008 ರಂದು ಅನುಮೋದನೆಯಾಗಿರುವ ಚಿಕ್ಕಮಗಳೂರು ಪಟ್ಟಣದ ಮಹಾ ಯೋಜನೆ ಪರಿಷ್ಕೃತ– 1 (ತಾತ್ಕಾಲಿಕ) ಯೋಜನೆ ನಕ್ಷೆಯಲ್ಲಿ ಉದ್ಯಾನವನ ಉಪಯೋಗಕ್ಕಾಗಿ (ಕಾರ್ಟಾಗ್ರಫಿಕ್ ಎರರ್‌ನಿಂದ) ಕಾಯ್ದಿರಿಸಿದೆ, ಈ ಕುರಿತು ಸದರಿ ಭೂ ಉಪಯೋಗವನ್ನು ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿರುವಂತೆ ವಸತಿಗಾಗಿ ಕಾಯ್ದಿರಿಸಿ ಅರ್ಜಿದಾರರು ಕೋರಿರುವಂತೆ ಈ ಕಛೇರಿಯ ಅಭಿಪ್ರಾಯವನ್ನು ನೀಡುವ ಸಂಬಂದ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬಹುದೆಂದು ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಸಿ. ರಾಜು ಬಿನ್ ಚಿನ್ನಕಣ್ಣರೆಡ್ಡಿ ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 134 / 2 ರಲ್ಲಿನ 00 ಎಕರೆ 21 ಗುಂಟೆ ವಿಸ್ತೀರ್ಣದ ಜಮೀನು ಹಿಂದೆ ಚಿಕ್ಕಮಗಳೂರು ಪಟ್ಟಣಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ಧಿ ಯೋಜನಾ ನಕ್ಷೆಯಲ್ಲಿ ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಿದೆ, ಇತ್ತೀಚೆಗೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆ (ತಾತ್ಕಾಲಿಕ) ನಕ್ಷೆಯಲ್ಲಿ ಸದರಿ ಜಮೀನಿನಲ್ಲಿ ಬಫರನ್ನು ತೋರಿಸಲಾಗಿದೆ, ಸದರಿ ಜಮೀನಿನ ಪಶ್ಚಿಮದಲ್ಲಿ ನಾಲಾ ಹಾದು ಹೋಗಿರುತ್ತದೆ.

ಸದರಿ ಜಮೀನಿನ ಅಕ್ಕ ಪಕ್ಕ ಬಫರ್‌ಗಾಗಿ ಜಾಗವನ್ನು ನಿಗದಿಪಡಿಸುವ ಸಮಯದಲ್ಲಿ ಕಾರ್ಟಾಗ್ರಫಿಕ್ ಎರರ್‌ನಿಂದ ಸದರಿ ಜಮೀನಿಗೆ ಬಫರ್‌ನ ಬಣ್ಣ (ಹಸಿರು) ಬಂದಿರುತ್ತದೆ, ಹಿಂದೆ ವ್ಯಾಪಕಾಭಿವೃದ್ಧಿ ಯೋಜನಾ ನಕ್ಷೆಯಲ್ಲಿ ವಸತಿ ಉದ್ದೇಶಕ್ಕೆ ಕಾಯ್ದಿರಿಸಿರುವುದರಿಂದ ಮಹಾ ಯೋಜನೆ ಪರಿಷ್ಕೃತ – 1 (ಅಂತಿಮ) ನಕ್ಷೆ ತಯಾರಿಸುವ ಸಮಯದಲ್ಲಿ ವಸತಿ ಉದ್ದೇಶಕ್ಕೆ (ನಾಲಾ ಅಕ್ಕ ಪಕ್ಕ ಬಫರ್ ತೋರಿಸಿ ಉಳಿದ ಜಮೀನಿಗೆ ಮಾತ್ರ ವಸತಿ ಉದ್ದೇಶಕ್ಕೆ) ಪರಿಗಣಿಸಬಹುದಾಗಿರುತ್ತದೆ, ಈಗ ವಸತಿ ಉದ್ದೇಶಕ್ಕೆ ಅಭಿಪ್ರಾಯ ನೀಡುವ ಸಂಬಂದ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದನ್ವಯ ಕ್ರಮವಹಿಸಬಹುದಾಗಿರುತ್ತದೆ ವಿಷಯವನ್ನು ಸಭೆಯ ಮುಂದೆ ಮಂಡಿಸಿದೆ.

**ತೀರ್ಮಾನ :**

ಶ್ರೀ ಸಿ. ರಾಜು ಬಿನ್ ಚಿನ್ನಕಣ್ಣರೆಡ್ಡಿ ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 134 / 2 ರಲ್ಲಿನ 00 ಎಕರೆ 21 ಗುಂಟೆ ವಿಸ್ತೀರ್ಣದ ಜಮೀನನ್ನು ವ್ಯವಸಾಯೇತರ (ವಸತಿ) ಉದ್ದೇಶಕ್ಕಾಗಿ ಭೂಪರಿವರ್ತನೆಗೆ ಕೋರಿರುವ ವಿಷಯವನ್ನು ಚರ್ಚಿಸಲಾಯಿತು.

ಸದರಿ ಜಾಗಕ್ಕೆ ಹಾಲಿ 9.00 ಮೀ ಅಗಲದ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿದ್ದು, ವಸತಿ ಬೆಳವಣಿಗೆಗಳಿಗೆ ಹೊಂದಿಕೊಂಡಿರುತ್ತದೆ, ಸದರಿ ಜಾಗವು ಸರ್ಕಾರದಿಂದ ದಿನಾಂಕ: 31-12-2008 ರಂದು ಅನುಮೋದನೆಯಾಗಿರುವ ಚಿಕ್ಕಮಗಳೂರು ಪಟ್ಟಣಕ್ಕೆ ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ದಿ ಯೋಜನಾ ನಕ್ಷೆಯಲ್ಲಿ ವಸತಿ ಉದ್ದೇಶಕ್ಕಾಗಿ ಕಾಯ್ದಿರಿಸಿದೆ, ಇತ್ತೀಚೆಗೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆ (ತಾತ್ಕಾಲಿಕ) ನಕ್ಷೆಯಲ್ಲಿ ಸದರಿ ಜಮೀನಿನಲ್ಲಿ ಬಫರನ್ನು ತೋರಿಸಲಾಗಿದೆ, ಸದರಿ ಜಮೀನಿನ ಪಶ್ಚಿಮದಲ್ಲಿ ನಾಲಾ ಹಾದು ಹೋಗಿದ್ದು, ಇದರ ಅಕ್ಕ ಪಕ್ಕ ಬಫರ್‌ಗಾಗಿ ಜಾಗವನ್ನು ನಿಗದಿಪಡಿಸುವ ಸಮಯದಲ್ಲಿ ಕಾರ್ಟಾಗ್ರಫಿಕ್ ಎರರ್‌ನಿಂದ ಸದರಿ ಜಮೀನಿಗೆ ಬಫರ್‌ನ ಬಣ್ಣ (ಹಸಿರು) ಬಂದಿರುತ್ತದೆ, ಹಿಂದೆ ವ್ಯಾಪಕಾಭಿವೃದ್ದಿ ಯೋಜನೆಯಲ್ಲಿ ವಸತಿ ಉದ್ದೇಶಕ್ಕೆ ಕಾಯ್ದಿರಿಸಿರುವುದರಿಂದ ಮಹಾ ಯೋಜನೆ ಪರಿಷ್ಕೃತ–1 (ಅಂತಿಮ) ನಕ್ಷೆ ತಯಾರಿಸುವ ಸಮಯದಲ್ಲಿ ವಸತಿ ಉದ್ದೇಶಕ್ಕೆ (ನಾಲಾ ಅಕ್ಕ ಪಕ್ಕ ಬಫರ್ ತೋರಿಸಿ ಉಳಿದ ಜಮೀನಿಗೆ ಮಾತ್ರ ವಸತಿ ಉದ್ದೇಶಕ್ಕೆ) ಪರಿಗಣಿಸಬಹುದೆಂದು ಅದರಂತೆ ಭೂಪರಿವರ್ತನೆಗೆ ಅನುಮೋದನೆ ನೀಡಬಹುದೆಂದು ಸಭೆಯಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

**ವಿಷಯ ನಂ 15.**

ಜಿಲ್ಲಾ ಕುಂಭಾರರ ಕ್ಷೇಮಾಭಿವೃದ್ದಿ ಸಂಘ ರಿ., ಚಿಕ್ಕಮಗಳೂರು ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 274 / 1P1 ರಲ್ಲಿನ 00 ಎಕರೆ 08.08 ಗುಂಟೆ ವಿಸ್ತೀರ್ಣದ ಜಮೀನನ್ನು ಶಾಲಾ ಉದ್ದೇಶಕ್ಕೆ (ನರ್ಸರಿ ಶಾಲೆ) ನಿರ್ಮಾಣ ಮಾಡಲು ಅನುಮತಿ ಕೋರಿರುವ ಬಗ್ಗೆ.

**ಟಿಪ್ಪಣಿ :**

ಜಿಲ್ಲಾ ಕುಂಭಾರರ ಕ್ಷೇಮಾಭಿವೃದ್ದಿ ಸಂಘ ರಿ., ಚಿಕ್ಕಮಗಳೂರು ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 274 / 1P1 ರಲ್ಲಿನ 00 ಎಕರೆ 08.08 ಗುಂಟೆ ವಿಸ್ತೀರ್ಣದ ಜಮೀನನ್ನು ಶಾಲಾ ಉದ್ದೇಶಕ್ಕೆ (ನರ್ಸರಿ ಶಾಲೆ) ನಿರ್ಮಾಣ ಮಾಡಲು ಅನುಮತಿ ಕೋರಿರುತ್ತಾರೆ, ಸದರಿ ಜಾಗವು 9.00 ಮೀ ಅಗಲದ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿದ್ದು ಕೃಷಿ ವಲಯದಲ್ಲಿರುತ್ತದೆ, ಈ ಸಂಬಂಧ ಅರ್ಜಿದಾರರು ಕೋರಿರುವಂತೆ ಕೃಷಿ ವಲಯದಲ್ಲಿ ಶಾಲೆಯನ್ನು ನಿರ್ಮಿಸಲು ವಲಯ ನಿಯಮಾವಳಿ ಪುಟ ಸಂಖ್ಯೆ. 65 (ಬಿ) ರಂತೆ ಅವಕಾಶವಿರುತ್ತದೆ, ಅಂದರೆ ಸದರೀ ಜಮೀನನ್ನು ಕೃಷಿವಲಯದಲ್ಲಿ ಕಾಯ್ದಿರಿಸಿದ್ದು ವಿಶೇಷ ಸಂದರ್ಭಗಳಲ್ಲಿ ಸದರಿ ಭೂಮಿಯನ್ನು ಶಾಲೆಗಾಗಿ (ನರ್ಸರಿ ಶಾಲೆ) ಭೂ ಪರಿವರ್ತಿಸಲು ಪ್ರಾಧಿಕಾರದ ಸಭೆಯಲ್ಲಿ ವಿಷಯವನ್ನು ಮಂಡಿಸಿ ಸಭೆಯ ನಿರ್ಣಯದಂತೆ ಮಾನ್ಯ ಜಿಲ್ಲಾಧಿಕಾರಿಗಳಿಗೆ ವರದಿ ಮಂಡಿಸಬಹುದಾಗಿರುತ್ತದೆ, ವಿಷಯವನ್ನು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಜಿಲ್ಲಾ ಕುಂಭಾರರ ಕ್ಷೇಮಾಭಿವೃದ್ಧಿ ಸಂಘ ರಿ., ಚಿಕ್ಕಮಗಳೂರು ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 274 / 1P1 ರಲ್ಲಿನ 00 ಎಕರೆ 08.08 ಗುಂಟೆ ವಿಸ್ತೀರ್ಣದ ಜಮೀನನ್ನು ಶಾಲಾ ಉದ್ದೇಶಕ್ಕೆ (ನರ್ಸರಿ ಶಾಲೆ) ನಿರ್ಮಾಣ ಮಾಡಲು ಕೋರಿರುವ ಜಾಗಕ್ಕೆ 9.00 ಮೀ ಅಗಲದ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿದ್ದು ಈ ಜಮೀನು ಸರ್ಕಾರದಿಂದ ಅನುಮೋದನೆಯಾಗಿರುವ ವ್ಯಾಪಕಾಭಿವೃದ್ಧಿ ಯೋಜನೆಯಲ್ಲಿ ಕೃಷಿ ವಲಯದಲ್ಲಿರುತ್ತದೆ, ಇತ್ತೀಚೆಗೆ ಸರ್ಕಾರದಿಂದ ಅನುಮೋದನೆಯಾಗಿರುವ ಮಹಾ ಯೋಜನೆ ಪರಿಷ್ಕೃತ–1 (ತಾತ್ಕಾಲಿಕ) ನಕ್ಷೆಯಲ್ಲಿ ವಸತಿ ವಲಯದಲ್ಲಿರುತ್ತದೆ, ಅರ್ಜಿದಾರರಿಗೆ ನರ್ಸರಿ ಶಾಲಾ ಉದ್ದೇಶಕ್ಕೆ ಭೂಪರಿವರ್ತಿಸಿಕೊಳ್ಳಲು ಕೃಷಿ ವಲಯದಲ್ಲಿಯೂ ವಲಯ ನಿಯಮಾವಳಿಗಳ ಪ್ರಕಾರ ಅವಕಾಶ ಇರುತ್ತದೆ, ವಸತಿ ವಲಯದಲ್ಲಿಯೂ ಅವಕಾಶ ಇದೆ, ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಕ್ರಮ ವಹಿಸಬೇಕಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು ಜಿಲ್ಲಾ ಕುಂಭಾರರ ಕ್ಷೇಮಾಭಿವೃದ್ಧಿ ಸಂಘ ರಿ., ಚಿಕ್ಕಮಗಳೂರು ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 274 / 1P1 ರಲ್ಲಿನ 00 ಎಕರೆ 08.08 ಗುಂಟೆ ವಿಸ್ತೀರ್ಣದ ಜಮೀನು ಕೃಷಿ ವಲಯದಲ್ಲಿ ಕಾಯ್ದಿರಿಸಿದ್ದು, ಸದರಿ ಪ್ರಸ್ತಾವನೆಯನ್ನು ವಿಶೇಷ ಸಂದರ್ಭಗಳಲ್ಲಿ ಸಾಂಸ್ಕೃತಿಕ ಕೇಂದ್ರ ನಿರ್ಮಾಣಕ್ಕೆ ಅವಕಾಶವಿರುತ್ತದೆ, ಸಮುದಾಯ ಭವನ ನಿರ್ಮಾಣ ಸಾಂಸ್ಕೃತಿಕ ಕೇಂದ್ರ ನಿರ್ಮಾಣದ ಒಂದು ಭಾಗವಾಗಿದ್ದು ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಮೀಸಲಿಡುವಬಗ್ಗೆ ಪ್ರಮಾಣ ಪತ್ರ ಪಡೆದು ಭೂ ಪರಿವರ್ತಿಸಲು ಪ್ರಾಧಿಕಾರದ ಅಭಿಪ್ರಾಯ ನೀಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

## ಅಧ್ಯಕ್ಷರ ಅಪ್ಪಣೆ ಪಡೆದು ಚರ್ಚಿಸಲಾದ ಇತರೆ ವಿಷಯಗಳು.

**ವಿಷಯ ನಂ. 01.**

ಶ್ರೀ ಅಶ್ರಫ್ ಉಲ್ ಇಸ್ಲಾಮ್ ಬಿನ್ ಗುಲಾಮ್ ರಸೂಲ್ ಸಾಹೇಬ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 39 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀ ಅಶ್ರಫ್ ಉಲ್ ಇಸ್ಲಾಮ್ ಬಿನ್ ಗುಲಾಮ್ ರಸೂಲ್ ಸಾಹೇಬ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 39 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿರುತ್ತಾರೆ, ಸದರಿ ಜಾಗವು ಸಾಯಿ ಮಧುವನ ವಸತಿ ಬಡಾವಣೆಗೆ ಹೊಂದಿಕೊಂಡಿದ್ದು ವಸತಿ ವಲಯದಲ್ಲಿರುತ್ತದೆ, ಈ ಜಮೀನನ್ನು ತಹಶೀಲ್ದಾರ್ ಚಿಕ್ಕಮಗಳೂರು ತಾಲ್ಲೂಕು ಇವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿರುತ್ತಾರೆ, ಅದರಂತೆ ಸದರಿ ಜಮೀನಿಗೆ ವಸತಿ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸಲು ಕ್ರಮವಹಿಸಬಹುದಾಗಿದ್ದು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಅಶ್ರಫ್ ಉಲ್ ಇಸ್ಲಾಮ್ ಬಿನ್ ಗುಲಾಮ್ ರಸೂಲ್ ಸಾಹೇಬ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 39 ಗುಂಟೆ ವಿಸ್ತೀರ್ಣದ ಪ್ರದೇಶದ ಸ್ಥಳ ಪರಿಶೀಲಿಸಲಾಯಿತು, ಸದರಿ ಜಾಗವು ಸಾಯಿ ಮಧುವನ ವಸತಿ ಬಡಾವಣೆಗೆ ಹೊಂದಿಕೊಂಡಿದ್ದು ವಸತಿ ವಲಯದಲ್ಲಿರುತ್ತದೆ, ಸದರಿ ಪ್ರಸ್ತಾವನೆಗೆ ಸಂಬಂಧಿಸಿದ ಅಗತ್ಯ ದಾಖಲಾತಿಗಳನ್ನು ಅರ್ಜಿದಾರರಿಂದ ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಬಹುದಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು ಶ್ರೀ ಅಶ್ರಫ್ ಉಲ್ ಇಸ್ಲಾಮ್ ಬಿನ್ ಗುಲಾಮ್ ರಸೂಲ್ ಸಾಹೇಬ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 39 ಗುಂಟೆ ವಿಸ್ತೀರ್ಣದ ಭೂಮಿಯ ಪಕ್ಕದಲ್ಲಿ ದೊಡ್ಡ ನಾಲೆ ಇದ್ದು ಅದರ ಪಕ್ಕದಲ್ಲಿ ಒಂದು ಸರ್ವಿಸ್ ರಸ್ತೆ ಸಹ ಇರುವುದಾಗಿ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು ಮತ್ತು ನಾಲೆ ತುಂಬಿದಾಗ ಮಳೆ ನೀರು ಹರಿಯಲು ಒಂದು ಸಣ್ಣ ನಾಲೆ ಅಡ್ಡವಾಗಿರುವುದನ್ನು ಮುಚ್ಚಲಾಗಿದ್ದು ಈ ಬಗ್ಗೆ ಸಹ ಪರಿಶೀಲನೆ ಮಾಡಬೇಕೆಂದು ಸಹ ತಿಳಿಸಿದರು. ನಗರ ಯೋಜನಾ ಸದಸ್ಯರು ಮಾತನಾಡಿ ನಿಯಮಾವಳಿಗಳ ಅನ್ವಯ ನಾಲೆ, ಸರ್ವಿಸ್ ರಸ್ತೆ ಎಲ್ಲಾ ಪರಿಶೀಲಿಸುವುದಾಗಿ ಹಾಗೂ ವಸತಿ ವಿನ್ಯಾಸಕ್ಕೆ ಸಂಬಂದಿಸಿದಂತೆ ಇನ್ನೂ ಕೆಲವು ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕಿದ್ದು, ಅರ್ಜಿದಾರರು ಎಲ್ಲಾ ದಾಖಲಾತಿಗಳನ್ನು ನಿಖರವಾಗಿ ಸಲ್ಲಿಸಿದ ನಂತರ ಪರಿಶೀಲಿಸಿ ಮುಂದಿನ ಸಭೆಯಲ್ಲಿ ವಿಷಯ ಮಂಡಿಸಲು ತೀರ್ಮಾನಿಸಲಾಯಿತು.

**ವಿಷಯ ನಂ. 02.**

ಶ್ರೀ ಪರಹನ್ ತಾರೀಮ್ ಬಿನ್ ಅಕ್ತರ್ ಉಲ್ ಇಸ್ಲಾಂ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 105 / 2 ರಲ್ಲಿನ 00 ಎಕರೆ 39 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀ ಪರಹನ್ ತಾರೀಮ್ ಬಿನ್ ಅಕ್ತರ್ ಉಲ್ ಇಸ್ಲಾಂ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 105 / 2 ರಲ್ಲಿನ 00 ಎಕರೆ 39 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿರುತ್ತಾರೆ, ಸದರಿ ಜಾಗವು ಸಾಯಿ ಮಧುವನ ವಸತಿ ಬಡಾವಣೆಗೆ ಹೊಂದಿಕೊಂಡಿದ್ದು ವಸತಿ ವಲಯದಲ್ಲಿರುತ್ತದೆ, ಈ ಜಮೀನನ್ನು ತಹಶೀಲ್ದಾರ್ ಚಿಕ್ಕಮಗಳೂರು ತಾಲ್ಲೂಕು ಇವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿರುತ್ತಾರೆ. ಅದರಂತೆ ಸದರಿ ಜಮೀನಿಗೆ ವಸತಿ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸಲು ಕ್ರಮವಹಿಸಬಹುದಾಗಿದ್ದು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಪರಹನ್ ತಾರೀಮ್ ಬಿನ್ ಅಕ್ತರ್ ಉಲ್ ಇಸ್ಲಾಂ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 105 / 2 ರಲ್ಲಿನ 00 ಎಕರೆ 39 ಗುಂಟೆ ವಿಸ್ತೀರ್ಣದ ಪ್ರದೇಶದ ಸ್ಥಳ ಪರಿಶೀಲಿಸಲಾಯಿತು, ಸದರಿ ಜಾಗವು ಸಾಯಿ ಮಧುವನ ವಸತಿ ಬಡಾವಣೆಗೆ ಹೊಂದಿಕೊಂಡಿದ್ದು ವಸತಿ ವಲಯದಲ್ಲಿರುತ್ತದೆ, ಸದರಿ ಪ್ರಸ್ತಾವನೆಗೆ ಸಂಬಂಧಿಸಿದ ಅಗತ್ಯ ದಾಖಲಾತಿಗಳನ್ನು ಅರ್ಜಿದಾರರಿಂದ ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಬಹುದಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು ಶ್ರೀ ಪರಹನ್ ತಾರೀಮ್ ಬಿನ್ ಅಕ್ತರ್ ಉಲ್ ಇಸ್ಲಾಂ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 105 / 2 ರಲ್ಲಿನ 00 ಎಕರೆ 39 ಗುಂಟೆ ವಿಸ್ತೀರ್ಣದ ಭೂಮಿಯ ಪಕ್ಕದಲ್ಲಿ ದೊಡ್ಡ ನಾಲೆ ಇದ್ದು ಅದರ ಪಕ್ಕದಲ್ಲಿ ಒಂದು ಸರ್ವಿಸ್ ರಸ್ತೆ ಸಹ ಇರುವುದಾಗಿ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು ಮತ್ತು ನಾಲೆ ತುಂಬಿದಾಗ ಮಳೆ ನೀರು ಹರಿಯಲು ಒಂದು ಸಣ್ಣ ನಾಲೆ ಅಡ್ಡವಾಗಿರುವುದನ್ನು ಮುಚ್ಚಲಾಗಿದ್ದು ಈ ಬಗ್ಗೆ ಸಹ ಪರಿಶೀಲನೆ ಮಾಡಬೇಕೆಂದು ಸಹ ತಿಳಿಸಿದರು. ನಗರ ಯೋಜನಾ ಸದಸ್ಯರು ಮಾತನಾಡಿ ನಿಯಮಾವಳಿಗಳ ಅನ್ವಯ ನಾಲೆ, ಸರ್ವಿಸ್ ರಸ್ತೆ ಎಲ್ಲಾ ಪರಿಶೀಲಿಸುವುದಾಗಿ ಹಾಗೂ ವಸತಿ ವಿನ್ಯಾಸಕ್ಕೆ ಸಂಬಂದಿಸಿದಂತೆ ಇನ್ನೂ ಕೆಲವು ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕಿದ್ದು, ಅರ್ಜಿದಾರರು ಎಲ್ಲಾ ದಾಖಲಾತಿಗಳನ್ನು ನಿಖರವಾಗಿ ಸಲ್ಲಿಸಿದ ನಂತರ ಪರಿಶೀಲಿಸಿ ಮುಂದಿನ ಸಭೆಯಲ್ಲಿ ವಿಷಯ ಮಂಡಿಸಲು ತೀರ್ಮಾನಿಸಲಾಯಿತು.

**ವಿಷಯ ನಂ. 03.**

ಶ್ರೀ ಸೈಯದ್ ಷಾಹಿದ್ ಸಾದಿಕ್ ಅಶ್ರಫ್ ಬಿನ್ ಅಶ್ರಫ್ ಉಲ್ಲಾ ಇಸ್ಲಾಮ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 17 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀ ಸೈಯದ್ ಷಾಹಿದ್ ಸಾದಿಕ್ ಅಶ್ರಫ್ ಬಿನ್ ಅಶ್ರಫ್ ಉಲ್ಲಾ ಇಸ್ಲಾಮ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 17 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿರುತ್ತಾರೆ, ಸದರಿ ಜಾಗವು ಸಾಯಿ ಮಧುವನ ವಸತಿ ಬಡಾವಣೆಗೆ ಹೊಂದಿಕೊಂಡಿದ್ದು ವಸತಿ ವಲಯದಲ್ಲಿರುತ್ತದೆ, ಈ ಜಮೀನನ್ನು ತಹಶೀಲ್ದಾರ್ ಚಿಕ್ಕಮಗಳೂರು ತಾಲ್ಲೂಕು ಇವರು ವಸತಿಗಾಗಿ ಭೂ ಅನ್ಯಕ್ರಾಂತ ಮಂಜೂರಾತಿ ನೀಡಿರುತ್ತಾರೆ, ಆದರಂತೆ ಸದರಿ ಜಮೀನಿಗೆ ವಸತಿ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸಲು ಕ್ರಮವಹಿಸಬಹುದಾಗಿದ್ದು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಸೈಯದ್ ಷಾಹಿದ್ ಸಾದಿಕ್ ಅಶ್ರಫ್ ಬಿನ್ ಅಶ್ರಫ್ ಉಲ್ಲಾ ಇಸ್ಲಾಮ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 17 ಗುಂಟೆ ವಿಸ್ತೀರ್ಣದ ಪ್ರದೇಶದ ಸ್ಥಳ ಪರಿಶೀಲಿಸಲಾಯಿತು, ಸದರಿ ಜಾಗವು ಸಾಯಿ ಮಧುವನ ವಸತಿ ಬಡಾವಣೆಗೆ ಹೊಂದಿಕೊಂಡಿದ್ದು ವಸತಿ ವಲಯದಲ್ಲಿರುತ್ತದೆ, ಸದರಿ ಪ್ರಸ್ತಾವನೆಗೆ ಸಂಬಂಧಿಸಿದ ಅಗತ್ಯ ದಾಖಲಾತಿಗಳನ್ನು ಅರ್ಜಿದಾರರಿಂದ ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಬಹುದಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು ಶ್ರೀ ಸೈಯದ್ ಷಾಹಿದ್ ಸಾದಿಕ್ ಅಶ್ರಫ್ ಬಿನ್ ಅಶ್ರಫ್ ಉಲ್ಲಾ ಇಸ್ಲಾಮ್ ಇವರು ಚಿಕ್ಕಮಗಳೂರು ಗ್ರಾಮದ ಸರ್ವೆ ನಂ. 106 ರಲ್ಲಿನ 00 ಎಕರೆ 17 ಗುಂಟೆ ವಿಸ್ತೀರ್ಣದ ಭೂಮಿಯ ಪಕ್ಕದಲ್ಲಿ ದೊಡ್ಡ ನಾಲೆ ಇದ್ದು ಅದರ ಪಕ್ಕದಲ್ಲಿ ಒಂದು ಸರ್ವಿಸ್ ರಸ್ತೆ ಸಹ ಇರುವುದಾಗಿ ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದರು ಮತ್ತು ನಾಲೆ ತುಂಬಿದಾಗ ಮಳೆ ನೀರು ಹರಿಯಲು ಒಂದು ಸಣ್ಣ ನಾಲೆ ಅಡ್ಡವಾಗಿರುವುದನ್ನು ಮುಚ್ಚಲಾಗಿದ್ದು ಈ ಬಗ್ಗೆ ಸಹ ಪರಿಶೀಲನೆ ಮಾಡಬೇಕೆಂದು ಸಹ ತಿಳಿಸಿದರು. ನಗರ ಯೋಜನಾ ಸದಸ್ಯರು ಮಾತನಾಡಿ ನಿಯಮಾವಳಿಗಳ ಅನ್ವಯ ನಾಲೆ, ಸರ್ವಿಸ್ ರಸ್ತೆ ಎಲ್ಲಾ ಪರಿಶೀಲಿಸುವುದಾಗಿ ಹಾಗೂ ವಸತಿ ವಿನ್ಯಾಸಕ್ಕೆ ಸಂಬಂದಿಸಿದಂತೆ ಇನ್ನೂ ಕೆಲವು ಅಗತ್ಯ ದಾಖಲಾತಿಗಳನ್ನು ಸಲ್ಲಿಸಬೇಕಿದ್ದು, ಅರ್ಜಿದಾರರು ಎಲ್ಲಾ ದಾಖಲಾತಿಗಳನ್ನು ನಿಖರವಾಗಿ ಸಲ್ಲಿಸಿದ ನಂತರ ಪರಿಶೀಲಿಸಿ ಮುಂದಿನ ಸಭೆಯಲ್ಲಿ ವಿಷಯ ಮಂಡಿಸಲು ತೀರ್ಮಾನಿಸಲಾಯಿತು.

**ವಿಷಯ ನಂ. 04.**

ಶ್ರೀ ಎಸ್. ಆರ್. ತೆರದಾಳ್ ಬಿನ್ ಲೇಟ್ ರಾಜಪ್ಪ ಹೆಚ್. ಪಿ. ಗ್ಯಾಸ್ ಏಜೆನ್ಸಿ ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು 119 ರಲ್ಲಿನ 01 ಎಕರೆ 22 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿರುವ ಬಗ್ಗೆ.

**ಟಿಪ್ಪಣಿ :**

ಶ್ರೀ ಎಸ್. ಆರ್. ತೆರದಾಳ್ ಬಿನ್ ಲೇಟ್ ರಾಜಪ್ಪ ಹೆಚ್. ಪಿ. ಗ್ಯಾಸ್ ಏಜೆನ್ಸಿ ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು 119 ರಲ್ಲಿನ 01 ಎಕರೆ 22 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಸತಿ ವಿನ್ಯಾಸ ಅನುಮೋದನೆ ಕೋರಿರುತ್ತಾರೆ, ಸದರಿ ಜಾಗವು ಉಪ್ಪಳ್ಳಿ ವಸತಿ ಬಡಾವಣೆಯಲ್ಲಿದ್ದು ವಸತಿ ವಲಯದಲ್ಲಿರುತ್ತದೆ. ಈ ಸಂಬಂಧ ಅರ್ಜಿದಾರರಿಂದ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ಏಕ ನಿವೇಶನ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ಸದರಿ ಪ್ರದೇಶವು ಹಾಲಿ 9.00 ಮೀ ಅಗಲದ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿದ್ದು ವಸತಿ ವಲಯದಲ್ಲಿರುತ್ತದೆ, ಸದರಿ ಜಮೀನಿಗೆ ವಸತಿ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ದಾಖಲಾತಿಗಳನ್ನು ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸಲು ಕ್ರಮವಹಿಸಬಹುದಾಗಿದ್ದು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಎಸ್. ಆರ್. ತೆರದಾಳ್ ಬಿನ್ ಲೇಟ್ ರಾಜಪ್ಪ ಹೆಚ್. ಪಿ. ಗ್ಯಾಸ್ ಏಜೆನ್ಸಿ ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು 119 ರಲ್ಲಿನ 01 ಎಕರೆ 22 ಗುಂಟೆ ವಿಸ್ತೀರ್ಣದ ಪ್ರದೇಶದ ಸ್ಥಳ ಪರಿಶೀಲಿಸಲಾಯಿತು, ಸದರಿ ಜಾಗವು ಉಪ್ಪಳ್ಳಿ ವಸತಿ ಬಡಾವಣೆಯಲ್ಲಿದ್ದು ವಸತಿ ವಲಯದಲ್ಲಿರುತ್ತದೆ. ಈ ಸಂಬಂಧ ಅರ್ಜಿದಾರರಿಂದ ಅಗತ್ಯ ದಾಖಲಾತಿಗಳನ್ನು ಪರಿಶೀಲಿಸಿ ಏಕ ನಿವೇಶನ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ಸದರಿ ಪ್ರದೇಶವು ಹಾಲಿ 9.00 ಮೀ ಅಗಲದ ರಸ್ತೆಯಿಂದ ರಸ್ತೆ ಸಂಪರ್ಕ ಹೊಂದಿದ್ದು ವಸತಿ ವಲಯದಲ್ಲಿರುತ್ತದೆ, ಸದರಿ ಪ್ರಸ್ತಾವನೆಗೆ ಸಂಬಂಧಿಸಿದ ಅಗತ್ಯ ದಾಖಲಾತಿಗಳನ್ನು ಅರ್ಜಿದಾರರಿಂದ ಪಡೆದು ನಿಯಮಾನುಸಾರ ವಿನ್ಯಾಸವನ್ನು ಅನುಮೋದಿಸುವ ಸಂಬಂಧ ಸದರಿ ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ನಿರ್ಣಯದಂತೆ ಮುಂದಿನ ಕ್ರಮ ವಹಿಸಲು ವಿಷಯವನ್ನು ಪ್ರಾಧಿಕಾರದ ಸಭೆಯಲ್ಲಿ ಮಂಡಿಸಬಹುದಾಗಿರುತ್ತದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಶ್ರೀ ಎಸ್. ಆರ್. ತೆರದಾಳ್ ಬಿನ್ ಲೇಟ್ ರಾಜಪ್ಪ ಹೆಚ್. ಪಿ. ಗ್ಯಾಸ್ ಏಜೆನ್ಸಿ ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 118 ಮತ್ತು 119 ರಲ್ಲಿನ 01 ಎಕರೆ 22 ಗುಂಟೆ ವಿಸ್ತೀರ್ಣದ ಪ್ರದೇಶದ ಸ್ಥಳಕ್ಕೆ ಸಂಬಂದಪಟ್ಟಂತೆ ಅವಶ್ಯಕವಿರುವ ಇನ್ನು ಕೆಲವು ದಾಖಲಾತಿಗಳನ್ನು ಅರ್ಜಿದಾರರಿಂದ ಪಡೆದು ನಿಖರವಾದ ತಾಂತ್ರಿಕ ಅಭಿಪ್ರಾಯದೊಂದಿಗೆ ಮುಂದಿನ ಸಭೆಗೆ ಮಂಡಿಸುವಂತೆ ತೀರ್ಮಾನಿಸಲಾಯಿತು.

**ವಿಷಯ ನಂ 5.**

ಶ್ರೀ ಬಿ. ಎನ್. ವೀರೇಗೌಡ ಬಿನ್ ನಿಂಗೇಗೌಡ ಚಿಕ್ಕೇಮನೆ ಚಿಕ್ಕಮಗಳೂರು ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 139 ರಲ್ಲಿನ ಸುಮಾರು 01 ಎಕರೆ – 18 ಗುಂಟೆ ಜಮೀನಿಗೆ ಪರಿಷ್ಕೃತ ವಸತಿ ವಿನ್ಯಾಸಕ್ಕೆ ಅನುಮೋದನೆ ಕೋರಿರುವ ಕುರಿತು.

**ಟಿಪ್ಪಣಿ:**

ಶ್ರೀ ಬಿ. ಎನ್. ವೀರೇಗೌಡ ಬಿನ್ ನಿಂಗೇಗೌಡ ಚಿಕ್ಕೇಮನೆ ಇವರು ಚಿಕ್ಕಮಗಳೂರು ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 139 ರಲ್ಲಿನ ಸುಮಾರು 01 ಎಕರೆ – 18 ಗುಂಟೆ ಜಮೀನಿಗೆ ಪರಿಷ್ಕೃತ ವಸತಿ ವಿನ್ಯಾಸಕ್ಕೆ ಅನುಮೋದನೆ ಕೋರಿರುತ್ತಾರೆ, ಸದರಿ ನಕ್ಷೆಗೆ ಯೋಜನಾ ಪ್ರಾಧಿಕಾರದ ಕಛೇರಿಯ ಪತ್ರ ಸಂಖ್ಯೆ. ನಯೋ : ಪ್ರಾಚಿ : ಅರಪ : ಕಿನಯೋ : ನಯೋಪ : 4/3 : 1987-88 ದಿನಾಂಕ: 03-03-1988 ರಲ್ಲಿ ವಸತಿ ವಿನ್ಯಾಸಕ್ಕೆ ಅನುಮೋದನೆ ಮಾಡಿರುತ್ತಾರೆ. ಈಗ ಹಾಲಿ ಇರುವ ವಸತಿ ವಿನ್ಯಾಸದಲ್ಲಿ ಉದ್ಯಾನವನವನ್ನು ಉತ್ತಮ ಸ್ಥಳದಲ್ಲಿಯೂ ಹಾಗೂ ನಿವೇಶನಗಳನ್ನು ಅಧಿಕ ವಿದ್ಯುತ್ ವಾಹಕ ಮಾರ್ಗದ ಕೆಳಭಾಗದಲ್ಲಿ ಅಳವಡಿಸಿದೆ ಆದಾಗ್ಯೂ ಈ ವಿನ್ಯಾಸದಲ್ಲಿ ಅಳವಡಿಸಿರುವ ಉದ್ಯಾನವನವನ್ನು ನಗರಸಭೆಗೆ ಹಸ್ತಾಂತರಿಸಿರುವುದಿಲ್ಲ.

ಸದರಿ ಕಡತವು ಸರ್ಕಾರಕ್ಕೆ ಪರಿಶೀಲನೆಗಾಗಿ ಸಲ್ಲಿಸಿದ್ದು, ಮೂಲ ಕಡತವು ಈ ಕಛೇರಿಯಲ್ಲಿ ಲಭ್ಯವಿಲ್ಲದೇ ಇರುವುದರಿಂದ ಎಲ್ಲಾ ದಾಖಲಾತಿಗಳನ್ನು ಅರ್ಜಿದಾರರಿಂದಲೇ ಪಡೆಯಲಾಗಿದೆ. ಅದರಂತೆ ವಿನ್ಯಾಸದಲ್ಲಿರುವ ಉದ್ಯಾನವನವನ್ನು ಅಧಿಕ ವಿದ್ಯುತ್ ವಾಹಕ ಮಾರ್ಗದ ಕೆಳಭಾಗದಲ್ಲಿ ಅಳವಡಿಸಿಕೊಡುವಂತೆ ಕೋರಿರುತ್ತಾರೆ, ಅದರಂತೆ ವಿನ್ಯಾಸವನ್ನು ವಸ್ತುಸ್ಥಿತಿಯಂತೆ ಮಾರ್ಪಾಡು ಮಾಡಲು ಹಾಗೂ ಸಭೆಯ ಅನುಮೋದನೆ ಪಡೆದು ಸಭೆಯ ತೀರ್ಮಾನದಂತೆ ಕ್ರಮ ವಹಿಸಲು ಸಭೆಗೆ ಮಂಡಿಸಿದೆ.

**ನಗರ ಯೋಜನಾ ಸದಸ್ಯರ ಅಭಿಪ್ರಾಯ :**

ಶ್ರೀ ಬಿ. ಎನ್. ವೀರೇಗೌಡ ಬಿನ್ ನಿಂಗೇಗೌಡ ಚಿಕ್ಕೇಮನೆ ಚಿಕ್ಕಮಗಳೂರು ಇವರು ಉಪ್ಪಳ್ಳಿ ಗ್ರಾಮದ ಸರ್ವೆ ನಂ. 139 ರಲ್ಲಿನ ಸುಮಾರು 01 ಎಕರೆ – 18 ಗುಂಟೆ ಜಮೀನಿನಲ್ಲಿ ಈಗಾಗಲೇ ಲೇಔಟ್ ಅನುಮೋದನೆಯಾಗಿರುತ್ತದೆ, ಆದುದರಿಂದ ಸದರಿ ಜಾಗಕ್ಕೆ ಪರಿಷ್ಕೃತ ವಿನ್ಯಾಸ ತಯಾರಿಸಬೇಕಾದರೆ ಲೇಔಟ್‌ಗೆ ಸಂಬಂದಿಸಿದ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮಗಳ ಪ್ರಕಾರ ಅನುಮೋದನೆ ನೀಡಬಹುದಾಗಿರುತ್ತದೆ. ಲಾಗೂ ಸದರಿ ಜಾಗಕ್ಕೆ ಸಂಬಂದಪಟ್ಟ ದಾಖಲಾತಿಗಳನ್ನು ಒದಗಿಸುವಂತೆ ಹಿಂಬರಹ ನೀಡಿ ಅವರಿಂದ ಈ ಕೆಳಕಂಡ ದಾಖಲಾತಿಗಳನ್ನು ಪಡೆಯಬೇಕಾಗಿರುತ್ತದೆ.

1. ಸದರಿ ವಿನ್ಯಾಸದಲ್ಲಿ ನಿವೇಶನಗಳನ್ನು ಯಾರಿಗಾದರು ಮಾರಾಟ ಮಾಡಲಾಗಿದೆಯೇ,
2. ಸದರಿ ಲೇಔಟ್ ಜಾಗದಲ್ಲಿ ಅಭಿವೃದ್ದಿಯಾಗಿದೆಯೇ ಅಥವಾ ಮನೆಗಳ ಅಭಿವೃದ್ದಿಯಾಗಿದೆಯೇ ಎಂಬ ಬಗ್ಗೆ ತಿಳಿಯುವುದು.
3. ಸದರಿ ಜಾಗಕ್ಕೆ ತಹಶೀಲ್ದಾರ್ ರವರ ದೃಡೀಕೃತ ಸರ್ವೆ ಸ್ಕೆಚ್ ಬೇಕಾಗಿರುತ್ತದೆ.

ಹಾಗೂ ಸದರಿ ಜಾಗದ ಬಗ್ಗೆ ಎನ್‌ಕಂಬರೆನ್ಸ್ ಸರ್ಟಿಫಿಕೇಟ್ (Encumberance Certificate) ಪಹಣಿ, ಇತ್ಯಾದಿ ಮುಖ್ಯವಾದ ದಾಖಲಾತಿಗಳು ಬೇಕಾಗಿರುತ್ತದೆ, ಸದರಿ ಜಾಗದ ಬಗ್ಗೆ ದಾಖಲಾತಿಗಳನ್ನು ಪಡೆದು ಸ್ಥಳ ಪರಿಶೀಲಿಸಿ ಹಾಗೂ ಪ್ರಾಧಿಕಾರದ ನಿಯಮಾವಳಿಯಂತೆ ಸಭೆಗೆ ಮಂಡಿಸಿ ಸಭೆಯ ನಿರ್ಣಯದಂತೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ, ಸದರಿ ವಿಷಯವನ್ನು ಸಭೆಗೆ ಮಂಡಿಸಿದೆ.

**ತೀರ್ಮಾನ :**

ವಿಷಯದ ಬಗ್ಗೆ ದೀರ್ಘವಾಗಿ ಚರ್ಚಿಸಲಾಯಿತು, ಯೋಜನಾ ಪಾಧಿಕಾರದಿಂದ ಅನುಮೋದನೆ ಆಗಿರುವ ಈ ಬಡಾವಣೆಯಲ್ಲಿ ಯಾವುದಾದರೂ ಒಂದು ನಿವೇಶನ ಮಾರಾಟ ಆಗಿದ್ದರೂ ಸಹ ಲೇ ಔಟ್ ಬದಲಾವಣೆ ಮಾಡಿ ನೀಡಲು ಅವಕಾಶವಿರುವುಲ್ಲವೆಂದು ನಗರ ಯೋಜನಾ ಸದಸ್ಯರು ತಿಳಿಸಿದರು ಈ ಬಡಾವಣೆ ಅನುಮೋದನೆ ಆಗಿರುವ ಕಡತ ಸಹ ವಿಚಾರಣೆಗಾಗಿ ಸರ್ಕಾರದ ವಶದಲ್ಲಿರುವುದಾಗಿ ತಿಳಿಸಿದರು ಮತ್ತು ಬಹುಮುಖ್ಯವಾಗಿ ಉದ್ಯಾನವನಕ್ಕೆ ಮೀಸಲಿಟ್ಟಿರುವ ಪ್ರದೇಶವನ್ನು ನಿವೇಶನಗಳಿಗೆ ಬದಲಾವಣೆ ಮಾಡಿಕೊಡಲು ಅವಕಾಶವಿರುವುದಿಲ್ಲವೆಂದು ಅಭಿಪ್ರಾಯ ತಿಳಿಸಿದರು ಅದರಂತೆ ಪ್ರಸ್ತಾವನೆಯನ್ನು ತಿರಸ್ಕರಿಸಿ ಹಿಂಬರಹ ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು.

| | |
|---|---|
| ಆಯುಕ್ತರು | ಅಧ್ಯಕ್ಷರು |
| ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ | ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ |
| ಚಿಕ್ಕಮಗಳೂರು. | ಚಿಕ್ಕಮಗಳೂರು. |